ಶುಕ್ರವಾರ, ನವೆಂಬರ್ 8, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಛಠ್ ಪೂಜೆ
ಡೆಹ್ರಾಡೂನ್‌ನಲ್ಲಿ ಛಠ್ ಪೂಜೆ ಅಂಗವಾಗಿ ಮಹಿಳೆಯೊಬ್ಬರು ಗುರುವಾರ ತಮ್ಸಾ ನದಿ ತೀರದಲ್ಲಿ ಸೂರ್ಯದೇವನಲ್ಲಿ ಪ್ರಾರ್ಥಿಸಿದರು




ವಿವಿಧ ಕ್ಷೇತ್ರಗಳಿಗೆ ಶೇ15 ರಿಂದ 25ರಷ್ಟು ಸಹಾಯಧನ • ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಉಲ್ಲೇಖ

ರೈತನೂ ಇನ್ನು 'ಕೃಷಿ ಪ್ರವಾಸೋದ್ಯಮಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ರೈತರು ಇನ್ನು ಮುಂದೆ ಬೇಸಾಯದ ಜೊತೆಗೆ ಪ್ರವಾಸೋದ್ಯಮದ ಮೂಲಕವೂ ಒಂದಷ್ಟು ಆದಾಯವನ್ನು ಗಳಿಸಬಹುದಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರ ವಿನೂತನ 'ಕೃಷಿ ಪ್ರವಾಸೋದ್ಯಮ'ವನ್ನು ಪರಿಚಯಿಸಲಿದೆ.



ರೈತರು ತಮ್ಮ ಹೊಲ ಅಥವಾ ತೋಟಗಳಲ್ಲಿ ಕೃಷಿ ಆಸಕ್ತ ಪ್ರವಾಸಿಗರಿಗೆ ಕೃಷಿ ಚಟುವಟಿಕೆಗಳನ್ನು ಪರಿಚಯಿಸುವ ಜತೆಗೆ, ಆತಿಥ್ಯ ನೀಡಬಹುದು. ಊಟ, ತಿಂಡಿ, ವಾಸ್ತವ್ಯಕ್ಕೆ ದರವನ್ನೂ ನಿಗದಿ ಮಾಡಬಹುದು. ಹೊಸ ಪ್ರವಾಸೋದ್ಯಮ ನೀತಿಯು ಕೃಷಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಹಲವು ಅಂಶಗಳನ್ನು ಒಳಗೊಂಡಿದೆ.

ಕೃಷಿ ಪ್ರವಾಸೋದ್ಯಮ ನಡೆಸುವವರು ಸ್ವತಃ ರೈತರೇ ಆಗಿರಬೇಕು. ಅಲ್ಲದೇ, ಬೇಸಾಯ ನಡೆಸುತ್ತಿರಬೇಕು. ತೋಟ, ಗಾರ್ಡನ್, ಮೀನು ಸಾಕಣೆ ಕೊಳ, ರೇಷ್ಮೆ, ಪುಷ್ಪೋದ್ಯಮ ಅಥವಾ ಪಶು ಸಂಗೋಪನೆ ನಡೆಸುತ್ತಿರಬೇಕು. ಅತಿಥಿಗಳಾಗಿ ಬರುವವರಿಗೆ ಉಳಿದುಕೊಳ್ಳಲು 12 ಹಾಸಿಗೆಗಳ ಸಾಮರ್ಥ್ಯದ 6 ಕೊಠಡಿಗಳನ್ನು ಹೊಂದಿರಬೇಕು. ವಾಸ್ತವ್ಯದ ಕಟ್ಟಡವು ಒಟ್ಟು ಕೃಷಿ ಭೂಮಿಯ ಶೇ 10ರಷ್ಟನ್ನು ಮೀರಬಾರದು. ಆದರೆ, ಕೃಷಿ ಪ್ರವಾಸೋದ್ಯಮ ನಡೆಸುವವರಿಗೆ ಹೆಚ್ಚುವರಿಯಾಗಿ ವಿದ್ಯುತ್ ಮತ್ತು ನೀರಿನ ಶುಲ್ಕ ವಿಧಿಸುವುದಿಲ್ಲ.

ಕೃಷಿ ಪ್ರವಾಸೋದ್ಯಮ ಯೋಜನೆಯಡಿ ರೈತ, ಕೃಷಿ ಉತ್ಪಾದನಾ ಸಂಘಟನೆಗಳು ಅಥವಾ ಕೃಷಿ ಉತ್ಪನ್ನಗಳ ಉತ್ಪಾದನಾ ಸೊಸೈಟಿಗಳಿಗೆ ಸಹಾಯಧನ ನೀಡಲಾಗುತ್ತದೆ.

ಸಹಾಯಧನದ ಜತೆಗೆ ವಿನಾಯಿತಿ: ಹೊಸ ಬಗೆಯ ಪ್ರವಾಸೋದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಹಾಯ ಧನ, ಮುದ್ರಾಂಕ ಶುಲ್ಕ ವಿನಾಯಿತಿ, ತೆರಿಗೆ ವಿನಾಯಿತಿ ಸೇರಿ ವಿವಿಧ ರೀತಿಯ ಪ್ರೋತ್ಸಾಹಗಳನ್ನು ನೀತಿಯು ಒಳಗೊಂಡಿದೆ.

ಅದರಲ್ಲೂ ವಿಶೇಷವಾಗಿ ಸಾಹಸ, ಕ್ಯಾರವಾನ್, ಕ್ಯಾರವಾನ್ ಪಾರ್ಕ್, ಕ್ರೂಸ್, ಹೌಸ್ ಬೋಟ್, ವೆಲ್‌ನೆಸ್ ಸೆಂಟರ್ ಶೇ 25ರಷ್ಟು, ಪ್ರವಾಸೋದ್ಯಮ ಉದ್ದೇಶದ ಸಣ್ಣ ಐಷಾರಾಮಿ ಹೋಟೆಲ್‌ಗಳಿಗೆ ಶೇ15ರಷ್ಟು ಸಹಾಯಧನವನ್ನು ಪ್ರವಾಸೋದ್ಯಮ ನೀತಿಯಲ್ಲಿ ಪ್ರಕಟಿಸಲಾಗಿದೆ.

ಸಾಹಸ ಪ್ರವಾಸೋದ್ಯಮ ಯೋಜನೆಯಲ್ಲಿ ಕನಿಷ್ಠ ₹25 ಲಕ್ಷ ಗರಿಷ್ಠ ₹2 ಕೋಟಿ, ಕೃಷಿ ಪ್ರವಾಸೋದ್ಯಮದಲ್ಲಿ ಕನಿಷ್ಠ ₹10 ಲಕ್ಷ ಗರಿಷ್ಠ ₹50 ಲಕ್ಷ, ಕ್ಯಾರವಾನ್ ಪಾರ್ಕ್ ಪ್ರಾಜೆಕ್ಟ್‌ನಲ್ಲಿ ಕನಿಷ್ಠ ₹25 ಲಕ್ಷ ಗರಿಷ್ಠ ₹2 ಕೋಟಿ, ಕ್ರೂಸ್ ಟೂರಿಸಂನಲ್ಲಿ ಕನಿಷ್ಠ ₹25 ಲಕ್ಷ ಗರಿಷ್ಠ ₹1 ಕೋಟಿ, ವೆಲ್‌ನೆಸ್ ಸೆಂಟರ್ ₹2 ಕೋಟಿ, ಐಷಾರಾಮಿ ಹೋಟೆಲ್‌ಗಳು (ಒನ್ ಸ್ಟಾರ್‌ನಿಂದ ತ್ರೀಸ್ಟಾರ್‌ವರೆಗೆ) ₹10 ಕೋಟಿ ಮಿತಿಯಲ್ಲಿ ಹೂಡಿಕೆ ಮಾಡಿದರೆ ಸಹಾಯಧನ ಸಿಗುತ್ತದೆ.

ಆದರೆ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿ ಬಂಡವಾಳದ ಮೇಲಿನ ಸಹಾಯಧನ ಅನ್ವಯವಾಗುವುದಿಲ್ಲ.

ಶೇ 50ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ: ಹೊಸ ಪ್ರವಾಸೋದ್ಯಮ ಯೋಜನೆಗಳನ್ನು ಆರಂಭಿಸುವವರು ಮತ್ತು ವಿಸ್ತರಣೆ ಮಾಡುವವರಿಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಸಿಗಲಿದೆ.

ರಾಜ್ಯ ಸರ್ಕಾರ, ರಾಜ್ಯ ಹಣಕಾಸು ನಿಗಮ, ರಾಷ್ಟ್ರ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕ್‌ಗಳು, ಗ್ರಾಮೀಣ ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳಲ್ಲಿ ಪಡೆಯುವಾಗ, ಸಾಲದ ಒಪ್ಪಂದ, ಸಾಲ ಪತ್ರ, ಅಡಮಾನ ಪತ್ರಗಳಿಗೆ ಮುದ್ರಾಂಕ ಶುಲ್ಕದಲ್ಲಿ ಶೇ50ರಷ್ಟು ವಿನಾಯಿತಿ ನೀಡಲಾಗುವುದು. ಈ ವಿನಾಯಿತಿ ಗುತ್ತಿಗೆ ಪತ್ರ, ಗುತ್ತಿಗೆ ಮತ್ತು ಮಾರಾಟ ಪತ್ರ, ಉಪಗುತ್ತಿಗೆ, ಶುದ್ಧಕ್ರಮ ಪತ್ರಗಳಿಗೂ ಅನ್ವಯವಾಗುತ್ತದೆ.

ನೋಂದಣಿ ಶುಲ್ಕವನ್ನು ಶೇ100ರಷ್ಟು ಮರುಪಾವತಿ ಮಾಡಲಾಗುತ್ತದೆ. ಪ್ರವಾಸೋದ್ಯಮ ಯೋಜನೆಗಾಗಿ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಿದರೆ ಪರಿವರ್ತನಾ ಶುಲ್ಕವನ್ನೂ ಮರುಪಾವತಿಸಲಾಗುವುದು.

ಹೋಂ ಸ್ಟೇಗಳಿಗೆ ಉತ್ತೇಜನ

- ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುವ ಹೋಂ ಸ್ಟೇಗಳಿಗೆ ಹಲವು ರೀತಿ ರಿಯಾಯಿತಿಗಳನ್ನು ಪ್ರಕಟಿಸಲಾಗಿದೆ
- ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಗೃಹ ಬಳಕೆಯ ಆಧಾರದಲ್ಲೇ ವಿಧಿಸಲಾಗುವುದು. ವಾಣಿಜ್ಯ ದರವನ್ನು ವಿಧಿಸುವುದಿಲ್ಲ
- ಸ್ವತ್ತು ತೆರಿಗೆಯನ್ನೂ ವಾಣಿಜ್ಯ ದರದಲ್ಲಿ ವಿಧಿಸದೇ, ಮನೆಗಳಿಗೆ ನಿಗದಿ ಮಾಡುವ ದರದಲ್ಲೇ ಪಾವತಿಸಲು ಅವಕಾಶ
- ಹೋಂ ಸ್ಟೇ ವ್ಯಾಖ್ಯಾನಕ್ಕೆ ಅನುಗುಣವಾಗಿ ವಾಸ್ತವ್ಯದ ಕೊಠಡಿಗಳಿಗಾಗಿ ಭೂಬದಲಾವಣೆ ಮಾಡುವ ಅಗತ್ಯವೂ ಇಲ್ಲ

ಮಹಿಳೆ ಮತ್ತು ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಹೆಚ್ಚಿನ ಸಹಾಯಧನ

ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಅಂಗವಿಕಲರು ಪ್ರವಾಸೋದ್ಯಮ ಯೋಜನೆಗಳನ್ನು ನಡೆಸಿದರೆ ಶೇ 5ರಷ್ಟು ಹೆಚ್ಚುವರಿ ಸಹಾಯಧನ ನೀಡಲಾಗುವುದು.

ಅಲ್ಲದೇ, ಹೋಟೆಲ್ ಯೋಜನೆಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶದ ಬೀದರ್, ಬಳ್ಳಾರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ಯಾದಗಿರಿ, ಕಿತ್ತೂರು ಕರ್ನಾಟಕದ ಪ್ರದೇಶದ ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಆರಂಭಿಸಿದರೆ ಹೆಚ್ಚುವರಿಯಾಗಿ ಶೇ 5ರಷ್ಟು ಸಹಾಯಧನ ಸಿಗಲಿದೆ.


ಸುದ್ದಿ 2 ನಿಮಿಷ

ಸಾಹಿತ್ಯ ಸಮ್ಮೇಳನ: ಸರ್ವಾಧ್ಯಕ್ಷತೆಗೆ ತರಳಬಾಳು ಶ್ರೀ ಹೆಸರು ಶಿಫಾರಸು

ಸಿರಿಗೆರೆ (ಚಿತ್ರದುರ್ಗ): ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಗೆ ಸಿರಿಗೆರೆಯ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸೇರಿ ಮೂವರ ಹೆಸರನ್ನು ಕನ್ನಡ ಸಾಹಿತ್ಯ ಪರಿಷತ್ ಚಿತ್ರದುರ್ಗ ಜಿಲ್ಲಾ ಘಟಕವು ಶಿಫಾರಸು ಮಾಡಿದೆ.

ಈ ಕುರಿತು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಂ. ಶಿವಸ್ವಾಮಿ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. 'ಜಿಲ್ಲೆಯಿಂದ ಮೂವರ ಹೆಸರುಗಳನ್ನು ರಾಜ್ಯ ಸಮಿತಿಗೆ ಕಳುಹಿಸಲಾಗಿದೆ. ಸಾಹಿತಿ ಮತ್ತು ಇತಿಹಾಸಕಾರ ಪ್ರೊ.ಬಿ.ರಾಜಶೇಖರಪ್ಪ ಹಾಗೂ ಲೇಖಕ ಬಿ.ಎಲ್. ವೇಣು ಅವರ ಹೆಸರುಗಳೂ ಪಟ್ಟಿಯಲ್ಲಿವೆ' ಎಂದು ಹೇಳಿದ್ದಾರೆ.

'ಮಧ್ಯ ಕರ್ನಾಟಕದಲ್ಲಿ ನೂರಾರು ಕೆರೆಗಳಿಗೆ ತುಂಗಭದ್ರಾ ನದಿ ನೀರು ಹರಿಸಲು ಸ್ವಾಮೀಜಿ ಅವಿರತವಾಗಿ ಶ್ರಮಿಸಿದ್ದಾರೆ. ಅಲ್ಲದೇ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲೂ ಅನನ್ಯ ಸೇವೆ ಸಲ್ಲಿಸುತ್ತಿದ್ದಾರೆ. ಆದ್ದರಿಂದ ತರಳಬಾಳು ಶ್ರೀ ಹೆಸರು ಶಿಫಾರಸು ಮಾಡಲಾಗಿದೆ' ಎಂದು ತಿಳಿಸಿದ್ದಾರೆ.



ಬೇಲೆಕೇರಿ: ಸಿಬಿಐಗೆ ನೋಟಿಸ್

ಬೆಂಗಳೂರು: ಬೇಲೆಕೇರಿ ಬಂದರಿನಲ್ಲಿ ಸಂಗ್ರಹಿಸಿ ಇರಿಸಲಾಗಿದ್ದ ಕಬ್ಬಿಣದ ಅದಿರು ಕದ್ದು, ರಫ್ತು ಮಾಡಿದ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಶಿಕ್ಷೆ ಮತ್ತು ದಂಡದ ತೀರ್ಪನ್ನು ರದ್ದುಗೊಳಿಸುವಂತೆ ಕೋರಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್, ಉದ್ಯಮಿಗಳಾದ ಸ್ವಸ್ತಿಕ್ ನಾಗರಾಜ್, ಕೆ.ವಿ.ಎನ್. ಗೋವಿಂದರಾಜ್ ಮತ್ತು ಚೇತನ್ ಶಾ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನಾಲ್ವರೂ ಅಪರಾಧಿಗಳು ಸಲ್ಲಿಸಿದ್ದ ಅರ್ಜಿಗಳನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಸಿ.ವಿ. ನಾಗೇಶ್ ಮತ್ತು ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಹಾಜರಿದ್ದರು. ಕೆಲಕಾಲ ಇಬ್ಬರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಿತು.

ರೈಲು ಸಂಚಾರದಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ದೊಡ್ಡಬೆಲೆ-ನಿಡವಂದ ನಿಲ್ದಾಣಗಳ ನಡುವೆ ನಿರ್ವಹಣೆ ಮತ್ತು ಮೂಲಸೌಕರ್ಯ ನವೀಕರಣದ ಕಾಮಗಾರಿ ಹಮ್ಮಿಕೊಂಡಿರುವುದರಿಂದ ರೈಲು ಸಂಚಾರದಲ್ಲಿ ಬದಲಾವಣೆ ಉಂಟಾಗಲಿದೆ.



ನವೆಂಬರ್ 10ರಂದು ಹುಬ್ಬಳ್ಳಿಯಿಂದ ಹೊರಡುವ ಎಸ್‌ಎಸ್‌ಎಸ್ ಹುಬ್ಬಳ್ಳಿ- ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲನ್ನು ಮಾರ್ಗ ಮಧ್ಯದಲ್ಲಿ 40 ನಿಮಿಷ ನಿಯಂತ್ರಿಸಲಾಗುತ್ತದೆ. ಕೆಎಸ್‌ಆರ್ ಬೆಂಗಳೂರು- ಎಸ್‌ಎಸ್‌ಎಸ್ ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ ರೈಲು 2 ಗಂಟೆ ತಡವಾಗಿ ಹೊರಡಲಿದೆ. ಮಾರ್ಗ ಮಧ್ಯೆ 40 ನಿಮಿಷ ನಿಯಂತ್ರಿಸಲಾಗುತ್ತದೆ. ನ. 8 ಮತ್ತು 11ರಂದು ಕೆಎಸ್‌ಆರ್ ಬೆಂಗಳೂರು-ಎಸ್‌ಎಸ್‌ಎಸ್ ಹುಬ್ಬಳ್ಳಿ ಎಕ್ಸ್‌ಪ್ರೆಸ್ ರೈಲು ಬೆಂಗಳೂರಿನಿಂದ 90 ನಿಮಿಷ ತಡವಾಗಿ ಹೊರಡಲಿದೆ. ಮಾರ್ಗ ಮಧ್ಯೆ 40 ನಿಮಿಷ ನಿಯಂತ್ರಿಸಲಾಗುತ್ತದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹೊಗೆ ತಪಾಸಣೆಗೆ ಕ್ಯೂಆರ್ ಕೋಡ್

ಹೊಸ ಸಾಫ್ಟ್‌ವೇರ್ ಅಳವಡಿಸುತ್ತಿರುವ ಸಾರಿಗೆ ಇಲಾಖೆ • ವಾಹನಗಳ ಜಿಯೊ ಫೆನ್ಸಿಂಗ್‌ಗೆ ಕ್ರಮ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನಗಳ ಹೊಗೆ ತಪಾಸಣೆಗೆ ಸಂಬಂಧಿಸಿದಂತೆ ಹಳೆ ಸಾಫ್ಟ್‌ವೇರ್ ಅನ್ನು ಬದಲಾಯಿಸಲು ಸಾರಿಗೆ ಇಲಾಖೆ ನಿರ್ಧರಿಸಿದೆ. 'ಹೊಗೆ ಪರೀಕ್ಷೆ' ಪ್ರಮಾಣಪತ್ರದೊಂದಿಗೆ ಕ್ಯೂಆರ್ ಕೋಡ್ ಕೂಡ ಇರಲಿದ್ದು, ದೇಶದ ಯಾವುದೇ ಮೂಲೆಯಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿದರೆ 'ಎಮಿಷನ್' ಪರೀಕ್ಷೆ ಸಹಿತ ಎಲ್ಲ ವಿವರಗಳು ಸಿಗಲಿವೆ.

ಟೆಕ್ ಕಮರ್ಶಿಯಲ್ ಟೆಂಡರ್ ಪಡೆದಿರುವ 'ಮೇರು ಇನ್ಫೋ ಸೊಲ್ಯುಷನ್' ಹೊಸ ತಂತ್ರಜ್ಞಾನವನ್ನು ಒಳಗೊಂಡಿರುವ ಸಾಫ್ಟ್‌ವೇರ್ ಅನ್ನು ಅಳವಡಿಸಲಿದೆ. ರಾಜ್ಯದಲ್ಲಿ ಇರುವ ಎಲ್ಲ 2,700 ಹೊಗೆ ತಪಾಸಣಾ ಕೇಂದ್ರಗಳ ಮೇಲ್ವಿಚಾರಕರಿಗೆ ಹೊಸ ಸಾಫ್ಟ್‌ವೇರ್ ಬಗ್ಗೆ ಸಾರಿಗೆ ಇಲಾಖೆಯು ತರಬೇತಿ ನೀಡಲಿದೆ.

ಎನ್‌ಐಸಿಗೆ ಪತ್ರ: 'ವಾಹನ್–4 ಜೊತೆಗೆ ವಾಯು ಮಾಲಿನ್ಯ ತಪಾಸಣೆಯ ವಿವರವನ್ನು ಸಂಯೋಜನೆ ಮಾಡಲು ಹಿಂದಿನ ಸಾಫ್ಟ್‌ವೇರ್‌ನಲ್ಲಿ ಸಾಧ್ಯವಿರಲಿಲ್ಲ. ಹೊಸ ಸಾಫ್ಟ್‌ವೇರ್‌ನಲ್ಲಿ ಈ ಅವಕಾಶ ಇದೆ. ಅದಕ್ಕಾಗಿ ಹೊಸ ಸಾಫ್ಟ್‌ವೇರ್ ಅನ್ನು ವಾಹನ್–4 ಜೊತೆಗೆ ಸಂಯೋಜನೆ ಮಾಡಲು ರಾಷ್ಟ್ರೀಯ ಮಾಹಿತಿ ಕೇಂದ್ರಕ್ಕೆ (ಎನ್‌ಐಸಿ) ಪತ್ರ ಬರೆಯಲಾಗಿದೆ' ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.



ವಾಹನ್–4ಗೆ ಸಂಯೋಜನೆಗೊಂಡರೆ ವಾಹನದ ನೋಂದಣಿ ಸಂಖ್ಯೆಯನ್ನು ನಮೂದಿಸಿದ ಕೂಡಲೇ ಎಲ್ಲ ವಿವರಗಳು ಸಿಕ್ಕಿಬಿಡುತ್ತವೆ. ವಾಯು ಮಾಲಿನ್ಯ ತಪಾಸಣೆ ಯಾವಾಗ ಮಾಡಲಾಗಿದೆ? ಮುಂದೆ ಯಾವಾಗ ಮಾಡಬೇಕು? ಎಂಜಿನ್ ಸ್ಥಿತಿ ಏನು? ವಾಹನಕ್ಕೆ ಎಷ್ಟು ವರ್ಷಗಳಾದವು? ಮಾಲೀಕರು ಯಾರು? ಅವರ ದೂರವಾಣಿ ಸಂಖ್ಯೆ ಸಹಿತ ಎಲ್ಲ ವಿವರಗಳು ಲಭ್ಯವಾಗುತ್ತವೆ. ಹೊಗೆ ತಪಾಸಣೆ ನಡೆಸಿದಾಗ ಅದರ ವಿವರಗಳೂ ಸಾಫ್ಟ್‌ವೇರ್‌ನಲ್ಲಿ ದಾಖಲಾಗುತ್ತವೆ.

ಜಿಯೊ ಫೆನ್ಸಿಂಗ್: ಇಲ್ಲಿಯವರೆಗೆ ಮಾಹಿತಿಗಳನ್ನು ಆಯಾ ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳ ಸಿಬ್ಬಂದಿ ದಾಖಲು ಮಾಡುತ್ತಿದ್ದರು. ಇದರಿಂದ ತಪ್ಪು ಮಾಹಿತಿ ನುಸುಳುವ ಸಾಧ್ಯತೆಗಳೂ ಇದ್ದವು. ವಾಹನಗಳನ್ನು ತಪಾಸಣೆ ಮಾಡದೆಯೇ 'ಹೊಗೆ' ತಪಾಸಣೆ ನಡೆಸಲಾಗಿದೆ ಎಂದು ನಮೂದಿಸುವ, ವಾಹನ ಸದೃಢವಾಗಿದೆ ಎಂದು ಪ್ರಮಾಣಪತ್ರ ನೀಡುವ ಪ್ರಮಾದಗಳು ನಡೆಯುವ ಅಪಾಯಗಳೂ ಇದ್ದವು. ಹೊಸ ಸಾಫ್ಟ್‌ವೇರ್‌ನಲ್ಲಿ ಇದಕ್ಕೆಲ್ಲ ಅವಕಾಶ ಇರುವುದಿಲ್ಲ.

ವಾಹನಗಳನ್ನು ಜಿಯೊ ಫೆನ್ಸಿಂಗ್ ಮಾಡುವುದರಿಂದ ಹೊಗೆ ತಪಾಸಣಾ ಕೇಂದ್ರಗಳಿಗೆ ವಾಹನಗಳು ಬರಲೇಬೇಕು. ಅಲ್ಲಿ ನಿಗದಿತ ತಪಾಸಣೆಗಳನ್ನು ಮಾಡಲೇಬೇಕಾಗುತ್ತದೆ. ಇಲ್ಲದೇ ಇದ್ದರೆ ಸಾಫ್ಟ್‌ವೇರ್‌ನಲ್ಲಿ ಮಾಹಿತಿ ದಾಖಲಿಸಲು ಅವಕಾಶ ದೊರೆಯುವುದಿಲ್ಲ ಎಂದು ಜ್ಞಾನೇಂದ್ರ ಕುಮಾರ್ ಸ್ಪಷ್ಟಪಡಿಸಿದರು.

ಒಂದು ತಿಂಗಳಲ್ಲಿ ಆರಂಭ

'ಸರ್ವರ್ ಅಳವಡಿಸಲಾಗಿದೆ. ಇಂಟರ್‌ನೆಟ್ ಇದೆ. ಸಾಫ್ಟ್‌ವೇರ್ ಪರೀಕ್ಷಾ ಹಂತದಲ್ಲಿದೆ. ಎನ್‌ಐಸಿಯಿಂದ ವಾಹನ್–4ಗೆ ಸಂಯೋಜನೆಯಾದ ಕೂಡಲೇ ಹೊಸ ಸಾಫ್ಟ್‌ವೇರ್ ಬಳಕೆಗೆ ಲಭ್ಯವಾಗಲಿದೆ. ಒಂದು ತಿಂಗಳ ಒಳಗೆ ಈ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡು ತಪಾಸಣೆ ಆರಂಭಗೊಳ್ಳಲಿದೆ' ಎಂದು ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ತಿಳಿಸಿದರು.



ಜ್ಞಾನೇಂದ್ರ ಕುಮಾರ್

ಪೊಲ್ಯೂಶನ್ ಅಂಡರ್ ಕಂಟ್ರೋಲ್ ಸೆಂಟರ್ (ಪಿಯುಸಿಸಿ) ಎಂದು ವಾಯು ಮಾಲಿನ್ಯ ತಪಾಸಣೆ ಕೇಂದ್ರಗಳನ್ನು ಕರೆಯಲಾಗುತ್ತದೆ. ವಾಹನಗಳು ಉಗುಳುವ ಹೊಗೆಯ ಪ್ರಮಾಣ ಆಧರಿಸಿ ಅವುಗಳ ಎಂಜಿನ್ ಸ್ಥಿತಿ ತಿಳಿಯಲಾಗುತ್ತದೆ. ಸದೃಢತಾ ಅವಧಿ ಮುಗಿದಿರುವ ವಾಹನಗಳನ್ನು ಮುಂದೆ ಎಷ್ಟು ಸಮಯ ಓಡಿಸಬಹುದು ಎಂಬುದು ಕೂಡ ಹೊಗೆ ತಪಾಸಣೆ ಮಾಡಿದ ಕೂಡಲೇ ಸಾಫ್ಟ್‌ವೇರ್‌ನಲ್ಲಿ ನಮೂದಾಗುತ್ತದೆ. ಬಿ1, ಬಿ2, ಬಿ3 ಹಂತದ ವಾಹನಗಳಿಗೆ ಆರು ತಿಂಗಳು ಅವಕಾಶ, ಬಿ4, ಬಿ5 ಹಂತದಲ್ಲಿರುವ ವಾಹನಗಳಿಗೆ ಒಂದು ವರ್ಷ ಅವಕಾಶ ಸಿಗಲಿದೆ ಎಂದು ಮಾಹಿತಿ ನೀಡಿದರು.

ಸರ್ಕಾರಿ ಕಚೇರಿ: ತಂಬಾಕು ನಿಷೇಧ

ಬೆಂಗಳೂರು: ಸರ್ಕಾರಿ ಕಚೇರಿ ಮತ್ತು ಆವರಣಗಳಲ್ಲಿ ಧೂಮಪಾನ ಸೇರಿದಂತೆ ಯಾವುದೇ ತಂಬಾಕು ಉತ್ಪನ್ನಗಳ ಸೇವನೆಯನ್ನು ಸಂಪೂರ್ಣ ನಿಷೇಧಿಸಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಈ ಸಂಬಂಧ ಎಚ್ಚರಿಕೆಯ ಫಲಕವನ್ನು ಕಚೇರಿಯ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಬೇಕು ಎಂದೂ ಸುತ್ತೋಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ನಿರ್ದೇಶನ ನೀಡಿದೆ.ಸರ್ಕಾರಿ ನೌಕರರು ಈ ಸೂಚನೆಯನ್ನು ಉಲ್ಲಂಘಿಸಿ ಕಚೇರಿಯಲ್ಲಿ ಅಥವಾ ಕಚೇರಿಯ ಆವರಣದಲ್ಲಿ ಧೂಮಪಾನ ಮಾಡುವುದು ಅಥವಾ ಯಾವುದೇ ತಂಬಾಕು ಉತ್ಪನ್ನವನ್ನು (ಗುಟ್ಕಾ, ಪಾನ್ ಮಸಾಲ, ಹೊಗೆಸೊಪ್ಪು ಇತ್ಯಾದಿ) ಬಳಸುವುದು ಕಂಡುಬಂದರೆ ಅಂಥವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದೂ ಎಚ್ಚರಿಕೆ ನೀಡಲಾಗಿದೆ.

ನೌಕರರ ಆರೋಗ್ಯದ ಹಿತದೃಷ್ಟಿಯಿಂದ ಹಾಗೂ ಪರೋಕ್ಷ ಧೂಮಪಾನದಿಂದ ಸಾರ್ವಜನಿಕರನ್ನು ಹಾಗೂ ಸರ್ಕಾರಿ ಸಿಬ್ಬಂದಿಯನ್ನು ರಕ್ಷಿಸುವ ಉದ್ದೇಶದಿಂದ ಈ ಸುತ್ತೋಲೆ ಹೊರಡಿಸಲಾಗಿದೆ ಎಂದೂ ಡಿಪಿಎಆರ್ ಹೇಳಿದೆ.

ಬೆಂಗಳೂರು ಸೇರಿ 19 ಕಡೆ ಇ.ಡಿ ಶೋಧ

ನವದೆಹಲಿ(ಪಿಟಿಐ): 'ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ' (ಎಫ್‌ಇಎಂಎ) ನಿಯಮಗಳನ್ನು ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿ, ಇ–ಕಾಮರ್ಸ್ ವೇದಿಕೆಗಳಾದ ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ಮೂಲಕ ಕಾರ್ಯಾಚರಣೆ ನಡೆಸುತ್ತಿರುವ ಪ್ರಮುಖ ಮಾರಾಟಗಾರರಿಗೆ ಸಂಬಂಧಪಟ್ಟ ಬೆಂಗಳೂರು ಸೇರಿದಂತೆ 19 ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ಶೋಧ ನಡೆಸಿದೆ.

ಬೆಂಗಳೂರು ಜೊತೆಗೆ ದೆಹಲಿ, ಗುರುಗ್ರಾಮ, ಪಂಚಕುಲ (ಹರಿಯಾಣ), ಹೈದರಾಬಾದ್‌ಗಳಲ್ಲಿರುವ ಈ 'ಪ್ರಮುಖ ಮಾರಾಟಗಾರರಿಗೆ' ಸೇರಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಆರು ಜನ ಮಾರಾಟಗಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿರುವ ಇ.ಡಿ ಅಧಿಕಾರಿಗಳು ಕೆಲವೆಡೆ ದಾಖಲೆಗಳ ನಕಲು ತೆಗೆದುಕೊಂಡಿದ್ದಾರೆ ಎಂದೂ ತಿಳಿಸಿವೆ.

'ಈ ಎರಡು ಪ್ರಮುಖ ಕಂಪನಿಗಳು ತಮ್ಮ ಮೂಲಕ ಮಾರಾಟವಾಗುವ ಸರಕುಗಳ ಮಾರಾಟ ದರಗಳ ಮೇಲೆ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಪ್ರಭಾವ ಬೀರುತ್ತಿವೆ. ತಮ್ಮ ಮೂಲಕ ವಸ್ತುಗಳನ್ನು ಮಾರಾಟ ಮಾಡುವ ಎಲ್ಲರಿಗೂ ಸಮಾನ ಅವಕಾಶ ಒದಗಿಸುವುದಿಲ್ಲ. ಆ ಮೂಲಕ ವಿದೇಶಿ ನೇರ ಹೂಡಿಕೆ ನಿಯಮಗಳನ್ನು ಉಲ್ಲಂಘಿಸುತ್ತಿವೆ' ಎಂಬ ಬಗ್ಗೆ ಇ.ಡಿಗೆ ವ್ಯಾಪಕ ದೂರುಗಳು ಬಂದಿದ್ದವು. ಈ ಕಾರಣಕ್ಕೆ ಇ.ಡಿ ಶೋಧ ಕಾರ್ಯ ಕೈಗೊಂಡಿತ್ತು ಎಂದು ಮೂಲಗಳು ತಿಳಿಸಿವೆ.

ಇ.ಡಿ ಕೈಗೊಂಡ ಈ ಕ್ರಮವನ್ನು ಅಖಿಲ ಭಾರತ ವರ್ತಕರ ಮಹಾ ಒಕ್ಕೂಟ(ಸಿಎಐಟಿ) ಸ್ವಾಗತಿಸಿದೆ.

ಯುಜಿಸಿ–ಎನ್‌ಇಟಿ: 'ಆಯುರ್ವೇದ–ಜೀವವಿಜ್ಞಾನ' ಸೇರ್ಪಡೆ

ನವದೆಹಲಿ: ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಇದೇ ಮೊದಲ ಬಾರಿಗೆ 'ಯುಜಿಸಿ–ಎನ್‌ಇಟಿ' ಪರೀಕ್ಷೆಯಲ್ಲಿ 'ಆಯುರ್ವೇದ–ಜೀವವಿಜ್ಞಾನ' ವಿಷಯವನ್ನು ಸೇರ್ಪಡೆ ಮಾಡಿದೆ. ತಜ್ಞರ ಸಮಿತಿಯ ಶಿಫಾರಸಿನಂತೆ, ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಯುಜಿಸಿ ಅಧ್ಯಕ್ಷ ಎಂ.ಜಗದೀಶಕುಮಾರ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ವಿರುದ್ಧ 'ಅಹಿಂದ' ಕಹಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜಕೀಯ ವಿರೋಧಿಗಳನ್ನು ವಿನಾಕಾರಣ ಹಣಿದು ಸರ್ಕಾರಗಳನ್ನು ಅಸ್ಥಿರಗೊಳಿಸುವ ಮೂಲಕ ಬಿಜೆಪಿ ದಗಲ್‌ಬಾಜಿ ರಾಜಕಾರಣ ನಡೆಸುತ್ತಿದೆ' ಎಂದು ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಟೀಕಿಸಿದರು.

ಜಿಎಸ್‌ಟಿ ಪಾಲು ನೀಡದೆ ಕೇಂದ್ರ ಸರ್ಕಾರ ವಂಚಿಸುತ್ತಿದೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೇಂದ್ರ ತನಿಖಾ ಸಂಸ್ಥೆಗಳನ್ನು ಬಿಜೆಪಿ ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ಹಾಗೂ ಅಹಿಂದ ಸಂಘಟನೆಗಳ ಆಶ್ರಯದಲ್ಲಿ ಗುರುವಾರ ಇಲ್ಲಿ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ನಮ್ಮ ದೇಶದ ಜಿಎಸ್‌ಟಿ ವ್ಯವಸ್ಥೆ ಅವೈಜ್ಞಾನಿಕ. ಯಾವ ದೇಶದಲ್ಲೂ ಜನರು ಶೇ 30ರಷ್ಟು ತೆರಿಗೆ ಪಾವತಿಸುತ್ತಿಲ್ಲ. ನಮ್ಮಲ್ಲಿ ತೆರಿಗೆ ಹೆಸರಿನಲ್ಲಿ ಜನರ ಲೂಟಿ ಮಾಡಲಾಗುತ್ತಿದೆ' ಎಂದರು. 'ರಾಜ್ಯಗಳಿಗೆ ಆಗುತ್ತಿರುವ ಆರ್ಥಿಕ ಅನ್ಯಾಯವನ್ನು ಕೇಂದ್ರ ಸರ್ಕಾರ ಸರಿಪಡಿಸಬೇಕು. ಏಕಮುಖ ಆಳ್ವಿಕೆ ನಿಲ್ಲಿಸಬೇಕು' ಎಂದು ಆಗ್ರಹಿಸಿದರು.



ಸಭೆಯಲ್ಲಿ ಕಾಳೇಗೌಡ ನಾಗವಾರ ಮಾತನಾಡಿದರು. ಬಂಜಗೆರೆ ಜಯಪ್ರಕಾಶ್, ಕೆ.ಎಸ್.ಶಿವರಾಮು, ಡಿ. ತಿಮ್ಮಯ್ಯ, ಎಲ್. ಹನುಮಂತಯ್ಯ, ಲೀಲಾ ಸಂಪಿಗೆ ಭಾಗವಹಿಸಿದ್ದರು

ಸಿದ್ದರಾಮಯ್ಯ ವಿರುದ್ಧ ಕೇಂದ್ರ ನಡೆಸುತ್ತಿರುವ ಷಡ್ಯಂತ್ರವನ್ನು ಕೂಡಲೇ ನಿಲ್ಲಿಸಬೇಕು ಎಂದು ಸಾಹಿತಿಗಳಾದ ಎಸ್.ಜಿ.ಸಿದ್ದರಾಮಯ್ಯ, ಕಾಳೇಗೌಡ ನಾಗವಾರ, ವಿಧಾನ ಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಮಹಿಳಾಪರ ಹೋರಾಟಗಾರ್ತಿ ಲೀಲಾ ಸಂಪಿಗೆ ಮತ್ತಿತರರು ಆಗ್ರಹಿಸಿದರು.

ಬಳಿಕ, ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ನೇತೃತ್ವದಲ್ಲಿ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸಭೆಯಲ್ಲಿ ಕೇಳಿದ್ದು...

ದೆಹಲಿ ಮತ್ತು ಜಾರ್ಖಂಡ್ ಸರ್ಕಾರಗಳ ವಿರುದ್ಧ ಕೇಂದ್ರ ಷಡ್ಯಂತ್ರ ನಡೆಸಿದಾಗ ನಾವು ಧ್ವನಿ ಎತ್ತಬೇಕಿತ್ತು. ಈಗ ದೊಡ್ಡ ಮಟ್ಟದಲ್ಲಿ ಹೋರಾಟಕ್ಕೆ ಅಣಿಯಾಗಬೇಕು. ಕೇಂದ್ರದ ಕುತಂತ್ರದ ರಾಜಕಾರಣ ನಿಲ್ಲಿಸಬೇಕು. ತೆರಿಗೆ ಹಂಚಿಕೆ ಕೇಂದ್ರದ ವಿವೇಚನೆಗೆ ಬಿಟ್ಟ ದಾನ ಅಲ್ಲ. ಅದು ಎಲ್ಲ ರಾಜ್ಯಗಳ ಹಕ್ಕು

ಬಂಜಗೆರೆ ಜಯಪ್ರಕಾಶ್, ಚಿಂತಕ

ತೆರಿಗೆ ಪಾಲು ಹಂಚಿಕೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಕೇಂದ್ರ ಸರ್ಕಾರ ನಿರಂತರ ಅನ್ಯಾಯ ಮಾಡುತ್ತಿದೆ. ಈ ಅನ್ಯಾಯ ಸರಿಪಡಿಸದಿದ್ದರೆ ದಕ್ಷಿಣದ ರಾಜ್ಯಗಳ ಜನರು ಒಟ್ಟಾಗಿ ಹೋರಾಟ ಮಾಡುತ್ತೇವೆ

ಜಾಣಗೆರೆ ವೆಂಕಟರಾಮಯ್ಯ, ಕನ್ನಡಪರ ಹೋರಾಟಗಾರ

ಅಪಪ್ರಚಾರದ ಮೂಲಕ ಸಿದ್ದರಾಮಯ್ಯ ಅವರ ತೇಜೋವಧೆ ಮಾಡಲಾಗುತ್ತಿದೆ. ಈ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಲಾಗುತ್ತಿದೆ.

ಬಿ.ಎಸ್.ಶಿವಣ್ಣ, ಲೋಹಿಯಾ ವಿಚಾರ ವೇದಿಕೆ

ಮುಡಾ ಸಾಮಾನ್ಯ ಸಭೆಯಲ್ಲಿ ಶಾಸಕರ ಪ್ರತಿಪಾದನೆ • ವಿಚಾರಣಾ ಆಯೋಗದ ವರದಿ ಆಧರಿಸಿ ಕ್ರಮಕ್ಕೆ ನಿರ್ಧಾರ

50:50 ನಿವೇಶನ ವಾಪಸ್‌ಗೆ ಸದಸ್ಯರ ಒಲವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ 50:50 ಅನುಪಾತದಲ್ಲಿ ಹಂಚಿಕೆಯಾದ ಎಲ್ಲ ನಿವೇಶನಗಳನ್ನು ಹಿಂಪಡೆಯುವ ಕುರಿತು ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರಿಂದ ಒಲವು ವ್ಯಕ್ತವಾಗಿದ್ದು, ವಿಚಾರಣಾ ಆಯೋಗದ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ಹತ್ತು ತಿಂಗಳ ಬಳಿಕ ನಡೆದ ಸಾಮಾನ್ಯ ಸಭೆಯಲ್ಲಿ ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್ ಗೌಡ, ಎ.ಎಚ್. ವಿಶ್ವನಾಥ್ ಸೇರಿದಂತೆ ಹೆಚ್ಚಿನವರು, '50:50 ಅನುಪಾತದಲ್ಲಿ ಹಂಚಿಕೆ ಆಗಿರುವ ಎಲ್ಲ ನಿವೇಶನಗಳನ್ನೂ ಹಿಂಪಡೆಯಬೇಕು' ಎಂದು ಆಗ್ರಹಿಸಿದರು. 'ಅಕ್ರಮವಾಗಿ ಹಂಚಿಕೆಯಾದ ನಿವೇಶನಗಳನ್ನು ವಾಪಸ್ ಪಡೆಯುವುದು ಸೂಕ್ತ. ಆದರೆ, ಕಾನೂನುಬದ್ಧವಾಗಿ ಪಡೆದವರಿಗೆ ಅನ್ಯಾಯ ಆಗದಂತೆ ನಿರ್ಧಾರ ಕೈಗೊಳ್ಳಬೇಕು' ಎಂದು ಶಾಸಕ ಜಿ.ಟಿ. ದೇವೇಗೌಡ ಸಲಹೆ ನೀಡಿದರು.

'ನ್ಯಾ. ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ ಆಯೋಗವು ಈ ವಿಚಾರವಾಗಿ ವಿಚಾರಣೆ ನಡೆಸುತ್ತಿದೆ. ಆಯೋಗದ ವರದಿಯನ್ನು ಆಧರಿಸಿ ಮುಂದಿನ ತೀರ್ಮಾನ ಕೈಗೊಳ್ಳೋಣ' ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಮುಡಾ ಪ್ರಭಾರ ಅಧ್ಯಕ್ಷ ಜಿ. ಲಕ್ಷ್ಮೀಕಾಂತ ರೆಡ್ಡಿ ಹೇಳಿದರು' ಎಂದು ಮೂಲಗಳು ತಿಳಿಸಿವೆ.



ಮುಡಾ ಪ್ರಭಾರ ಅಧ್ಯಕ್ಷ ಜಿ.ಲಕ್ಷ್ಮೀಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ವಿವೇಕಾನಂದ, ಶಾಸಕರಾದ ದರ್ಶನ್ ಧ್ರುವನಾರಾಯಣ, ಕೆ. ಹರೀಶ್ ಗೌಡ, ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಜಿ.ಟಿ. ದೇವೇಗೌಡ, ಮುಡಾ ಆಯುಕ್ತ ಕೆ. ರಘುನಂದನ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮಹಾನಗರ ಪಾಲಿಕೆ ಆಯುಕ್ತ ಆಷಾದ್ ಉರ್ ರೆಹಮಾನ್ ಷರೀಫ್ ಹಾಗೂ ಅಧಿಕಾರಿಗಳು ಪಾಲ್ಗೊಂಡರು — ಪ್ರಜಾವಾಣಿ ಚಿತ್ರ

ಮತ್ತೊಂದು ಸಭೆ: '172 ವಿಷಯಗಳನ್ನು ಮಂಡಿಸಲಾಗಿತ್ತು. ಇದರಲ್ಲಿ 60 ವಿಷಯಗಳನ್ನು ಹೊರತುಪಡಿಸಿ ಉಳಿದವುಗಳನ್ನು ಅನುಮೋದಿಸಲಾಯಿತು. 50:50 ಅನುಪಾತದಲ್ಲಿ ಹಂಚಿಕೆಯಾದ ನಿವೇಶನಗಳನ್ನು ಸಂಪೂರ್ಣವಾಗಿ ಹಿಂಪಡೆಯಬೇಕು ಎಂದು ಸದಸ್ಯರು ಒತ್ತಾಯಿಸಿದೆವು. ತನಿಖಾ ಆಯೋಗದ ವರದಿ ಆಧರಿಸಿ ತೀರ್ಮಾನಿಸೋಣ ಎಂದು ಅಧ್ಯಕ್ಷರು ಹೇಳಿದ್ದು, ಅದನ್ನು ಒಪ್ಪಿದ್ದೇವೆ. ಇದೇ 22 ಅಥವಾ 24ರಂದು ಮತ್ತೊಂದು ಸಭೆ ನಡೆಯಲಿದೆ' ಎಂದು ಶಾಸಕ ಕೆ. ಹರೀಶ್ ಗೌಡ ಸಭೆಯ ಬಳಿಕ ಪತ್ರಕರ್ತರಿಗೆ ಮಾಹಿತಿ ನೀಡಿದರು.

'ನಗರದ ಆಂದೋಲನ ವೃತ್ತದ ಬಳಿ 17 ಎಕರೆಯಲ್ಲಿ ನಕ್ಷೆ ಅನುಮೋದನೆಯೇ ಇಲ್ಲದೇ ಅಕ್ರಮ ಬಡಾವಣೆ ರಚಿಸಿ ನಿವೇಶನ ಹಂಚಲಾಗಿದೆ. ಅದು ಅನಧಿಕೃತವಾಗಿದ್ದು, ವಾಪಸ್ ಪಡೆಯುವ ಕುರಿತೂ ಸಭೆಯಲ್ಲಿ ಚರ್ಚಿಸಿದ್ದೇವೆ. 50:50 ಅನುಪಾತದಲ್ಲಿ ಅಕ್ರಮ ಎಸಗಿರುವ ಆಯುಕ್ತರು ಹಾಗೂ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಲು ಅಧ್ಯಕ್ಷರನ್ನು ಕೋರಿದ್ದೆವು. ಅಧ್ಯಕ್ಷರು ಅದಕ್ಕೆ ಸಮ್ಮತಿ ಸೂಚಿಸಿದ್ದಾರೆ' ಎಂದು ಹೇಳಿದರು.

ಸಹಿಯೇ ಮಾಡದ ದಿನೇಶ್: 'ಇದೇ ವರ್ಷ ಜನವರಿಯಲ್ಲಿ ಸಾಮಾನ್ಯ ಸಭೆ ನಡೆದಿತ್ತು. ಅಲ್ಲಿ ಕೈಗೊಳ್ಳಲಾದ ನಿರ್ಣಯಗಳಿಗೆ ಅಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಸಹಿಯೇ ಮಾಡಿರಲಿಲ್ಲ. ಹೀಗಾಗಿ ಗುರುವಾರದ ಸಭೆಯಲ್ಲಿ ಮತ್ತೊಮ್ಮೆ ಅದೇ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲಾಯಿತು' ಎಂದು ಮುಡಾ ಮೂಲಗಳು ತಿಳಿಸಿವೆ.

ಬೆಳಿಗ್ಗೆ 11ಕ್ಕೆ ಆರಂಭವಾದ ಸಭೆ ಮಧ್ಯಾಹ್ನ 3ಕ್ಕೆ ಮುಕ್ತಾಯಗೊಂಡಿತು. ಡಾ.ಯತೀಂದ್ರ ಸಿದ್ದರಾಮಯ್ಯ ಕಾಂಗ್ರೆಸ್‌ನ ಐವರು ಶಾಸಕರು–ವಿಧಾನ ಪರಿಷತ್ ಸದಸ್ಯರು ಗೈರು ಹಾಜರಾದರು.

ಪ್ರತಿಭಟನೆ: 'ಕಾಟಾಚಾರಕ್ಕೆ ಸಭೆ ನಡೆಸಲಾಗುತ್ತಿದೆ' ಎಂದು ದೂರಿ ಮುಡಾದ ನಿವೃತ್ತ ಯೋಜನಾ ಸಹಾಯಕ ನಿರ್ದೇಶಕ ಪಿ.ಎಸ್. ನಟರಾಜು ಕಣ್ಣಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಮುಡಾ ಕಚೇರಿ ಮುಂಭಾಗ ಪ್ರತಿಭಟಿಸಿದರು.

50:50 ಅನುಪಾತದಲ್ಲಿ ಅಕ್ರಮವಾಗಿ ಹಂಚಿಕೆ ಆಗಿರುವ ನಿವೇಶನ ರದ್ದು ಮಾಡಬೇಕು. ಕಾನೂನಾತ್ಮಕವಾಗಿ ಪಡೆದವರಿಗೆ ತೊಂದರೆ ಆಗಬಾರದು

ಜಿ.ಟಿ. ದೇವೇಗೌಡ, ಶಾಸಕ

50:50 ನಿವೇಶನಗಳ ವಾಪಸ್‌ಗೆ ಸಲಹೆ ನೀಡಿದ್ದೇವೆ. ಹಿಂದಿನ ಆಯುಕ್ತರಾದ ನಟೇಶ್–ದಿನೇಶ್ ಅಕ್ರಮಗಳ ಕುರಿತು ತನಿಖೆಗೆ ಒತ್ತಾಯಿಸಿದೆವು

ಎಚ್. ವಿಶ್ವನಾಥ್, ಎಂಎಲ್‌ಸಿ

ಅಕ್ರಮ ನಿವೇಶನ ರದ್ದತಿಗೆ ನಮ್ಮಲ್ಲಿ ಬಹುತೇಕರು ಆಗ್ರಹಿಸಿದೆವು. ತನಿಖೆ ನಡೆಯುತ್ತಿದೆ, ವರದಿ ಆಧರಿಸಿ ಕ್ರಮ ಎಂದು ಅಧ್ಯಕ್ಷರು ಹೇಳಿದ್ದಾರೆ

ಟಿ.ಎಸ್. ಶ್ರೀವತ್ಸ, ಶಾಸಕ

ಶುಕ್ರವಾರ, ನವೆಂಬರ್ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 309 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ

ರಂಗಭೂಮಿಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿರುವ ನಟ ತೇಜು ಬೆಳವಾಡಿ ಸಿನಿಮಾದಲ್ಲೇ ಸಕ್ರಿಯರಾಗಿರುತ್ತಾರಂತೆ

ಆಳ-ಅಗಲ

ದೇಶಿ ಕ್ರಿಕೆಟ್‌ಗೆ ಟಿ20 ಸವಾಲ್

ಜಾಲತಾಣ: 16ರ ಒಳಗಿನವರಿಗೆ ನಿರ್ಬಂಧ 10

ಶ್ರೀನಗರ: ವಿಧಾನಸಭೆಯಲ್ಲಿ ಕೋಲಾಹಲ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,541	24,199	₹80,950 (ಬೆಂಗಳೂರು)	₹95,700 (ಬೆಂಗಳೂರು)	84.32

ಯುಯುಸಿಎಂಎಸ್ ನಿರ್ವಹಣಾ ವೈಫಲ್ಯ ● ವಿದ್ಯಾರ್ಥಿಗಳ ಉನ್ನತ ಶಿಕ್ಷಣ, ಉದ್ಯೋಗಕ್ಕೂ ಅಡ್ಡಿ

‘ಅಂಕೆ’ಗೆ ಸಿಗದ ಡಿಜಿಟಲ್ ಅಂಕ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅಂಕಪಟ್ಟಿಗೆ ಸುರಕ್ಷತೆ ಒದಗಿಸಿ, ನಕಲು ದಂಧೆಗೆ ಕೊನೆ ಹಾಡಲು ಪರಿಚಯಿಸಿದ ಡಿಜಿಟಲ್ ವ್ಯವಸ್ಥೆಯೇ ಈಗ ಕಂಟಕವಾಗಿದ್ದು, ಸಾವಿರಾರು ವಿದ್ಯಾರ್ಥಿಗಳ ಅಂಕಪಟ್ಟಿಗಳಿಂದ ಅಂಕಗಳೇ ನಾಪತ್ತೆಯಾಗಿವೆ.

ಪ್ರತಿ ವಿಶ್ವವಿದ್ಯಾಲಯವೂ ತನ್ನ ವ್ಯಾಪ್ತಿಯ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ನಂತರ ವಿದ್ಯಾರ್ಥಿಗಳಿಗೆ ಭೌತಿಕ ಅಂಕಪಟ್ಟಿಗಳನ್ನು (ಹಾರ್ಡ್ ಕಾಪಿ) ವಿತರಿಸುತ್ತಿತ್ತು. ಉನ್ನತ ಶಿಕ್ಷಣ ಇಲಾಖೆಯು 2021-22ನೇ ಸಾಲಿನಿಂದ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯನ್ನು (ಯುಯುಸಿಎಂಎಸ್) ಜಾರಿಗೆ ತಂದಿದೆ. ಅಂದಿನಿಂದ ಎಲ್ಲ ವಿಶ್ವವಿದ್ಯಾಲಯಗಳೂ ಪ್ರತಿ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಯುಯುಸಿಎಂಎಸ್‌ನಲ್ಲಿ ನಮೂದಿಸುತ್ತವೆ. ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಸಂಖ್ಯೆ ನಮೂದಿಸಿ, ಆಯಾ ವರ್ಷದ ಡಿಜಿಟಲ್ ಅಂಕಪಟ್ಟಿ ಪಡೆಯಬಹುದು.

ಪ್ರತಿ ಸೆಮಿಸ್ಟರ್‌ನಲ್ಲೂ ಅಧಿಕ ಅಂಕಗಳೊಂದಿಗೆ ತೇರ್ಗಡೆಯಾಗಿದ್ದ ವಿದ್ಯಾರ್ಥಿಗಳು ಈಗ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಂಡರೆ ಅದರಲ್ಲಿ ಅಂಕಗಳೇ ನಾಪತ್ತೆಯಾಗಿವೆ. ಅವರ ಉನ್ನತ ಶಿಕ್ಷಣ, ಉದ್ಯೋಗದ ಕನಸುಗಳು ಭಗ್ನವಾಗಿವೆ. ಪದವಿ ಮುಗಿಸಿದ ಹಲವು ವಿದ್ಯಾರ್ಥಿಗಳು ಮೂರು ವರ್ಷಗಳ ಡಿಜಿಟಲ್ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಂಡಾಗ ಮೊದಲ ಹಾಗೂ ಎರಡನೇ ವರ್ಷದ ಪದವಿಯ ನಾಲ್ಕು ಸೆಮಿಸ್ಟರ್‌ಗಳಲ್ಲಿ ಅವರು ಅನುತ್ತೀರ್ಣರಾಗಿದ್ದಾರೆಂದು ಅಂಕಪಟ್ಟಿ ತೋರಿಸುತ್ತಿದೆ. ಅಂತಹ

> ಯುಯುಸಿಎಂಎಸ್ ಅತ್ಯುತ್ತಮ ವ್ಯವಸ್ಥೆ. ಎಲ್ಲ ಲೋಪಗಳನ್ನೂ ಶೀಘ್ರ ಸರಿಪಡಿಸಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು
>
> **ಎಂ.ಎಸ್. ಶ್ರೀಕರ್,** ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ

> ಎನ್‌ಇಪಿ ಜಾರಿಯಾದ ವರ್ಷ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಅಂಕಗಳಲ್ಲಿ ಸಮಸ್ಯೆ ಆಗಿತ್ತು. 15 ಸಾವಿರ ವಿದ್ಯಾರ್ಥಿಗಳ ಅಂಕಪಟ್ಟಿ ಸರಿಪಡಿಸಿದ್ದೇವೆ
>
> **ಗೋಪಿನಾಥ್,** ಪರೀಕ್ಷಾಂಗ ಕುಲಸಚಿವ, ಕುವೆಂಪು ವಿಶ್ವವಿದ್ಯಾಲಯ

ಅಂಕಿ ಅಂಶ

18,64,799 ಯುಯುಸಿಎಂಎಸ್ ಬಳಸುವ ವಿದ್ಯಾರ್ಥಿಗಳು

3,801 ಕಾಲೇಜುಗಳು

35 ಸರ್ಕಾರಿ ವಿಶ್ವವಿದ್ಯಾಲಯಗಳು

ವಿದ್ಯಾರ್ಥಿಗಳು ತಾವು ಓದಿದ ಕಾಲೇಜು ಹಾಗೂ ವಿಶ್ವವಿದ್ಯಾಲಯಕ್ಕೆ ನಿತ್ಯವೂ ಅಲೆಯುವಂತಾಗಿದೆ.

7ನೇ ಪುಟ ನೋಡಿ

ಕಾಲೇಜುಗಳಿಗೆ ನೋಟಿಸ್

ಸೀಟ್ ಬ್ಲಾಕಿಂಗ್

ಎಂಜಿನಿಯರಿಂಗ್ ಕೋರ್ಸ್‌ಗಳ ‘ಸೀಟ್ ಬ್ಲಾಕಿಂಗ್’ ಪ್ರಕರಣದಲ್ಲಿ ಕಾಲೇಜುಗಳಿಗೆ ನೋಟಿಸ್ ನೀಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿರ್ಧರಿಸಿದೆ.

‘ಸೀಟು ಹಂಚಿಕೆಯಾಗಿದ್ದರೂ, ಎಂಜಿನಿಯರಿಂಗ್ ಕಾಲೇಜುಗಳಿಗೆ ಏಕೆ ಪ್ರವೇಶ ಪಡೆದಿಲ್ಲ’ ಎಂದು ಪ್ರಶ್ನಿಸಿ ಕೆಇಎ ನೀಡಿದ್ದ ನೋಟಿಸ್‌ಗೆ ಶೇ 80ರಷ್ಟು ವಿದ್ಯಾರ್ಥಿಗಳು ‘ಈ ಕುರಿತು ತಮಗೆ ಮಾಹಿತಿಯೇ ಇಲ್ಲ’ ಎಂದು ಉತ್ತರಿಸಿದ್ದಾರೆ. ಹಾಗಾಗಿ, ಸಿಇಟಿ ಮೂಲಕ ಹಂಚಿಕೆಯಾದ ಬೇಡಿಕೆ ಇರುವ ಕೋರ್ಸ್‌ಗಳ ಸೀಟುಗಳು ಅಧಿಕ ಸಂಖ್ಯೆಯಲ್ಲಿ ಉಳಿದಿರುವ ಕಾಲೇಜುಗಳಿಗೆ ವಿವರಣೆ ಕೇಳಿ ನೋಟಿಸ್ ನೀಡಲಾಗುತ್ತಿದೆ.

ಸಿಇಟಿಯಲ್ಲಿ ಉನ್ನತ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಪ್ರಮುಖ ಕಾಲೇಜುಗಳಿಗೆ ಪ್ರವೇಶ ಪಡೆಯದೇ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದಾರೆ ಎಂದು ಕೆಇಎ ದೂರಿತ್ತು. ‘ಸೀಟ್ ಬ್ಲಾಕಿಂಗ್’ ಅಕ್ರಮ ನಡೆದಿರುವ ಶಂಕೆಯ ಮೇಲೆ 2,348 ವಿದ್ಯಾರ್ಥಿಗಳಿಗೆ ನೋಟಿಸ್ ನೀಡಿತ್ತು. ‘ಜೆಇಇ, ಕಾಮೆಡ್-ಕೆ ಮತ್ತು ಇತರ ಅರ್ಹತಾ ಪರೀಕ್ಷೆಗಳತ್ತ ಚಿತ್ತ ಹರಿಸಿದ್ದರಿಂದ ಸಿಇಟಿ ಸೀಟು ಹಂಚಿಕೆಯ ಬಗ್ಗೆ ಗಮನಿಸಲಿಲ್ಲ. ಈ ಕುರಿತು ತಮಗೆ ಮಾಹಿತಿಯೇ ಇಲ್ಲ’ ಎಂದು ವಿದ್ಯಾರ್ಥಿಗಳು ನೀಡಿದ ಉತ್ತರವನ್ನು ಗಂಭೀರವಾಗಿ ತೆಗೆದುಕೊಂಡಿರುವ ಕೆಇಎ, ಅಕ್ರಮದಲ್ಲಿ ಆಯಾ ಕಾಲೇಜುಗಳೇ ಭಾಗಿಯಾಗಿರುವ ಕುರಿತು ಮತ್ತಷ್ಟು ಮಾಹಿತಿ ಕಲೆಹಾಕುತ್ತಿದೆ.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ವಕ್ಫ್‌ನಿಂದ ರೈತರು, ಮಠ, ಮಂದಿರಕ್ಕೆ ತೊಂದರೆ ಆಗದಂತೆ ಕಾಯ್ದೆಗೆ ತಿದ್ದುಪಡಿ’

ಪ್ರಜಾವಾಣಿ ವಾರ್ತೆ

ವಿಜಯಪುರ/ಹುಬ್ಬಳ್ಳಿ: ‘ವಕ್ಫ್ ಕಾಯ್ದೆಗೆ ಕೇಂದ್ರ ಸರ್ಕಾರ ಪಾರದರ್ಶಕ ತಿದ್ದುಪಡಿ ತರಲಿದ್ದು, ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆ ಮಂಡಿಸಲಿದೆ. ಪ್ರಸ್ತುತ ಕಾಯ್ದೆಯಲ್ಲಿನ ತೊಡಕು ನಿವಾರಿಸಲಾಗುವುದು’ ಎಂದು ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಅಧ್ಯಕ್ಷ ಜಗದಂಬಿಕಾ ಪಾಲ್ ತಿಳಿಸಿದರು.

> ಧಾರವಾಡ ಜಿಲ್ಲೆಯಲ್ಲಿ ರೈತರಿಗೆ ನೋಟಿಸನ್ನು ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಇದ್ದ ವೇಳೆ ನೀಡಲಾಗಿತ್ತು. ಬೇಕಿದ್ದರೆ ಜಿಲ್ಲಾಧಿಕಾರಿ ಅವರನ್ನು ಕೇಳಿನೋಡಿ
>
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> ಕೇಂದ್ರ ಸರ್ಕಾರವು ವಕ್ಫ್ ಆಸ್ತಿಯನ್ನು ಸಂಪೂರ್ಣ ವಶಕ್ಕೆ ಪಡೆದು, ಕೇಂದ್ರ ಸರ್ಕಾರದ ಆಸ್ತಿ ಎಂದು ಘೋಷಿಸಬೇಕು. ರಾಷ್ಟ್ರೀಕರಣ ಮಾಡಬೇಕು
>
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ಹುಬ್ಬಳ್ಳಿ, ವಿಜಯಪುರಕ್ಕೆ ಗುರುವಾರ ಭೇಟಿ ನೀಡಿದ ಅವರು, ‘ವಕ್ಫ್‌ನಿಂದ ರೈತರು, ಮಠ, ಮಂದಿರ, ಸ್ಮಾರಕ ಸೇರಿದಂತೆ ಯಾರಿಗೂ ತೊಂದರೆಯಾಗದಂತೆ ಅಗತ್ಯ ತಿದ್ದುಪಡಿ ತರಲು ಜೆಪಿಸಿ ಸಲಹೆ ನೀಡಲಿದೆ’ ಎಂದರು.

‘ರೈತರಿಗೆ ನೋಟಿಸ್ ನೀಡಿದ ಜಿಲ್ಲಾಧಿಕಾರಿ, ಕಂದಾಯ ಇಲಾಖೆ ಅಧಿಕಾರಿ ಮತ್ತು ವಕ್ಫ್ ಮಂಡಳಿ ಅಧಿಕಾರಿಗಳನ್ನು ಅಗತ್ಯವಿದ್ದರೆ ದೆಹಲಿಗೆ ಕರೆಯಿಸಿ, ವಿಚಾರಣೆ ಮಾಡಲಾಗುವುದು. ತೊಂದರೆ ಅನುಭವಿಸಿದ ರೈತರು ಅಲ್ಲದೇ ವಿಜಯಪುರದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದವರನ್ನು ದೆಹಲಿಗೆ ಕರೆಯಿಸಿ ಅಹವಾಲು ಆಲಿಸಲಾಗುವುದು’ ಎಂದರು.

7ನೇ ಪುಟ ನೋಡಿ

ಕಿದ್ವಾಯಿ ಸಿಬ್ಬಂದಿ ಮುಷ್ಕರ: ವೇತನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಎರಡು ತಿಂಗಳ ವೇತನ ಬಿಡುಗಡೆಗೆ ಆಗ್ರಹಿಸಿದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಹೊರಗುತ್ತಿಗೆ ಸಿಬ್ಬಂದಿ, ಗುರುವಾರ ಕೆಲಸ ಸ್ಥಗಿತಗೊಳಿಸಿ ಮುಷ್ಕರ ನಡೆಸಿದರು.

ಸಿಬ್ಬಂದಿಗೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳ ವೇತನ ಪಾವತಿ ಯಾಗಿರಲಿಲ್ಲ. ಇದರಿಂದಾಗಿ ಬೆಳಿಗ್ಗೆ 8.30ರಿಂದಲೇ ಸಿಬ್ಬಂದಿ ಮುಷ್ಕರ ಆರಂಭಿಸಿದ್ದರು. ಹೊರ ರೋಗಿ ಹಾಗೂ ಒಳರೋಗಿ ವಿಭಾಗ, ಸ್ವಚ್ಛತೆ, ಪ್ರಯೋಗಾಲಯ, ಸಾರಿಗೆ ಸೇರಿ ವಿವಿಧ ವಿಭಾಗಗಳಲ್ಲಿನ ಸಿಬ್ಬಂದಿ ಗೈರುಹಾಜರಾಗಿದ್ದರಿಂದ ಕೆಲವು ಹೊತ್ತು ಸೇವೆಯಲ್ಲಿ ವ್ಯತ್ಯಯವಾಯಿತು. ರೋಗಿಗಳು ಹಾಗೂ ಅವರ ಸಂಗಡಿಗರು ಗೊಂದಲಕ್ಕೆ ಒಳಗಾಗಿದ್ದರು. ಈ ವೇಳೆ ಮುಷ್ಕರನಿರತ ಸಿಬ್ಬಂದಿ ಹಾಗೂ ಸಂಸ್ಥೆಯ ಆಡಳಿತ ಮಂಡಳಿ ಪ್ರತಿನಿಧಿಗಳ ಜತೆಗೆ ವಾಗ್ವಾದವೂ ನಡೆಯಿತು.

ಮುಷ್ಕರ ತೀವ್ರತೆ ಪಡೆಯುತ್ತಿದ್ದಂತೆ ಎಚ್ಚೆತ್ತುಕೊಂಡ ಆಡಳಿತ ಮಂಡಳಿ, ಮಧ್ಯಾಹ್ನದ ವೇಳೆಗೆ ಎರಡೂ ತಿಂಗಳ ವೇತನ ಬಿಡುಗಡೆ ಮಾಡಿತು.

ಸಂಸ್ಥೆಗೆ ಕಾಯಂ ನಿರ್ದೇಶಕರು ಇರದಿರುವುದು, ಕೆಲ ದಿನಗಳ ಹಿಂದೆ ಆರ್ಥಿಕ ಅಧಿಕಾರಿಯನ್ನು ಅಮಾನತು ಗೊಳಿಸಿದ್ದರಿಂದ ವೇತನದ ಕಡತ ಬಾಕಿ ಉಳಿದಿತ್ತು. ಇದರಿಂದ ವೇತನ ವಿಳಂಬವಾಗಿತ್ತು ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಚೆಸ್ ಪಂದ್ಯಾವಳಿ ಭಾನುವಾರ

ಬೆಂಗಳೂರು: ನಗರದ ಕೋಲೂರಿನಲ್ಲಿರುವ (ದೊಡ್ಡ ಆಲದಮರ ಸಮೀಪ) ಯುನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಆವರಣದಲ್ಲಿ ನವೆಂಬರ್ 10ರಂದು 'ಯುನಿವರ್ಸಲ್ ಫರ್ಸ್ಟ್ ಏಜ್ ಕೆಟಗರಿ ಚಿಲ್ಡ್ರನ್ ಚೆಸ್ ಪಂದ್ಯಾವಳಿ' ನಡೆಯಲಿದೆ.

9ರಿಂದ 19 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗಗಳಲ್ಲಿ ಸ್ಪರ್ಧೆ ಹಮ್ಮಿಕೊಂಡಿದೆ. ವಿಶ್ವ ಚಾಂಪಿಯನ್ ಪ್ರಣವ್ ಆನಂದ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಚಲ್ಲಘಟ್ಟ ಮೆಟ್ರೊ ನಿಲ್ದಾಣದಿಂದ (ಮೈಸೂರು ರಸ್ತೆ) ಬಸ್ ವ್ಯವಸ್ಥೆ ಇದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 97401 82248.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ತಜ್ಞರ ಕಳವಳ

ಮಕ್ಕಳಲ್ಲಿ ರಕ್ತ ಕ್ಯಾನ್ಸರ್ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿಯೂ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ದೇಶದಲ್ಲಿ ವಾರ್ಷಿಕ ಸರಾಸರಿ 25,939 ಮಕ್ಕಳು ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ' ಎಂದು ಕ್ಯಾನ್ಸರ್ ತಜ್ಞರು ಕಳವಳ ವ್ಯಕ್ತಪಡಿಸಿದರು.

ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನದ ಪ್ರಯುಕ್ತ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮ ಹಾಗೂ ಮಕ್ಕಳ ಕ್ಯಾನ್ಸರ್ ರಿಜಿಸ್ಟ್ರಿ ಕಾರ್ಯಾಗಾರದಲ್ಲಿ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಕ್ಯಾನ್ಸರ್ ಪ್ರಕಾರಗಳು, ಪ್ರಕರಣಗಳ ಹೆಚ್ಚಳದ ಬಗ್ಗೆ ತಜ್ಞರು ವಿಷಯ ಮಂಡಿಸಿದರು.

'ಕ್ಯಾನ್ಸರ್ ಪೀಡಿತ ಮಕ್ಕಳಲ್ಲಿ ಹೆಚ್ಚಿನವರು ರಕ್ತದ ಕ್ಯಾನ್ಸರ್ (ಲ್ಯುಕೇಮಿಯಾ ಮತ್ತು ಲಿಂಪೋಮಾ), ಮಿದುಳು ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ. ಸಂಸ್ಥೆಯ ನೋಂದಣಿ ಪ್ರಕಾರ ಮಕ್ಕಳ ಕ್ಯಾನ್ಸರ್ ವಿಭಾಗದಲ್ಲಿ ಪ್ರತಿ ವರ್ಷ ಸರಾಸರಿ 400ರಿಂದ 500 ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಸಂಸ್ಥೆಯ ಹೊರ ರೋಗಿ ವಿಭಾಗದಲ್ಲಿ ಕಳೆದ ವರ್ಷ 18 ಸಾವಿರ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ' ಎಂದು ಸಂಸ್ಥೆಯ ವೈದ್ಯರು ತಿಳಿಸಿದರು.



ಕಾರ್ಯಕ್ರಮದಲ್ಲಿ ಡಾ. ಪ್ರಶಾಂತ್ ಮಾಥುರ್ ಮತ್ತು ಡಾ. ರಾಜಾರಾಮನ್ ಸ್ವಾಮಿನಾಥನ್ ಸಮಾಲೋಚನೆ ನಡೆಸಿದರು. ಡಾ.ಟಿ.ನವೀನ್ ಹಾಗೂ ಡಾ.ರವಿ ಅರ್ಜುನ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪ್ರಭಾರ ನಿರ್ದೇಶಕ ಡಾ.ರವಿ ಅರ್ಜುನ್, 'ದೇಹದಲ್ಲಿ ಯಾವುದೇ ಶಂಕಿತ ಗಡ್ಡೆ ಇದ್ದರೆ ತಪಾಸಣೆಗೆ ಒಳಪಡಬೇಕು. ತಡವಾಗಿ ತಪಾಸಣೆಗೆ ಒಳಪಡಿಸಿ, ಚಿಕಿತ್ಸೆ ನೀಡಿದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳಲಿದೆ. ಕ್ಯಾನ್ಸರ್ ನೋಂದಣಿ ದತ್ತಾಂಶದ ಪ್ರಕಾರ ದೇಶದಲ್ಲಿ ವಾರ್ಷಿಕ 18 ಲಕ್ಷ ಹೊಸ ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿವೆ. ರಾಜ್ಯದಲ್ಲಿ ಸದ್ಯ 2.3 ಲಕ್ಷ ಸಕ್ರಿಯ ಕ್ಯಾನ್ಸರ್ ಪ್ರಕರಣಗಳಿವೆ. ಪ್ರಾಥಮಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆಯಾದರೆ ಸೂಕ್ತ ಚಿಕಿತ್ಸೆಯ ಮೂಲಕ ರೋಗವನ್ನು ಗುಣಪಡಿಸಬಹುದಾಗಿದೆ. ಆದ್ದರಿಂದ ತಪಾಸಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ' ಎಂದು ಮಾಹಿತಿ ನೀಡಿದರು.

ಸಂಶೋಧನೆಗೆ ಸಹಕಾರಿ: ರಾಷ್ಟ್ರೀಯ ರೋಗ ಸೂಚನಾ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರದ (ಎನ್‌ಸಿಡಿಐಆರ್) ನಿರ್ದೇಶಕ ಡಾ. ಪ್ರಶಾಂತ್ ಮಾಥುರ್, 'ಕ್ಯಾನ್ಸರ್ ಪ್ರಕರಣಗಳ ನೋಂದಣಿಯನ್ನು ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ಜಾರಿಗೊಳಿಸಬೇಕು. ಇದರಿಂದ ಪರಿಣಾಮಕಾರಿ ಚಿಕಿತ್ಸೆ ಹಾಗೂ ಸಂಶೋಧನೆ ಸಾಧ್ಯವಾಗಲಿದೆ. ವೈಜ್ಞಾನಿಕ ವರದಿಗಳ ವಿಶ್ಲೇಷಣೆಗೆ ಸಂಬಂಧಿಸಿದಂತೆಯೂ ಕ್ಯಾನ್ಸರ್ ನೋಂದಣಿಯು ವೃದ್ಧಿಗೆ ಅನುಕೂಲವಾಗಲಿದೆ. ಆದ್ದರಿಂದ ಕ್ಯಾನ್ಸರ್ ನೋಂದಣಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು' ಎಂದರು.


ಬಳಿಕ ಮಕ್ಕಳ ಕ್ಯಾನ್ಸರ್ ಹಾಗೂ ಜಾಗೃತಿ ಕುರಿತು ವೈದ್ಯಕೀಯ ತಜ್ಞರು ವಿಚಾರ ಮಂಡಿಸಿದರು. ಸಂಸ್ಥೆಯ ಮಕ್ಕಳ ಗಂಥಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಅರುಣ್ ಕುಮಾರ್, ಚೆನ್ನೈನ ಕ್ಯಾನ್ಸರ್ ಸಂಸ್ಥೆಯ ಡಾ. ರಾಜಾರಾಮನ್ ಸ್ವಾಮಿನಾಥನ್, ಸಂಸ್ಥೆಯ ಪ್ರಭಾರ ವೈದ್ಯಕೀಯ ಅಧೀಕ್ಷಕ ಡಾ.ಟಿ.ನವೀನ್ ಹಾಗೂ ಡಾ.ಅತುಲ್ ಶ್ರೀವಾತ್ಸವ ಉಪಸ್ಥಿತರಿದ್ದರು.

ನರಸಿಂಹನ್, ಶ್ರೀನಿವಾಸರಾವ್‌ಗೆ 'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಕರ್ನಾಟಕ ಇತಿಹಾಸ ಅಕಾಡೆಮಿಯ 'ಇತಿಹಾಸ ಸಂಸ್ಕೃತಿಶ್ರೀ' ಪ್ರಶಸ್ತಿಗೆ ಸಂಶೋಧಕ ಪ್ರೊ. ಕೆ.ಆರ್.ನರಸಿಂಹನ್ ಮತ್ತು ಜಲತಜ್ಞ ಡಾ.ಹರಿಹರ ಶ್ರೀನಿವಾಸ ರಾವ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹ 1 ಲಕ್ಷ ನಗದು ಒಳಗೊಂಡಿದೆ.

ದತ್ತಿನಿಧಿ ಪ್ರಶಸ್ತಿ: ಡಾ. ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿಗೆ ವಿಜಯಪುರದ ಡಾ. ಎಸ್.ಕೆ.ಕೊಪ್ಪ, ನೊಳಂಬಶ್ರೀ ಪ್ರಶಸ್ತಿಗೆ ಬೆಂಗಳೂರಿನ ಟಿ.ವಿ. ನಾಗರಾಜ, ಸಂಶೋಧನಾ ಶ್ರೀ ಪ್ರಶಸ್ತಿಗೆ ಬೆಂಗಳೂರಿನ ಆದಪ್ಪ ಪಾಸೋಡಿ, ನಾಯಕ ಪ್ರಶಸ್ತಿಗೆ ಪುಂಡಿಕಾಯಿ ಗಣಪಯ್ಯ ಭಟ್, ಶ್ರೀಮತಿ ಸುಮಂಗಲ ಪಾಟೀಲ ಮಹಿಳಾಪ್ರಶಸ್ತಿಗೆ ಬೆಂಗಳೂರಿನ ಸ್ಮಿತಾ ರೆಡ್ಡಿ, ಸೂರ್ಯಕೀರ್ತಿ ಪ್ರಶಸ್ತಿಗೆ ನಾಗಮಂಗಲದ ಮಹಮದ್ ಕಲೀಂಉಲ್ಲ, ಡಾ.ಶ್ರೀನಿವಾಸ ಹಾವನೂರ ಸ್ಮರಣಾರ್ಥ ಪ್ರಶಸ್ತಿಗೆ ಧಾರವಾಡದ ಮಹೇಶ್ ಕುಮಾರ್ ಹ.ಪಾಟೀಲ್, ಡಾ. ಪ್ರತಿಭಾ ಚಿಣ್ಣಪ್ಪ ಸ್ಮರಣಾರ್ಥ ಪ್ರಶಸ್ತಿಗೆ ಬಾಗಲಕೋಟೆಯ



ಕೆ.ಆರ್. ನರಸಿಂಹನ್



ಹರಿಹರ ಶ್ರೀನಿವಾಸರಾವ್

ಯಾದಪ್ಪಪರದೇಶಿ ಮತ್ತು ಡಾ. ಎಂ.ಎಚ್. ಕೃಷ್ಣ ಮೆರಿಟ್ ಪ್ರಶಸ್ತಿಗೆ ತುಮಕೂರಿನ ವಿಜ್ಞಾನಿ ಸೋಮಶೇಖರ ಬಿ.ಎಸ್. ಆಯ್ಕೆಯಾಗಿದ್ದಾರೆ. ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಅತ್ಯುತ್ತಮ ಗ್ರಂಥ ಪ್ರಶಸ್ತಿಗೆ ಚಿತ್ರದುರ್ಗದ ಸಿ.ಎಂ. ತಿಪ್ಪೇಸ್ವಾಮಿ ಅವರ 'ರಕ್ಕಸದಂಗಡಿ ಕದನ' ಕೃತಿ ಆಯ್ಕೆಯಾಗಿದೆ.

'ಹಂಪಿ ವಿ.ವಿ ಆವರಣದಲ್ಲಿ ಇದೇ 9ರಿಂದ 11ರವರೆಗೆ ನಡೆಯುವ ಅಕಾಡೆಮಿಯ 38ನೇ ವಾರ್ಷಿಕ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಅಕಾಡೆಮಿ ಅಧ್ಯಕ್ಷ ದೇವರಕೊಂಡಾ ರೆಡ್ಡಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿಸ್ತರಿತ ಮೆಟ್ರೊ: 11 ಸಾವಿರ ಮಂದಿ ಸಂಚಾರ

ಬೆಂಗಳೂರು: ನಮ್ಮ ಮೆಟ್ರೊ ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ–ಮಾದಾವರ ನಡುವೆ ಗುರುವಾರ ಸಾರ್ವಜನಿಕ ಸಂಚಾರ ಆರಂಭಗೊಂಡಿದೆ. ಮೊದಲ ದಿನ ಬೆಳಿಗ್ಗೆ 5ರಿಂದ ಸಂಜೆ 7ರವರೆಗೆ ಒಟ್ಟು 11,093 ಪ್ರಯಾಣಿಕರು ಸಂಚರಿಸಿದ್ದಾರೆ.

ಹೊಸ ನಿಲ್ದಾಣಗಳಾದ ಮಂಜುನಾಥನಗರ, ಚಿಕ್ಕಬಿದರಕಲ್ಲು ಮತ್ತು ಮಾದಾವರಗಳಲ್ಲಿ 6,032 ಪ್ರಯಾಣಿಕರು ಮೆಟ್ರೊ ರೈಲು ಪ್ರವೇಶಿಸಿದ್ದಾರೆ.

'ಸೃಜನಶೀಲ' ಕೃತಿ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಸಂಶೋಧನಾ ಕ್ಷೇತ್ರದ ಪ್ರತಿಭೆ ಎಚ್.ಎಸ್. ಗೋಪಾಲರಾವ್ ಅವರು ವಿವೇಕ ಪರಂಪರೆಯ ಹರಿಕಾರರು' ಎಂದು ಶಿವಗಂಗೆ ಮೇಲಣಗವಿ ಮಠದ ಮಲಯಶಾಂತಮುನಿ ಶಿವಾಚಾರ್ಯರು ತಿಳಿಸಿದರು.

ಸಮಾನ ಮನಸ್ಕರ ವೇದಿಕೆ ಆಯೋಜಿಸಿದ್ದ ಎಚ್.ಎಸ್. ಗೋಪಾಲರಾವ್ 'ನುಡಿ ನಮನ' ಸಭೆಯಲ್ಲಿ ಸಂಪಾದನಾ ಕೃತಿ 'ಸೃಜನಶೀಲ' ಲೋಕಾರ್ಪಣೆ ಮಾಡಿ ಮಾತನಾಡಿ, ಅವರ ಸಂಶೋಧನೆಗಳು ನಿಖರ ಹಾಗೂ ವಸ್ತುನಿಷ್ಠತೆಯಿಂದ ಕೂಡಿದಂತಹವು ಎಂದರು.

ನಿವೃತ್ತ ಪ್ರಾಧ್ಯಾಪಕ ನಾ.ಗೀತಾಚಾರ್ಯ ಮಾತನಾಡಿ, 'ಐತಿಹಾಸಿಕ ಸ್ಥಳಗಳ ಬಗ್ಗೆ ಸಂಶೋಧನೆಗಳನ್ನು ನಡೆಸಿ ಗತಕಾಲದ ನಾಡು–ನುಡಿಯ ಮೇಲೆ ಬೆಳಕು ಚೆಲ್ಲಿದ್ದ ಗೋಪಾಲರಾವ್ ಅವರ 'ಕರ್ನಾಟಕ ಏಕೀಕರಣ ಇತಿಹಾಸ' ಕೃತಿಯು ಹತ್ತು ಮುದ್ರಣ ಕಂಡಿರುವುದು ಅದರ ಶ್ರೇಷ್ಠತೆಯನ್ನು ತಿಳಿಸುತ್ತದೆ' ಎಂದರು.

ನಗರಸಭೆ ಅಧ್ಯಕ್ಷೆ ಎನ್.ಎಸ್. ಪೂರ್ಣಿಮಾ ಸುಗ್ಗರಾಜು, ಆಚಾರ್ಯ ಗುರುಪರಂಪರಾ ವಿದ್ಯಾಲಯದ ಮುಖ್ಯಸ್ಥ ಎನ್.ರಂಗಾಚಾರ್, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎನ್.ರಾಜಶೇಖರ್, ಬಸವ ಸಾಹಿತ್ಯ ವೇದಿಕೆ ಅಧ್ಯಕ್ಷ ಶಿವಪ್ರಸಾದ್ ಆರಾಧ್ಯ, ಕೃತಿ ಸಂಪಾದಕ ಎನ್.ಜಿ.ಗೋಪಾಲ್, ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು, ಪ್ರಜಾಕವಿ ನಾಗರಾಜು, ಸಾಹಿತಿಗಳಾದ ವೆಂಕಟೇಶ್ ಚೌಥಾಯಿ, ಆನಂದಮೌರ್ಯ, ನರಸಿಂಹಯ್ಯ, ಚೌಡಯ್ಯ, ಕಸಾಪ ಮಾಜಿ ಅಧ್ಯಕ್ಷ ಲಕ್ಷ್ಮೀನಾರಾಯಣ ಶ್ರೇಷ್ಠಿ, 'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಇದ್ದರು.



ಸಮಾನ ಮನಸ್ಕರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಚ್.ಎಸ್. ಗೋಪಾಲರಾವ್ ಭಾವಚಿತ್ರಕ್ಕೆ ಶಿವಗಂಗೆ ಮೇಲಣಗವಿ ಮಠದ ಮಲಯಶಾಂತಮುನಿ ಶಿವಾಚಾರ್ಯರು ಪುಷ್ಪ ನಮನ ಸಲ್ಲಿಸಿದರು. ಎನ್.ಎಸ್. ಪೂರ್ಣಿಮಾ ಸುಗ್ಗರಾಜು, ನಾ.ಗೀತಾಚಾರ್ಯ ಇದ್ದಾರೆ.

ಅಂಗಾಂಗ ದಾನ: ಐವರಿಗೆ ನೆರವಾದ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡ 43 ವರ್ಷದ ವ್ಯಕ್ತಿಯೊಬ್ಬರು ಅಂಗಾಂಗ ದಾನದ ಮೂಲಕ ಐವರಿಗೆ ನೆರವಾಗಿದ್ದಾರೆ.

ಇಲ್ಲಿನ ಮಾರ್ಕಂಡ ಆರ್. ಎನ್ನುವವರು ಅಂಗಾಂಗ ದಾನಿ. ಅವರು ಬಡಗಿ ವೃತ್ತಿ ಮಾಡಿಕೊಂಡಿದ್ದರು. ಇತ್ತೀಚೆಗೆ ಜ್ವರ ಹಾಗೂ ತೀವ್ರ ತಲೆ ನೋವಿನಿಂದ ಕೆಲಸದ ಅವಧಿಯಲ್ಲಿ ಕುಸಿದುಬಿದ್ದಿದ್ದ ಅವರನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದು, ತುರ್ತು ಚಿಕಿತ್ಸೆ ನೀಡಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಕ್ತದಲ್ಲಿನ ಆಮ್ಲಜನಕದ ಮಟ್ಟವು ಕಡಿಮೆಯಾಗಿತ್ತು. ತೀವ್ರ ನಿಗಾ ಘಟಕದಲ್ಲಿ ಒಂದು ವಾರ ಚಿಕಿತ್ಸೆ ನೀಡಿದರೂ ಆರೋಗ್ಯದಲ್ಲಿ ಚೇತರಿಕೆ ಕಾಣಲಿಲ್ಲ. ಮಿದುಳಿನಲ್ಲಿ ರಕ್ತಸ್ರಾವ ಆಗಿರುವುದು ಖಚಿತಪಟ್ಟಿತು. ಇದರಿಂದಾಗಿ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿ, ಅಂಗಾಂಗ ದಾನ ಪ್ರಕ್ರಿಯೆ ನಡೆಸಲಾಯಿತು ಎಂದು ವೈದ್ಯರು ತಿಳಿಸಿದ್ದಾರೆ.

ಕುಟುಂಬ ಸದಸ್ಯರ ಸಮ್ಮತಿ ಮೇರೆಗೆ ವ್ಯಕ್ತಿಯ ಯಕೃತ್ತು, ಎರಡು ಮೂತ್ರಪಿಂಡಗಳು ಮತ್ತು ಕಣ್ಣಿನ ಕಾರ್ನಿಯಾಗಳನ್ನು ದಾನವಾಗಿ ಪಡೆಯಲಾಗಿದೆ. ಜೀವಸಾರ್ಥಕತೆ ಸಂಸ್ಥೆಯಡಿ ಹೆಸರು ನೋಂದಾಯಿಕೊಂಡ ಐವರಿಗೆ ಈ ಅಂಗಾಂಗಗಳು ನೆರವಾಗಿವೆ ಎಂದು ಹೇಳಿದ್ದಾರೆ.

ಮಣಿಪಾಲ್ ಆಸ್ಪತ್ರೆಯ ಡಾ.ನಾರಾಯಣಸ್ವಾಮಿ ಮೂಲಾ, 'ಸಾವಿನ ನಂತರ ಒಬ್ಬ ವ್ಯಕ್ತಿಯು ತನ್ನ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಸಂಕಷ್ಟದಲ್ಲಿರುವವರಿಗೆ ಹೇಗೆ ನೆರವಾಗಬಹುದು ಎಂಬುದಕ್ಕೆ ಈ ಪ್ರಕರಣ ಉತ್ತಮ ಉದಾಹರಣೆ. ದುಃಖದ ಸಂದರ್ಭದಲ್ಲಿಯೂ ಅವರ ಕುಟುಂಬದ ಸದಸ್ಯರು ಮಾನವೀಯತೆ ಮೆರೆದಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


'ಅಂಗಾಂಗ ದಾನಿಗಳ ಕೊರತೆಯಿಂದ ಅಂಗಾಂಗ ಕಸಿಗೆ ಕಾಯುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರ ಕುಟುಂಬಸ್ಥರಿಗೆ ಅಂಗಾಂಗ ದಾನದ ಬಗ್ಗೆ ಮನವರಿಕೆ ಮಾಡಿಸಲಾಗುತ್ತಿದೆ' ಎಂದು ಡಾ. ಮೂಲಾ ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಎಂಟನೇ ಐಇಇಇ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಎಸ್. ಎಸ್. ಅಯ್ಯಂಗಾರ್, ಚೈತ್ರಾ ವೆದುಲ್ಲಪಲ್ಲಿ, ವಿನೋದ್ ರಾಜಮಣಿ, ಟಿ. ಶ್ರೀನಿವಾಸ್, ಎಂ.ಪಿ. ಶ್ಯಾಮ್, ಆಯೋಜನೆ ಮತ್ತು ಸ್ಥಳ: ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಮೈಸೂರು ಮುಖ್ಯರಸ್ತೆ, ಬೆಳಿಗ್ಗೆ 9.30

ಬೆಂಗಳೂರು ಪೊಲೀಸ್ ಐ ಕೇರ್ ಪ್ರಾಜೆಕ್ಟ್–2024: ಅತಿಥಿಗಳು: ಬಿ. ದಯಾನಂದ, ಡಾ. ಗಣೇಶ್, ಸತೀಶ್ ಮಾಧವನ್, ಹರೀಶ್ ವಿ.ಎಸ್., ಸ್ಥಳ: ಸಿಎಆರ್ ಪರೇಡ್ ಮೈದಾನ, ಆಡುಗೋಡಿ, ಬೆಳಿಗ್ಗೆ 9.45

ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬದ ಉದ್ಘಾಟನೆ: ಚಂದ್ರಶೇಖರ ಕಂಬಾರ, ಗೋಷ್ಠಿಗಳು: 'ಜನಪದ ಸಾಹಿತ್ಯ ಚರಿತ್ರೆ ಮತ್ತು ತತ್ವಗಳು': ಕೆ.ಆರ್. ಸಂಧ್ಯಾರೆಡ್ಡಿ, 'ವಚನಗಳ ಹೊಸ ಓದಿನ ಅವಶ್ಯಕತೆ': ಓ.ಎಲ್. ನಾಗಭೂಷಣಸ್ವಾಮಿ, 'ಜೆಯಮೋಹನ್ ಅವರ ಕಥಾ ಸಾಹಿತ್ಯ': ಟಿ.ಪಿ. ಅಶೋಕ, 'ಆನೆ ಡಾಕ್ಟರ್' ಕಥಾ ಪ್ರಸ್ತುತಿ: ಶ್ರೀಕಾಂತ್ ಎನ್.ವಿ., ಸೌಮ್ಯ ಭಾಗವತ್, ನೀನಾಸಂ ಕಲಾವಿದರು, 'ಮಂಟೇಸ್ವಾಮಿ ಪದಗಳು': ತಂಬೂರಿ ಶಿವಣ್ಣ ಮತ್ತು ತಂಡ, ಆಯೋಜನೆ: ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10ರಿಂದ



ಚಂದ್ರಶೇಖರ ಕಂಬಾರ


ಕರ್ನಾಟಕ ರಾಜ್ಯೋತ್ಸವ: ಅಧ್ಯಕ್ಷತೆ: ಎಂ.ಎಸ್. ನಟರಾಜ್, ಅತಿಥಿಗಳು: ಕೆ.ಪಿ. ಪುತ್ತೂರಾಯ, ಎಸ್. ರಾಮಲಿಂಗೇಶ್ವರ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆ, ಕುಮಾರ ಪಾರ್ಕ್ ಪಶ್ಚಿಮ, ಬೆಳಿಗ್ಗೆ 10

2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಯುವ ರೆಡ್‌ಕ್ರಾಸ್, ಕನ್ನಡ ಸಂಘ, ಇಕೋ ಕ್ಲಬ್ ಚಟುವಟಿಕೆಗಳ ಉದ್ಘಾಟನೆ: ಎಂ. ಸತೀಶ್ ರೆಡ್ಡಿ, ಅತಿಥಿಗಳು: ಅರ್ಜುನ್ ದೇವಯ್ಯ ತೀತಮಾಡ, ಪಿಚ್ಚಳ್ಳಿ ಶ್ರೀನಿವಾಸ, ಅಧ್ಯಕ್ಷತೆ: ಪಾಪಣ್ಣ ಸಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಚ್‌ಎಸ್‌ಆರ್ ಬಡಾವಣೆ, ಬೆಳಿಗ್ಗೆ 10.30

'ಸ್ವೋಮಿನಾಯ ರೋರಿಚ್@150' ಕಲಾಕೃತಿಗಳ ಪ್ರದರ್ಶನದ ಉದ್ಘಾಟನೆ: ಬಸವರಾಜ ಹೊರಟ್ಟಿ, ಅತಿಥಿಗಳು: ವ್ಯಾಲೆರಿ ಕಾಝಿವ್, ಎಸ್.ಎನ್. ಅಗರವಾಲ್, ಬಿ.ಎಲ್. ಶಂಕರ್, ಶಶಿಧರ ರಾವ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

'ಸಂಸ್ಕೃತಿ ಸಿರಿ–2024' ಪ್ರಶಸ್ತಿ ಪ್ರದಾನ: ಶಿವರಾಜ ವಿ. ಪಾಟೀಲ, ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅತಿಥಿಗಳು: ಹಿ.ಚಿ. ಬೋರಲಿಂಗಯ್ಯ, ಗೊಲ್ಲಹಳ್ಳಿ ಶಿವಪ್ರಸಾದ್, ಬಿ.ಕೆ. ಶಿವರಾಂ, ಪ್ರಶಸ್ತಿ ಪುರಸ್ಕೃತರು: ದೊಡ್ಡರಂಗೇಗೌಡ, ಎ.ಎನ್. ಯಲ್ಲಪ್ಪರೆಡ್ಡಿ, ಮಲ್ಲೇಪುರಂ ಜಿ. ವೆಂಕಟೇಶ್, ಎಸ್.ಜಿ. ಸಿದ್ಧರಾಮಯ್ಯ, ಸಿ. ಬಸವಲಿಂಗಯ್ಯ, ಜಯಶ್ರೀ ಅರವಿಂದ್, ಆರ್.ಕೆ. ಶೆಟ್ಟಿ, ಆಯೋಜನೆ: ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಕನ್ನಡ ರಾಜ್ಯೋತ್ಸವ: ಅತಿಥಿಗಳು: ಪ್ರಿಯಾಂಕಾ ಉಪೇಂದ್ರ, ಡಾ.ಸಿ.ಆರ್. ಚಂದ್ರಶೇಖರ್, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 5



ಪ್ರಿಯಾಂಕಾ ಉಪೇಂದ್ರ

ಸಹನಾ ವಿಜಯಕುಮಾರ ಅವರ 'ಮಾಗಧ' ಪುಸ್ತಕ ಬಿಡುಗಡೆ: ಪುಸ್ತಕ ಪರಿಚಯ: ಶತವಧಾನಿ ಆರ್. ಗಣೇಶ್, ಗಜಾನನ ಶರ್ಮ, ಪ್ರಕಾಶ್ ಬೆಳವಾಡಿ, ಅಧ್ಯಕ್ಷತೆ: ಪ್ರಧಾನ ಗುರುದತ್ತ, ಉಪಸ್ಥಿತಿ: ಎಸ್. ಎಲ್. ಭೈರಪ್ಪ, ಆಯೋಜನೆ: ಸಾಹಿತ್ಯ ಭಂಡಾರ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಜಯನಗರ ಏಳನೇ ಬ್ಲಾಕ್, ಸಂಜೆ 5.30


ಎಸ್.ಎಲ್. ಭೈರಪ್ಪ

ಅಜಿತ್‌ಕುಮಾರ್ ಸ್ಮಾರಕ 'ನಾಟ್ಯಶ್ರೀ', 'ಯೋಗಶ್ರೀ', 'ಅಜಿತಶ್ರೀ' ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಮೋಹನ್ ಆಳ್ವ, ಅತಿಥಿ: ಮಾ. ವೆಂಕಟರಾಮು, ಅಜೀತಶ್ರೀ ಪ್ರಶಸ್ತಿ ಪುರಸ್ಕೃತರು: ಲಲಿತಾ ಶ್ರೀನಿವಾಸನ್, ನಾಟ್ಯಶ್ರೀ ಪ್ರಶಸ್ತಿ ಪುರಸ್ಕೃತರು: ಪುಲಿಕೇಶಿ ಕಸ್ತೂರಿ, ಬಿ.ಎನ್.ಎಸ್. ಮುರಳಿ, ಹುಲಿಗಪ್ಪ ಕಟ್ಟಿಮನಿ, ಯೋಗಶ್ರೀ ಪ್ರಶಸ್ತಿ ಪುರಸ್ಕೃತರು: ಎ.ಎಸ್. ಚಂದ್ರಶೇಖರ್, ಆಯೋಜನೆ: ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.45

ಕನ್ನಡ ಪುಸ್ತಕ ಹಬ್ಬ: 'ಪ್ರಕ್ಷುಬ್ಧ ರಾಧೇಯ' ಏಕವ್ಯಕ್ತಿ ತಾಳಮದ್ದಲೆ: ಭಾಗವತರು: ಅನಂತ ಪದ್ಮನಾಭ ಫಾಟಕ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಸಂಜೆ 6

'ಬ್ರೈಡ್ ಇನ್ ದಿ ಹಿಲ್ಸ್' ಪುಸ್ತಕದ ಕುರಿತು ಚರ್ಚೆ: ಭಾಗವಹಿಸುವವರು: ಅಮಿತ್ ಚೌಧರಿ, ರಾಜೇಂದ್ರ ಚೆನ್ನಿ, ಅರವಿಂದ ನರೈನ್, ವನಮಾಲಾ ವಿಶ್ವನಾಥ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30


Guru Punvaanii
Fair Policy | Fair Property
9 ಮತ್ತು 10 ರಂದು
ಗ್ರೇಟರ್ ಲಾಂಚ್‌ಗಾಗಿ
ನಮ್ಮೊಂದಿಗೆ ಸೇರಿ
PRM/KA/RERA/1270/302/PR/300924/007104
ssp
Development partner
ELEGANCE
ಭೀಮೇನಹಳ್ಳಿ, ಬಿಡದಿ
ಬೆಳಿಗ್ಗೆ 9 ಗಂಟೆಯ ನಂತರ
ಮನರಂಜನೆ ಮತ್ತು ಊಟದ ವ್ಯವಸ್ಥೆ
₹ 1.65*
ಕೋಟಿಯಿಂದ ಪ್ರಾರಂಭ
ಶ್ರೀ ರಮೇಶ್ ಅರವಿಂದ್
ಸ್ಯಾಂಡಲ್ ವುಡ್ ಸ್ಟಾರ್
9th Nov
ಮುಖ್ಯ ಅತಿಥಿ
ಗೌರವ ಅತಿಥಿ
ಕುಮಾರಿ ಮೇಘಾ ಶೆಟ್ಟಿ
10th Nov
ಸ್ಯಾಂಡಲ್ ವುಡ್ ನಟಿ
4 ಬಿಎಚ್‌ಕೆ ಹವಾಮಾನ ನಿಯಂತ್ರಣ ವಿಲ್ಲಾಗಳು
ವಿಶೇಷ ಉದ್ಘಾಟನೆ ದಿನದ ಕೊಡುಗೆಗಳು
ಚಿನ್ನದ ನಾಣ್ಯ 5 ಗ್ರಾಂ
8 ಲಕ್ಷ ಮೌಲ್ಯದ ತನಿಷ್ಕ್ ವೋಚರ್
ಫಾರ್ಚೂನ್ ಚಕ್ರವನ್ನು ತಿರುಗಿಸಿ
ಲಾಂಚ್ ಬುಕಿಂಗ್‌ನಲ್ಲಿ ಸ್ಪಾಟ್ ಡಿಸ್ಕೌಂಟ್‌ಗಳು
*Terms & Conditions Apply
7676 000 909
gurupunvaanii.com
ಸ್ಕ್ಯಾನ್ ಮಾಡಿ ಮತ್ತು ನೋಂದಾಯಿಸಿ

‘18 ರಸ್ತೆಗಳ ವೈಟ್ ಟಾಪಿಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 18 ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲಾಗುತ್ತಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ 16 ಪ್ಯಾಕೇಜ್‌ಗಳನ್ನು ಮಾಡಿಕೊಳ್ಳಲಾಗಿದ್ದು, ನೂರಕ್ಕೂ ಅಧಿಕ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಮಾಡಲು ನಿರ್ಧರಿಸಲಾಗಿದೆ. ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕಿರುವುದರಿಂದ ಸಂಚಾರ ಪೊಲೀಸರ ಅನುಮತಿ ಕೇಳಲಾಗಿತ್ತು. ಅವರು 48 ಕಾಮಗಾರಿಗಳನ್ನು ಆರಂಭಿಸಲು ಅನುಮತಿ ನೀಡಿದ್ದರು. ಬಳಿಕ ಒಳಚರಂಡಿ ಮಂಡಳಿಯ ಒಪ್ಪಿಗೆ ಕೇಳಿದಾಗ ಅವರು ಆರಂಭಿಕ ಹಂತವಾಗಿ 18 ರಸ್ತೆಗಳಲ್ಲಿ ಮಾತ್ರ ಕಾಮಗಾರಿ ಹಮ್ಮಿಕೊಳ್ಳಲು ಅನುಮತಿ ನೀಡಿತ್ತು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ವಿದ್ಯುತ್ ಕೇಬಲ್ ಅಳವಡಿಸುವ ಕಾರ್ಯ ಸಹಿತ ಸಂಬಂಧಪಟ್ಟ ಎಲ್ಲರಿಗೂ ಅವಕಾಶ ನೀಡಿಯೇ ವೈಟ್ ಟಾಪಿಂಗ್ ಕಾಮಗಾರಿ ಹಮ್ಮಿಕೊಳ್ಳಲಾಗುತ್ತಿದೆ. ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಬೇಕಿರುವುದರಿಂದ ಜನರಿಗೆ ಸ್ವಲ್ಪ ಮಟ್ಟಿಗೆ ಅನನುಕೂಲ ಆಗಬಹುದು ಎಂದು ಹೇಳಿದರು.

‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಇಂದು

ಬಿಬಿಎಂಪಿ ವ್ಯಾಪ್ತಿಯ ಆರ್.ಆರ್. ನಗರ ವಲಯದಲ್ಲಿ ನ.8ರಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮ ನಡೆಸಲಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಲು ಸಾರ್ವಜನಿಕರಿಗೆ ಅನುಕೂಲವಾಗಲೆಂದು ಹಾಗೂ ವಲಯ ಮಟ್ಟದಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳನ್ನು ನಿಯಮಿತವಾಗಿ ಪರಿಶೀಲನೆ ನಡೆಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆರ್.ಆರ್. ನಗರ ವಲಯ ಯಶವಂತಪುರದ ಎಂಇಐ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಬೆಳಿಗ್ಗೆ 10ಕ್ಕೆ ಪರಿಶೀಲನೆ ನಡೆಸಲಿದ್ದಾರೆ. ಮಧ್ಯಾಹ್ನ 3ರಿಂದ ಆರ್.ಆರ್ ನಗರ ವಲಯ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಲಿದ್ದಾರೆ.

ಹಿಂದಿನ ಗುತ್ತಿಗೆದಾರರ ‘ಪ್ರೀಕಾಸ್ಟ್’ನಲ್ಲಿ ಗುಣಮಟ್ಟ ಕೊರತೆ; ಕಾಮಗಾರಿಗೆ ವಿಘ್ನ


ಈಜಿಪುರ ಮೇಲ್ಸೇತುವೆ: ಸೆಗ್‌ಮೆಂಟ್‌ನಲ್ಲಿ ಬಿರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಕಾಮಗಾರಿ ನಡೆಯುವ ಹಂತದಲ್ಲೇ ಸೆಗ್‌ಮೆಂಟ್‌ನಲ್ಲಿ ಬಿರುಕು ಕಂಡುಬಂದಿದೆ. ನಾಲ್ಕು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ‘ಪ್ರೀಕಾಸ್ಟ್ ಸೆಗ್‌ಮೆಂಟ್’ನಿಂದ ಸಿಮೆಂಟ್, ಜಲ್ಲಿ ಹೊರಬರುತ್ತಿವೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಮಧ್ಯ ಪ್ರವೇಶದಿಂದ ಎರಡು ತಿಂಗಳಿಂದ ವೇಗ ಪಡೆದುಕೊಂಡಿದ್ದ ಕಾಮಗಾರಿಗೆ ಮತ್ತೆ ವಿಘ್ನ ಎದುರಾಗಿದೆ. ಹಿಂದಿನ ಗುತ್ತಿಗೆದಾರರು ನಿರ್ಮಿಸಿದ್ದ ‘ಪ್ರೀಕಾಸ್ಟ್ ಸೆಗ್‌ಮೆಂಟ್’ನಲ್ಲಿ ಬಿರುಕು ಕಾಣಿಸಿಕೊಂಡಿದೆ. ಪಿಲ್ಲರ್‌ಗಳ ಮೇಲೆ ಸೆಗ್‌ಮೆಂಟ್‌ಗಳನ್ನು ಇರಿಸಿ, ಕೇಬಲ್ ಮೂಲಕ ಅದನ್ನು ಜೋಡಿಸುವ ಪ್ರಕ್ರಿಯೆ ನಡೆಯುವ ಹಂತದಲ್ಲಿ ಸೆಗ್‌ಮೆಂಟ್‌ನಿಂದ ಜಲ್ಲಿ ಹಾಗೂ ಸಿಮೆಂಟ್ ಉದುರಿ, ಬಿರುಕು ದೊಡ್ಡದಾಗುತ್ತಿದೆ.

ಕೋರಮಂಗಲ ಹೊರ ವರ್ತುಲ ರಸ್ತೆಯಲ್ಲಿ (ಈಜಿಪುರ) ಎಲಿವೇಟೆಡ್ ಕಾರಿಡಾರ್ 2.5 ಕಿ.ಮೀ. ಉದ್ದದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು 2017ರಿಂದ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ಆರಂಭಿಸಿತ್ತು. 2019ರೊಳಗೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಕಾಮಗಾರಿ ವಿಳಂಬದ ಕಾರಣದಿಂದ ಹೈಕೋರ್ಟ್ ಸೂಚನೆಯಂತೆ ಗುತ್ತಿಗೆಯನ್ನು 2022ರಲ್ಲಿ ರದ್ದುಗೊಳಿಸಲಾಯಿತು. ನಂತರ, ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ‘ಟರ್ನ್ ಕೀ ಲಂಪ್‌ಸಮ್’ ಗುತ್ತಿಗೆ ನೀಡಿ, 2023ರ ನವೆಂಬರ್ 17ರಂದು ಕಾರ್ಯಾದೇಶ ನೀಡಲಾಯಿತು.



ಈಜಿಪುರದಲ್ಲಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿ

ಹಿಂದಿನ ಗುತ್ತಿಗೆದಾರರು ನಿರ್ಮಿಸಿದ್ದ 69 ಪ್ರೀಕಾಸ್ಟ್ ಸೆಗ್‌ಮೆಂಟ್‌ಗಳ ಪೈಕಿ 11 ಸೆಗ್‌ಮೆಂಟ್‌ಗಳನ್ನು ಈಗಿನ ಗುತ್ತಿಗೆದಾರರು ಅಳವಡಿಸಿದ್ದಾರೆ. ಇವುಗಳನ್ನು ಜೋಡಿಸುವ ಸಂದರ್ಭದಲ್ಲಿ ಒಂದು ಸೆಗ್‌ಮೆಂಟ್‌ನಿಂದ ಸಿಮೆಂಟ್, ಜಲ್ಲಿ ಉದುರಿ ಬಿರುಕು ಕಾಣಿಸಿಕೊಂಡಿದೆ. ಹೀಗಾಗಿ, ಕಾಮಗಾರಿಯನ್ನು ಒಂದು ವಾರದಿಂದ ನಿಲ್ಲಿಸಲಾಗಿದೆ. ಇದರಿಂದ ಕಾಮಗಾರಿ ವೇಗ ಕುಂಠಿತಗೊಂಡಿದ್ದು, ಹಿಂದಿನ ಕಾರ್ಯ-ಯೋಜನೆಗಿಂತ ವಿಳಂಬವಾಗುವ ಸಾಧ್ಯತೆ ಇದೆ.



ಈಜಿಪುರ ಮೇಲ್ಸೇತುವೆ ಸೆಗ್‌ಮೆಂಟ್‌ನಲ್ಲಿ ಬಿರುಕು ಬಿಟ್ಟಿರುವುದು

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಜೆ.ಎಂ. ಚಂದ್ರ ಕಿಶನ್ ನೇತೃತ್ವದ ತಜ್ಞರ ತಂಡ ಸ್ಥಳಕ್ಕೆ ಭೇಟಿ ನೀಡಿ ಸೆಗ್‌ಮೆಂಟ್ ಅನ್ನು ಪರಿಶೀಲಿಸಿ, ವರದಿ ನೀಡಿದೆ. ಈಗ ಅಳವಡಿಸಿ, ಬಿರುಕು ಬಿಟ್ಟಿರುವ ಸೆಗ್‌ಮೆಂಟ್ ಅನ್ನು ತೆಗೆದು ಬೇರೊಂದನ್ನು ಅಳವಡಿಸಲು ಈ ತಂಡ ಸೂಚಿಸಿದೆ. ಅಲ್ಲದೇ, ಅಳವಡಿಕೆಗೆ ಬಾಕಿ ಇರುವ ಸೆಗ್‌ಮೆಂಟ್‌ಗಳ ಸಾಮರ್ಥ್ಯ ಪರಿಶೀಲನೆ ನಡೆಸಿದ ಬಳಿಕವೇ ಅವುಗಳನ್ನು ಬಳಸುವಂತೆಯೂ ಶಿಫಾರಸು ಮಾಡಿದೆ.

‘ನಾಲ್ಕು ವರ್ಷಗಳಿಂದ ಕಾಮಗಾರಿ ನಡೆಯದೆ ಸಮಸ್ಯೆ ಅನುಭವಿಸಿದ್ದೇವೆ. ಎರಡು ತಿಂಗಳಿಂದ ಕಾಮಗಾರಿ ವೇಗವಾಗಿ ನಡೆಯುತ್ತಿತ್ತು. ಇದೀಗ ಏನೋ ಸಮಸ್ಯೆ ಎಂದು ನಿಲ್ಲಿಸಿದ್ದಾರೆ. ನಾವು ಮಾತ್ರ ನಿತ್ಯವೂ ಸಂಚಾರ ದಟ್ಟಣೆಯಿಂದ ನರಳುತ್ತಿದ್ದೇವೆ’ ಎಂದು ಸ್ಥಳೀಯರಾದ ರಾಜಮೋಹನ್ ಅಳಲು ತೋಡಿಕೊಂಡರು.

‘ಸೆಗ್‌ಮೆಂಟ್ ಬದಲಿಸಲು ಸೂಚನೆ’

‘ಹಿಂದಿನ ಗುತ್ತಿಗೆದಾರರು ನಿರ್ಮಿಸಿದ್ದ ಪ್ರೀಕಾಸ್ಟ್ ಸೆಗ್‌ಮೆಂಟ್‌ನಲ್ಲಿ ದೋಷ ಕಾಣಿಸಿಕೊಂಡಿದೆ. ಒಂದು ಸೆಗ್‌ಮೆಂಟ್‌ನಲ್ಲಿ ಮಾತ್ರ ಸಮಸ್ಯೆಯಾಗಿದ್ದು, ಅದನ್ನು ಬದಲಿಸಲು ಸೂಚಿಸಲಾಗಿದೆ. ಎಲ್ಲ ರೀತಿಯ ಪೂರ್ವ ಪರೀಕ್ಷೆಗಳನ್ನು ಮಾಡಲಾಗುತ್ತಿದೆ. ಆದರೆ ಈ ದೋಷ ಕಂಡುಬಂದಿರಲಿಲ್ಲ. ಇನ್ನೂ ಹೆಚ್ಚು ಜಾಗ್ರತೆ ವಹಿಸಿ ಕಾಮಗಾರಿ ಮುಂದುವರಿಸಲಾಗುತ್ತದೆ’ ಎಂದು ಬಿಬಿಎಂಪಿಯ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ಸತ್ತಂತೆ ನಟಿಸಿ ಬಚಾವಾದ ಶಿಕ್ಷಕಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತನ್ನ ಹತ್ಯೆಗೆ ಯತ್ನಿಸಿದ ಆರೋಪಿಗಳಿಂದ ಸಿನಿಮೀಯ ರೀತಿಯಲ್ಲಿ ಯೋಗ ಶಿಕ್ಷಕಿ ಪಾರಾಗಿರುವ ಪ್ರಕರಣ ನಡೆದಿದೆ. ಈ ಸಂಬಂಧ ಹತ್ಯೆಗೆ ಸುಪಾರಿ ನೀಡಿದ್ದ ಮಹಿಳೆ ಸೇರಿದಂತೆ ಐವರನ್ನು ಪೊಲೀಸರು ಬಂಧಿಸಿದ್ದಾರೆ.

‘ಬೆಂಗಳೂರಿನ ಕೆ.ಆರ್.ಪುರ ಯೋಗ ಶಿಕ್ಷಕಿಯೊಬ್ಬರು ಪತಿಯಿಂದ ಪ್ರತ್ಯೇಕವಾಗಿದ್ದರು. ಅಲ್ಲದೆ, ತನ್ನ ಪತಿಯ ಸ್ನೇಹಿತನ ಜತೆ ಅಕ್ರಮ ಸಂಬಂಧ ಹೊಂದಿದ್ದರು. ಈ ಸಂಬಂಧ ಸ್ನೇಹಿತನ ಪತ್ನಿಗೆ ಗೊತ್ತಾಗಿದ್ದು, ಆಕ್ರೋಶಗೊಂಡರು. ಬೆಂಗಳೂರಿನ ಸತೀಶ್ ರೆಡ್ಡಿ ಎಂಬುವರನ್ನು ಸಂಪರ್ಕಿಸಿ, ಯೋಗ ಶಿಕ್ಷಕಿ ಹತ್ಯೆಗೆ ಸುಪಾರಿ ನೀಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಸತೀಶ್ ರೆಡ್ಡಿ ಮತ್ತು ಸಹಚರರು ಯೋಗ ಶಿಕ್ಷಕಿಯನ್ನು ಸಂಪರ್ಕಿಸಿ, ವಿಶ್ವಾಸಗಳಿಸಿಕೊಂಡಿದ್ದರು. ಪ್ರವಾಸಕ್ಕೆ ಕರೆದುಕೊಂಡು ಹೋಗುವ ನೆಪದಲ್ಲಿ ಶಿಕ್ಷಕಿಯನ್ನು ಬೆಂಗಳೂರಿನ ಹೊರವಲಯಕ್ಕೆ ಕರೆತಂದು ಹಲ್ಲೆ ನಡೆಸಿದ್ದರು ಎಂದಿದ್ದಾರೆ.

‘ಯೋಗ ಶಿಕ್ಷಕಿ ನಿತ್ರಾಣಗೊಂಡು ಪ್ರಜ್ಞೆ ತಪ್ಪಿದ್ದರು. ಅವರು ಮೃತಪಟ್ಟಿದ್ದಾರೆ ಎಂದು ಭಾವಿಸಿ ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರಹಳ್ಳಿ ಬಳಿಯ ಅರಣ್ಯ ಪ್ರದೇಶದಲ್ಲಿ ಸುಪಾರಿ ಪಡೆದವರು ಹೂಳಲು ಮುಂದಾಗಿದ್ದರು. ಆಗ ಎಚ್ಚರಗೊಂಡ ಶಿಕ್ಷಕಿ ಕೆಲಹೊತ್ತು ಸತ್ತಂತೆ ನಟಿಸಿ, ಅಲ್ಲಿಂದ ತಪ್ಪಿಸಿಕೊಂಡರು. ಸಮೀಪದ ಗ್ರಾಮಕ್ಕೆ ತೆರಳಿ ಜನರಿಗೆ ನಡೆದ ವಿಚಾರ ಹೇಳಿದರು. ಗ್ರಾಮಸ್ಥರು ಆಗ ದಿಬ್ಬೂರಹಳ್ಳಿ ಠಾಣೆಗೆ ಕರೆದುಕೊಂಡು ಬಂದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಅಕ್ರಮ ಸಂಬಂಧದ ಕಾರಣದಿಂದ ಈ ಪ್ರಕರಣ ನಡೆದಿದೆ. ಸತೀಶ್ ರೆಡ್ಡಿ, ರವಿ, ರಮಣಾರೆಡ್ಡಿ, ನಾಗೇಂದ್ರ ರೆಡ್ಡಿ ಮತ್ತು ಬಿಂದು ಎಂಬುವವರನ್ನು ಬಂಧಿಸಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸಿ ‘ಪ್ರಜಾವಾಣಿ’ಗೆ ಹೇಳಿದ್ದಾರೆ.

ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕಾರನ್ನು ಕೊಪ್ಪಳದಿಂದ ಕಳ್ಳತನ ಮಾಡಿದ್ದಾರೆ. ಯೋಗ ಶಿಕ್ಷಕಿಯ ಆಭರಣಗಳನ್ನು ಸಹ ದೋಚಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಬಿಷಪ್ ಕಾಟನ್ ಶಾಲೆಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ನಗರದ ಶಾಲಾ, ಕಾಲೇಜುಗಳು ಹಾಗೂ ಪ್ರತಿಷ್ಠಿತ ಹೋಟೆಲ್‌ಗಳಿಗೆ ಹುಸಿ ಬಾಂಬ್ ಬೆದರಿಕೆ ಹೊತ್ತು ಇ-ಮೇಲ್‌ಗಳು ಬರುತ್ತಿರುವುದು ಮುಂದುವರೆದಿದ್ದು, ಗುರುವಾರ ಸಹ ಕಬ್ಬನ್ ಪಾರ್ಕ್ ಪೊಲೀಸ್ ಠಾಣಾ ವ್ಯಾಪ್ತಿಯ ಬಿಷಪ್ ಕಾಟನ್ ಬಾಲಕ ಹಾಗೂ ಬಾಲಕಿಯರ ಶಾಲೆಗೆ ಇಂತಹದ್ದೇ ಸಂದೇಶ ಬಂದು ಆತಂಕ ಸೃಷ್ಟಿಯಾಗಿತ್ತು.

ಶಾಲೆಯ ವೆಬ್‌ಸೈಟ್‌ಗೆ ಕಿಡಿಗೇಡಿಗಳು ಗುರುವಾರ ಮುಂಜಾನೆ ಹುಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದರು. ಸಂಜೆ ವೇಳೆ ಇ-ಮೇಲ್ ಪರಿಶೀಲನೆ ನಡೆಸುತ್ತಿದ್ದಾಗ ಆಡಳಿತ ಮಂಡಳಿಯ ಗಮನಕ್ಕೆ ಸಂದೇಶ ಬಂದಿದ್ದು ಗೊತ್ತಾಗಿತ್ತು. ತಕ್ಷಣವೇ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹೊರಕ್ಕೆ ಬಂದಿದ್ದರು. ಬಳಿಕ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು.

ಬಾಂಬ್ ನಿಷ್ಕ್ರಿಯ ದಳ, ಬಾಂಬ್ ತಪಾಸಣೆ ದಳ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಶಾಲಾ ಆವರಣದಲ್ಲಿ ಪರಿಶೀಲನೆ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳಾಗಲೀ, ರಾಸಾಯನಿಕ ಪದಾರ್ಥಗಳಾಗಲೀ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಹಿಂದೆಯೂ ಹನುಮಂತ ನಗರ, ಸದಾಶಿವನಗರ, ವಿ.ವಿ. ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮೂರು ಎಂಜಿನಿಯರಿಂಗ್ ಕಾಲೇಜುಗಳ ಇ-ಮೇಲ್‌ಗೆ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ಅಪರಾಧ ಸುದ್ದಿ

ಮದ್ಯದ ಅಮಲಿನಲ್ಲಿ ರೋಗಿಗೆ ಚಿಕಿತ್ಸೆ

ಬೆಂಗಳೂರು: ಮದ್ಯ ಸೇವಿಸಿ ರೋಗಿಯೊಬ್ಬರಿಗೆ ಚಿಕಿತ್ಸೆ ನೀಡಿದ ಆರೋಪದ ಅಡಿ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಆಸ್ಪತ್ರೆಯೊಂದರ ವೈದ್ಯ ಹಾಗೂ ವಾರ್ಡ್ ಬಾಯ್ ವಿರುದ್ಧ ಎನ್‌ಸಿಆರ್ ದಾಖಲಾಗಿದೆ.

‘ತೀವ್ರ ಜ್ವರದಿಂದ ಬಳಲುತ್ತಿದ್ದ ಸ್ನೇಹಾ ಭಟ್ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ವೈದ್ಯ ಪ್ರದೀಪ್ ಹಾಗೂ ವಾರ್ಡ್ ಬಾಯ್ ಮಹೇಂದ್ರ ಅವರು ಚಿಕಿತ್ಸೆ ನೀಡಿದ್ದರು. ಅಲ್ಲದೇ ಮದ್ಯದ ಅಮಲಿನಲ್ಲಿ ನಾಲ್ಕರಿಂದ ಐದು ಬಾರಿ ರೋಗಿಗೆ ಚುಚ್ಚುಮದ್ದು ನೀಡಿದ್ದರು. ರೋಗಿ ಜತೆಗೆ ಅಸಭ್ಯವಾಗಿಯೂ ವರ್ತನೆ ತೋರಿದ್ದರು’ ಎಂದು ಆರೋಪಿಸಿ ದೂರು ನೀಡಲಾಗಿದೆ.

‘ಚಿಕಿತ್ಸೆ ವೇಳೆ ನಿರ್ಲಕ್ಷ್ಯ ತೋರಿದ್ದ ಆರೋಪದ ಅಡಿ ರೋಗಿಯ ಸಂಬಂಧಿಕರು ದೂರು ನೀಡಿದ್ದಾರೆ. ದಾಖಲೆಗಳನ್ನು ಸಂಗ್ರಹಿಸಿ ವೈದ್ಯಕೀಯ ಮಂಡಳಿಗೆ ಮಾಹಿತಿ ನೀಡಲಾಗಿದೆ. ಮಂಡಳಿಯಿಂದ ಪ್ರತಿಕ್ರಿಯೆ ಬಂದ ಬಳಿಕ ಇಬ್ಬರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಬ್ಬಂದಿಗೆ ತರಾಟೆ: ಮದ್ಯದ ಅಮಲಿನಲ್ಲಿ ವೈದ್ಯ ಹಾಗೂ ವಾರ್ಡ್ ಬಾಯ್ ಇರುವುದನ್ನು ಗಮನಿಸಿದ್ದ ಸ್ನೇಹಾ ಭಟ್ ಸಂಬಂಧಿಕರು, ಇಬ್ಬರನ್ನೂ ತರಾಟೆ ತೆಗೆದುಕೊಂಡಿದ್ದರು. ‘ನಿರ್ಲಕ್ಷ್ಯ ತೋರಿದ ವೈದ್ಯರನ್ನು ಪ್ರಶ್ನಿಸಿದ ಮೇಲೆ ಆಸ್ಪತ್ರೆಯಿಂದಲೇ ಅವರು ಪರಾರಿ ಆಗಿದ್ದರು. ಮದ್ಯ ಸೇವಿಸಿ ಚಿಕಿತ್ಸೆ ನೀಡಿದ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ರೋಗಿಯ ಸಂಬಂಧಿಕರು ಆಗ್ರಹಿಸಿದ್ದಾರೆ.

ಮಹಿಳೆ ಮೇಲೆ ಹಲ್ಲೆಗೆ ಯತ್ನ

ಬೆಂಗಳೂರು: ಬೀದಿ ನಾಯಿಗಳಿಗೆ ಊಟ ಹಾಕುತ್ತಿದ್ದ ಮಹಿಳೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ ಎಂಬ ಆರೋಪದ ಅಡಿ ನಾಲ್ವರ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಠಾಣಾ ವ್ಯಾಪ್ತಿಯ ಬಸವನಗರ ನಿವಾಸಿ ಆ್ಯನಿ ಕೆ. ಜಾರ್ಜ್ ಅವರು ನೀಡಿರುವ ದೂರಿನ ಮೇರೆಗೆ ಗುರುರಾಜ ಲೇಔಟ್‌ನ ನಿವಾಸಿ ನಂದಿನಿ, ಅವರ ಪತಿ, ಸಿಂಧು ಹಾಗೂ ಅವರ ಪತಿ ಮತ್ತು ಅಪರಿಚಿತ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಾಗಿದೆ.

‘ಆರೋಪಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಬಿಎಂಪಿ ನೌಕರರ ಕನ್ನಡ ಸಂಘದಿಂದ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಹಾಗೂ ಪುನೀತ್ ರಾಜಕುಮಾರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿ ನಡೆಯಿತು.

ಚಿತ್ರ ನಿರ್ದೇಶಕ ಇಂದ್ರಜಿತ್ ಲಂಕೇಶ್, ಕಲಾವಿದರಾದ ಗಿರಿಜಾ ಲೋಕೇಶ್, ಅಭಿಜಿತ್, ಮಂಡ್ಯ ರಮೇಶ್, ಮಿಮಿಕ್ರಿ ಗೋಪಿ ಹಾಗೂ ಬರಹಗಾರರಾದ ರಾಜಶೇಖರ ಮಠಪತಿ, ಸತ್ಯಮಂಗಲ ಮಹದೇವ, ವ.ಚ. ಚನ್ನೇಗೌಡ, ನಾ. ಶ್ರೀಧರ್, ಆರ್.ಎ. ಪ್ರಸಾದ್, ಜಿ. ಸುಕುಮಾರನ್, ಸಿ.ಎಂ.ಶಿವಕುಮಾರ್ ನಾಯ್ಕ್, ಪತ್ರಕರ್ತರಾದ ಶಿವರಾಜ್ ಕುಮಾರ್, ದಿವ್ಯಾ ರಘುನಾಥ್, ಈರಣ್ಣ ಎನ್., ಶ್ರೀನಿವಾಸಲು ಜಿ.ಎಚ್., ಕನ್ನಡ ಚಂದ್ರು , ರಘು, ಮುನಿರಾಜು, ಅವಿರಾಜ್, ವೆಂಕಟೇಶ್‌ಎಲ್, ಗಂಗಾಧರ್, ಚಂದ್ರಕಾಂತ, ಶ್ರೀನಿವಾಸ್, ರವಿಚಂದ್ರು, ಬಿ.ವಿ. ಮಂಜುನಾಥ್ ಅವರಿಗೆ ಪುನೀತ್ ರಾಜಕುಮಾರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತರಾದ ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ಉಪ ಆಯುಕ್ತ ಮಂಜುನಾಥ ಸ್ವಾಮಿ, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಬಿಬಿಎಂಪಿ ನೌಕರರ ಕನ್ನಡ ಸಂಘದ ಅಧ್ಯಕ್ಷ ಸಾಯಿಶಂಕರ್ ಉಪಸ್ಥಿತರಿದ್ದರು.

ಸಚಿವ ಕೆ.ಎಚ್.ಮುನಿಯಪ್ಪ ನಿವಾಸದ ಎದುರು ಪ್ರತಿಭಟನೆ

ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲು ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಲವತ್ತಾದ ಕೃಷಿ ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಳ್ಳುತ್ತಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ(ಕೆಐಎಡಿಬಿ) ಕ್ರಮ ಖಂಡಿಸಿ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ಹ್ಯಾಡಾಳ ಹಾಗೂ ಗೋಕರೆ ಬಚ್ಚಹಳ್ಳಿಯ ರೈತರು ಸಚಿವ ಕೆ.ಎಚ್.ಮುನಿಯಪ್ಪ ನಿವಾಸದ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಚನ್ನರಾಯಪಟ್ಟಣದ ನಾಡಕಚೇರಿ ಎದುರು 949 ದಿನಗಳಿಂದ ನಿರಂತರ ಧರಣಿ ನಡೆಸಿದ್ದರೂ ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟಿಲ್ಲ. ಎರಡು ಗ್ರಾಮದ ಕೆಲವು ರೈತರಿಗೆ ಮತ್ತೆ ನೋಟಿಸ್ ಜಾರಿ ಮಾಡಲಾಗಿದೆ. ರೈತರ ಜಮೀನನ್ನು ರೈತರಿಗೇ ಉಳಿಸಬೇಕು ಎಂದು ಪ್ರತಿಭಟನಕಾರರು ಭಿತ್ತಿಪತ್ರ ಹಿಡಿದು ಆಗ್ರಹಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ‘ಕಾಂಗ್ರೆಸ್ ಸರ್ಕಾರವು ಕೊಟ್ಟ ಮಾತು ತಪ್ಪಿದೆ’ ಎಂದು ಆಪಾದಿಸಿದರು.



ಹ್ಯಾಡಾಳ ಗ್ರಾಮದ ರೈತರೊಬ್ಬರು ಸಚಿವ ಕೆ.ಎಚ್.ಮುನಿಯಪ್ಪ ಅವರ ಕಾಲಿಗೆರಗಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ಬೇಡಿಕೊಂಡರು ಪ್ರಜಾವಾಣಿ ಚಿತ್ರ

‘ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ 13 ಹಳ್ಳಿಯ 1,779 ಎಕರೆಯನ್ನು ಕೈಗಾರಿಕೆಗಾಗಿ ಭೂಸ್ವಾಧೀನ ಮಾಡಿಕೊಳ್ಳಲು ಕೆಐಎಡಿಬಿ ನೋಟಿಸ್ ಜಾರಿ ಮಾಡಿತ್ತು. ನೋಟಿಸ್ ಜಾರಿಯಾದ ಬೆನ್ನಲ್ಲೇ ಹೋರಾಟ ನಡೆಸಿದ್ದರಿಂದ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಕಳೆದ ವಿಧಾನಸಭೆ ಚುನಾವಣೆ ವೇಳೆ ಪ್ರಚಾರಕ್ಕೆ ಬಂದಿದ್ದ ಕೆ.ಎಚ್.ಮುನಿಯಪ್ಪ ಅವರು ಯಾವುದೇ ಕಾರಣಕ್ಕೂ ಕೃಷಿ ಜಮೀನನ್ನು ಸ್ವಾಧೀನ ಮಾಡಿಕೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದರು. ಸಿದ್ದರಾಮಯ್ಯ ಅವರೂ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲಾಗುವುದು ಎಂದು ಆಶ್ವಾಸನೆ ನೀಡಿದ್ದರು. ಇದೀಗ ಎರಡು ಗ್ರಾಮದ ರೈತರಿಗೆ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಪ್ರತಿಭಟನಕಾರರು ದೂರಿದರು.

ಮಹಿಳಾ ಆಯೋಗದ ಅಧ್ಯಕ್ಷೆ ದಿಢೀರ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಕಚೇರಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ಗುರುವಾರ ದಿಢೀರ್ ಭೇಟಿ ನೀಡಿ ಹಲವು ಪ್ರಕರಣಗಳ ಸಂಬಂಧ ಮಾಹಿತಿ ಪಡೆದರು.

ಸಿಸಿಬಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದು, ಅಧ್ಯಕ್ಷರಿಗೆ ಮಾಹಿತಿ ನೀಡಿದರು.

ಸಿಸಿಬಿಯಲ್ಲಿ ಮಹಿಳಾ ಸಂರಕ್ಷಣಾ ವಿಭಾಗವು ಕಾರ್ಯನಿರ್ವಹಿಸುತ್ತಿದ್ದು, ಅದರ ಕಾರ್ಯವೈಖರಿ ಹಾಗೂ ಮಹಿಳಾ ಸಿಬ್ಬಂದಿಯ ಸುರಕ್ಷತೆಗೆ ತೆಗೆದುಕೊಂಡ ಕ್ರಮಗಳ ಕುರಿತೂ ಮಾಹಿತಿ ಪಡೆದರು.

ಅಕ್ರಮ ಚಟುವಟಿಕೆಗಳಿಗೆ ಮಹಿಳೆಯರನ್ನು ಬಳಸಿಕೊಂಡವರ ವಿರುದ್ಧ ದಾಖಲಾದ ಪ್ರಕರಣಗಳ ಸಂಖ್ಯೆ, ದಾಳಿಯ ವೇಳೆ ರಕ್ಷಿಸಿದ ಮಹಿಳೆಯರ ಸುರಕ್ಷತೆಗೆ ತೆಗೆದುಕೊಂಡ ಕ್ರಮಗಳ ಬಗ್ಗೆಯೂ ನಾಗಲಕ್ಷ್ಮಿ ಮಾಹಿತಿ ಪಡೆದುಕೊಂಡರು ಎಂದು ಗೊತ್ತಾಗಿದೆ.

ಉಪ ಚುನಾವಣೆಯ ಖರ್ಚಿಗೆ ₹50 ಕೋಟಿ ಬೇಡಿಕೆ ಇರಿಸಿ ಬೆದರಿಕೆ ಹಾಕಿದ ಆರೋಪ

ಎಚ್‌ಡಿಕೆ ವಿರುದ್ಧದ ಕ್ರಮಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯ ಖರ್ಚಿಗೆ ₹50 ಕೋಟಿ ಬೇಡಿಕೆ ಇರಿಸಿ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಸಂಬಂಧ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎ.ವಿ.ನಿಶಾಂತ್, ‘ಇದೇ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಜೆಡಿಎಸ್ ನಗರದ ಘಟಕದ ಅಧ್ಯಕ್ಷ ರಮೇಶ್ ಗೌಡ ವಿರುದ್ಧ ಯಾವುದೇ ಬಲವಂತ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಈಗಾಗಲೇ ಆದೇಶಿಸಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಪ್ರಕರಣದ ಮತ್ತೊಬ್ಬ ಆರೋಪಿಯಾಗಿರುವ ಕುಮಾರಸ್ವಾಮಿ ಅವರಿಗೂ ಈ ಹಿಂದಿನ ಆದೇಶ ಅನ್ವಯವಾಗುತ್ತದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ವಿಜಯ್ ತಾತಾ ನೀಡಿದ್ದ ದೂರು ಆಧರಿಸಿ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಅಕ್ಟೋಬರ್ 3ರಂದು ರಮೇಶ್ ಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 308(2), 351(2), 3(5) ಅಡಿ ಎಫ್‌ಐಆರ್ ದಾಖಲಿಸಲಾಗಿದೆ.

ನಡ್ಡಾ ವಿರುದ್ಧದ ಪ್ರಕರಣ ರದ್ದು

‘ಬಿಜೆಪಿಗೆ ಮತ ನೀಡಿ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಆಶೀರ್ವಾದಿಂದ ಕರ್ನಾಟಕವು ವಂಚಿತವಾಗದಂತೆ ನೋಡಿಕೊಳ್ಳಿ ಎಂದು ಸಾರ್ವಜನಿಕ ಹೇಳಿಕೆ ನೀಡುವ ಮೂಲಕ ಮತದಾರರ ಮೇಲೆ ಪ್ರಭಾವ ಬೀರಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಜೆ.ಪಿ.ನಡ್ಡಾ ವಿರುದ್ಧ ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

‘ನನ್ನ ವಿರುದ್ಧದ ಎಫ್‌ಐಆರ್ ಮತ್ತು ಹಾವೇರಿ ಜಿಲ್ಲಾ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಜೆ.ಪಿ.ನಡ್ಡಾ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಗುರುವಾರ ಪುರಸ್ಕರಿಸಿ ಆದೇಶಿಸಿದರು.

ನಡ್ಡಾ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್, ‘ಭಾಷಣದಲ್ಲಿ ಮತದಾರರ ಮೇಲೆ ಪ್ರಭಾವ ಬೀರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇಡೀ ಭಾಷಣವನ್ನು ಪರಿಶೀಲಿಸಿದಾಗ ಅದರಲ್ಲಿ ಐಪಿಸಿ ಕಲಂ 171ಸಿ (ಚುನಾವಣೆಯ ಮೇಲೆ ಪ್ರಭಾವ ಬೀರುವುದು) ಮತ್ತು 171ಎಫ್ (ಚುನಾವಣೆಯ ಮೇಲೆ ಪ್ರಭಾವ ಬೀರಿದ್ದಕ್ಕೆ ಶಿಕ್ಷೆ) ಅಡಿ ಯಾವುದೇ ಅಪರಾಧ ಕಾಣಸಿಗುವುದಿಲ್ಲ. ಆದ್ದರಿಂದ, ಪ್ರಕರಣವನ್ನು ರದ್ದುಗೊಳಿಸಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಪ್ರಕರಣ ರದ್ದುಗೊಳಿಸಿ ಆದೇಶಿಸಿತು.

ಮೂರು ಜಿಲ್ಲೆಗಳಲ್ಲಿ ಪ್ರಾಯೋಗಿಕ ಆರಂಭಕ್ಕೆ ಸಿದ್ಧತೆ • ತಂತ್ರಜ್ಞಾನ, ಸಹಾಯಧನಗಳ ಸಲಹೆ

ತೋಟಗಾರಿಕೆಗೆ 'ಕಿಸಾನ್ ಮಾಲ್' ಬೆಳಕು

• ಖಲೀಲಅಹ್ಮದ ಶೇಖ

ಬೆಂಗಳೂರು: ತೋಟಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ಸಲಹೆ, ಮಾರುಕಟ್ಟೆ ಸಂಪರ್ಕ, ಬೇಸಾಯ ಪರಿಕರಗಳ ಮತ್ತು ಉತ್ಪನ್ನಗಳನ್ನು ಒಂದೇ ಸೂರಿನಡಿ ಒದಗಿಸುವ 'ಮೈಸೂರು ಕಿಸಾನ್ ಮಾಲ್'ಗಳನ್ನು ಮೈಸೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ.



ರಮೇಶ್ ಡಿ.ಎಸ್.

2024–25ರ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಕಿಸಾನ್ ಮಾಲ್'ಗಳನ್ನು ಪ್ರಾರಂಭಿಸುವುದಾಗಿ ಘೋಷಿಸಿದ್ದರು. ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಸಹಭಾಗಿತ್ವದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ತೋಟಗಾರಿಕಾ ಇಲಾಖೆ ಸಜ್ಜಾಗಿದೆ. ಎರಡು ತಿಂಗಳಲ್ಲಿ 'ಕಿಸಾನ್ ಮಾಲ್'ಗಳು ಕಾರ್ಯಾರಂಭ ಮಾಡಲಿದ್ದು, ಅವುಗಳ ಯಶಸ್ಸನ್ನು ಆಧರಿಸಿ ಇನ್ನೂ ಏಳು ಜಿಲ್ಲೆಗಳಿಗೆ ಯೋಜನೆ ವಿಸ್ತರಿಸುವ ಪ್ರಸ್ತಾವ ಇಲಾಖೆ ಮುಂದಿದೆ.

ಬೀಜ, ಸಸ್ಯ ಪೋಷಕಾಂಶಗಳು, ರಾಸಾಯನಿಕ, ಎರೆಹುಳು, ಜೈವಿಕ ಗೊಬ್ಬರಗಳು, ಬೆಳೆ ಹಾರ್ಮೋನುಗಳು, ಕೃಷಿ ಪರಿಕರಗಳು, ಕೀಟ ನಾಶಕಗಳು, ಮಾರುಕಟ್ಟೆ ಸಂಪರ್ಕ, ತಾಂತ್ರಿಕ ಸಲಹೆ ಸೇರಿದಂತೆ ತೋಟಗಾರಿಕೆ ಬೆಳೆಗಳಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒಂದೇ ಸೂರಿನಡಿ ರೈತರಿಗೆ ಕಲ್ಪಿಸುವುದು ಈ ಮಾಲ್‌ಗಳ ಉದ್ದೇಶವಾಗಿದೆ. ಇಲ್ಲಿ ಕಾರ್ಯನಿರ್ವಹಿಸುವ ವಿಷಯ ತಜ್ಞರು ರೈತರಿಗೆ ಬೆಳೆ ನಿರ್ವಹಣೆ, ಕೀಟ ಮತ್ತು ರೋಗಗಳ ನಿರ್ವಹಣೆ ಮಾಡುವುದರ ಕುರಿತು ಸಲಹೆಗಳನ್ನೂ ನೀಡಲಿದ್ದಾರೆ.

ಕಿಸಾನ್ ಮಾಲ್‌ನ ಸಿಬ್ಬಂದಿ ರೈತರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರ್ಗದರ್ಶನ ಮಾಡುತ್ತಾರೆ. ವಿವಿಧ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯದ ಮಾಹಿತಿ ನೀಡುವುದು, ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಕೊಯ್ಲೋತ್ತರ ತಂತ್ರಜ್ಞಾನ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ದೊರಕುವ ಸಹಾಯಧನಗಳ ಬಗ್ಗೆಯೂ ಸಲಹೆ ನೀಡುತ್ತಾರೆ.

'ಒಂದು ಕಿಸಾನ್ ಮಾಲ್ ಪ್ರಾರಂಭಿಸಲು ಒಟ್ಟು ₹ 30 ಲಕ್ಷ ಅನುದಾನ ಒದಗಿಸಲಾಗುತ್ತದೆ. ಇಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥಾಪಕರು, ತಾಂತ್ರಿಕ ಸಲಹೆಗಾರರು ಹಾಗೂ ಕಚೇರಿ ಸಿಬ್ಬಂದಿ ವೇತನಕ್ಕೆ ₹ 15 ಲಕ್ಷ ಹಾಗೂ ಕಿಸಾನ್ ಮಾಲ್‌ನ ಕಟ್ಟಡದ ನವೀಕರಣ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ₹ 15 ಲಕ್ಷ ಅನುದಾನ ನೀಡಲಾಗುತ್ತದೆ. ಈ ಮಾಲ್‌ಗಳನ್ನು ನಿರ್ವಹಿಸುವ ಎಫ್‌ಪಿಒಗಳ ಮೂಲಕ ನಿರ್ವಹಣೆ ಮಾಡಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್. ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಮಾಲ್‌ಗಳನ್ನು ನಡೆಸಲು ಆಯಾ ಜಿಲ್ಲೆಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ಎಫ್‌ಪಿಒಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಎರಡು ತಿಂಗಳಲ್ಲಿ ಎಲ್ಲ ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದು ತಿಳಿಸಿದರು.

'ಕೈಗೆಟುಕುವ ಬೆಲೆಯಲ್ಲಿ ತೋಟಗಾರಿಕಾ ಉತ್ಪನ್ನಗಳು'

'ತೋಟಗಾರಿಕಾ ಬೆಳೆಗಳಿಗೆ ಸಂಬಂಧಿಸಿದ ಬೀಜ, ಸಸಿಗಳಿಂದ ಪ್ರಾರಂಭಿಸಿ ಕೊಯ್ಲೋತ್ತರ ತಂತ್ರಜ್ಞಾನದವರೆಗೆ ಎಲ್ಲ ರೀತಿಯ ಗುಣಮಟ್ಟದ ಉತ್ಪನ್ನಗಳನ್ನು ಕೈಗೆಟುಕುವ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತದೆ. ಕಿಸಾನ್ ಮಾಲ್ ಎಂಬ ಸೇವಾಕೇಂದ್ರಗಳ ಮೂಲಕ ರೈತರಿಗೆ ತಂತ್ರಜ್ಞಾನ ಆಧಾರಿತ ತಾಂತ್ರಿಕ ಸಲಹೆಗಳನ್ನು ನೀಡಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್. ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಎರಡನೇ ಹಂತದಲ್ಲಿ
ಎಲ್ಲಿ ಕಿಸಾನ್ ಮಾಲ್
ಮದ್ದೂರು, ಮಂಡ್ಯ ಜಿಲ್ಲೆ
ಶಿವಮೊಗ್ಗ ,ಚಿಕ್ಕಬಳ್ಳಾಪುರ,
ಬಾಗಲಕೋಟೆ, ಬಳ್ಳಾರಿ,ಕೊಪ್ಪಳ

ಮುಖ್ಯಾಂಶಗಳು

- ಮಣ್ಣು–ನೀರು ಪರೀಕ್ಷೆಗೆ ಸಂಬಂಧಿಸಿದ ವರದಿಗಳ ವಿಶ್ಲೇಷಣೆ
- ರೈತರಿಗೆ ತರಬೇತಿ, ಕಾರ್ಯಾಗಾರ ಹಾಗೂ ವಿಚಾರಸಂಕಿರಣ
- ಸಾಮಾಜಿಕ ಜಾಲತಾಣಗಳ ಮೂಲಕ ತೋಟಗಾರಿಕೆ ಉತ್ಪನ್ನಗಳ ಮಾರಾಟ
- ರೈತರ ಪ್ರಶ್ನೆಗಳಿಗೆ ಪರಿಹಾರ ಮತ್ತು ಮಾರ್ಗದರ್ಶನ ಮಾಡುವುದು

ಕೆಐಎ ವಿಮಾನ ನಿಲ್ದಾಣದಲ್ಲಿ 'ವರ್ಟಿಕಲ್ ಗಾರ್ಡನ್' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರಲ್ಲಿ 'ಟೈಗರ್ ವಿಂಗ್ಸ್' ಶೀರ್ಷಿಕೆಯ 'ವರ್ಟಿಕಲ್ ಗಾರ್ಡನ್' ಅನಾವರಣಗೊಂಡಿದೆ.

ಫ್ರಾನ್ಸ್ ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಕೇಂದ್ರದೊಂದಿಗೆ ಗುರುತಿಸಿಕೊಂಡಿರುವ ವಿಶ್ವದರ್ಜೆಯ ಸಸ್ಯಶಾಸ್ತ್ರಜ್ಞ ಪ್ಯಾಟ್ರಿಕ್ ಬ್ಲಾಂಕ್ ಅವರ ಸಹಯೋಗದೊಂದಿಗೆ 30 ಅಡಿ ಎತ್ತರ ಹಾಗೂ 160 ಅಡಿ ಅಗಲದ ವರ್ಟಿಕಲ್ ಗಾರ್ಡನ್ ಅನ್ನು ವಿನ್ಯಾಸಗೊಳಿಸಲಾಗಿದೆ.

'ಟೈಗರ್ ವಿಂಗ್ಸ್' ಹೆಸರಿನ ಈ ವರ್ಟಿಕಲ್ ಗಾರ್ಡನ್ ಅನ್ನು 153 ಜಾತಿಗಳ 15,000ಕ್ಕೂ ಹೆಚ್ಚು ಸಸ್ಯಗಳಿಂದ ನಿರ್ಮಿಸಲಾಗಿದೆ. ಪ್ಯಾಟ್ರಿಕ್ ಬ್ಲಾಂಕ್ ಅವರು ಕರ್ನಾಟಕ ಸೇರಿದಂತೆ ಸುತ್ತಮುತ್ತಲಿನ ಪಶ್ಚಿಮ ಘಟ್ಟಗಳ ಕಾಡುಗಳಿಗೆ ತೆರಳಿ, ಅಪರೂಪದ ಆಯ್ದ ಸಸ್ಯ ಪ್ರಭೇದಗಳನ್ನು ಸಂಗ್ರಹಿಸಿ, ಈ ಗೋಡೆ ಉದ್ಯಾನ ನಿರ್ಮಿಸಿದ್ದಾರೆ.

ಗೋಡೆ ಉದ್ಯಾನವನ್ನು ಮಣ್ಣು-ರಹಿತವಾಗಿ ನಿರ್ಮಿಸಲಾಗಿದೆ. ಈ ತಂತ್ರಜ್ಞಾನವನ್ನು ಜರ್ಮನಿಯಿಂದ ಆಮದು ಮಾಡಿಕೊಳ್ಳಲಾಗಿದೆ. ರಾಷ್ಟ್ರೀಯ ಪ್ರಾಣಿ ಹುಲಿಯ ಶಕ್ತಿ ಮತ್ತು ಅದರ ಗಾಂಭೀರ್ಯವನ್ನು ಪ್ರತಿಬಿಂಬಿಸುವಂತೆ ಈ ಗೋಡೆ ಉದ್ಯಾನ ನಿರ್ಮಾಣಗೊಂಡಿದೆ. ಅದಕ್ಕಾಗಿಯೇ 'ಟೈಗರ್ ವಿಂಗ್ಸ್' ಎಂದು ಹೆಸರಿಡಲಾಗಿದೆ ಎಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹರಿ ಮರಾರ್ ತಿಳಿಸಿದ್ದಾರೆ.

ಈ ಉದ್ಯಾನದಲ್ಲಿ ನೀರನ್ನು ಎಚ್ಚರಿಕೆಯಿಂದ ಬಳಸಲಾಗುತ್ತದೆ. ಪದರಗಳ ಮೂಲಕ ಸಸ್ಯಗಳಿಗೆ ಸರಿಯಾದ ಪ್ರಮಾಣದ ನೀರನ್ನು ಒದಗಿಸುತ್ತದೆ ಎಂದು ಸಸ್ಯಶಾಸ್ತ್ರಜ್ಞ ಪ್ಯಾಟ್ರಿಕ್ ಬ್ಲಾಂಕ್ ಮಾಹಿತಿ ನೀಡಿದ್ದಾರೆ.




ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ನಿರ್ಮಾಣಗೊಂಡಿರುವ 'ವರ್ಟಿಕಲ್ ಗಾರ್ಡನ್'
ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಭಾಗವತ ಉಮೇಶ್ ಭಟ್‌ಗೆ 'ಸಾರ್ಥಕ ಸಾಧಕ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಕ್ಷಗಾನ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವ 'ಸಾರ್ಥಕ ಸಾಧಕ' ಪ್ರಶಸ್ತಿಗೆ ಭಾಗವತ ಉಮೇಶ್ ಭಟ್ ಬಾಡ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಯಕ್ಷಸಿಂಚನ ಟ್ರಸ್ಟ್ ತಿಳಿಸಿದೆ.



ಉಮೇಶ್ ಭಟ್ ಬಾಡ

ನಗರದ ಉದಯಭಾನು ಕಲಾಸಂಘದಲ್ಲಿ ಇದೇ 17ರಂದು ನಡೆಯಲಿರುವ ಟ್ರಸ್ಟ್‌ನ 15ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಉಮೇಶ್ ಭಟ್ ಅವರು ನಲವತ್ತು ವರ್ಷಗಳಿಂದ ಭಾಗವತಿಕೆ ನಡೆಸಿಕೊಡುತ್ತಿದ್ದಾರೆ. ಪ್ರಸಿದ್ಧ ಕಲಾವಿದರಾದ ಚಿಟ್ಟಾಣಿ ರಾಮಚಂದ್ರ ಹೆಗಡೆ, ಜಲವಳ್ಳಿ ವೆಂಕಟೇಶ್ ರಾವ್ ಮತ್ತು ಕುಮಟಾ ಗೋವಿಂದ ನಾಯ್ಕ್ ಅವರು ಕಟ್ಟಿದ ಮೇಳದಲ್ಲಿ ಭಾಗವತರಾಗಿ ಕೆಲಸ ಮಾಡಿದ್ದಾರೆ ಎಂದು ಟ್ರಸ್ಟ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಹೆಬ್ಬಾಳ: ಬಹುಮಾದರಿ ಸಾರಿಗೆ ಸಂಪರ್ಕ ನಿರ್ಮಿಸಿ

ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸಿದ ಬಿಬಿಎಂಪಿ ಆಡಳಿತಾಧಿಕಾರಿ ಎಸ್‌.ಆರ್‌. ಉಮಾಶಂಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಲ್ಲಿ ಸಮಗ್ರ ಬಹುಮಾದರಿ ಸಾರಿಗೆ ಸಂಪರ್ಕ ಅಭಿವೃದ್ಧಿಪಡಿಸಲು ಯೋಜನೆ ರೂಪಿಸುವಂತೆ ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ವಿವಿಧ ಇಲಾಖೆಗಳ ಕಾಮಗಾರಿಗಳ ಸಮನ್ವಯಕ್ಕೆ ಸಂಬಂಧಿಸಿದಂತೆ ಗುರುವಾರ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ಜಂಕ್ಷನ್‌ನಲ್ಲಿ ಬಿಡಿಎಯಿಂದ ಮೊದಲನೇ ಹಂತದ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದೆ. ಪ್ರಸ್ತಾವಿತ ಮೇಲ್ಸೇತುವೆ ಹಾಗೂ ಕೆಳಸೇತುವೆ ಕಾಮಗಾರಿ, ಮೆಟ್ರೊ ಕಾಮಗಾರಿ, ಕೆ-ರೈಡ್‌ನಿಂದ ಉಪನಗರ ರೈಲು ಯೋಜನೆಯ ಕಾಮಗಾರಿ, ಪಾಲಿಕೆಯಿಂದ ಸುರಂಗ ಮಾರ್ಗ ಸಹಿತ ವಿವಿಧ ಕಾಮಗಾರಿಗಳು ನಡೆಯಲಿವೆ. ಎಲ್ಲ ಕಾಮಗಾರಿಗಳನ್ನು ಗಮನದಲ್ಲಿ ಇಟ್ಟುಕೊಂಡು ಸಮಗ್ರ ಸಂಪರ್ಕ ಯೋಜನೆ ರೂಪಿಸಬೇಕು ಎಂದು ತಿಳಿಸಿದರು.



ಹೆಬ್ಬಾಳ ಜಂಕ್ಷನ್‌ನಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ಬಿಬಿಎಂಪಿ ಆಡಳಿತಾಧಿಕಾರಿ ಎಸ್‌.ಆರ್‌. ಉಮಾಶಂಕರ್ ಮಾಹಿತಿ ಪಡೆದರು

ಸಂಚಾರ ದಟ್ಟಣೆ ನಿಯಂತ್ರಿಸಲು ಪಾದಚಾರಿಗಳಿಗೆ ಸಮಸ್ಯೆಯಾಗದಂತೆ ಯೋಜನೆ ರೂಪಿಸಬೇಕು. ಕೆ.ಆರ್. ಪುರ ಕಡೆಯಿಂದ ನಗರದೊಳಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಜಂಕ್ಷನ್‌ನಲ್ಲಿ ರಸ್ತೆ ಮೇಲ್ಮೈ ಹಾಳಾಗಿದ್ದು, ಡಾಂಬರು ಹಾಕಿ ಸರಿಪಡಿಸಬೇಕು. ಹೆಬ್ಬಾಳದಿಂದ ಹೆಣ್ಣೂರುವರೆಗೆ ರಾಜಕಾಲುವೆ ಪಕ್ಕದಲ್ಲಿ ನಿರ್ಮಿಸುತ್ತಿರುವ ರಸ್ತೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಗೊರಗುಂಟೆ ಪಾಳ್ಯದಿಂದ ಕೆ.ಆರ್ ಪುರದವರೆಗೆ ಹೈಡೆನ್ಸಿಟಿ ಕಾರಿಡಾರ್ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದರು. ಆರ್.ಜಿ. ಯುನಿಕ್ ಸ್ಟ್ರಕ್ಚರ್ ಕಂಪನಿ ಮಳೆನೀರು ಚರಂಡಿಯನ್ನು ಒತ್ತುವರಿ ಮಾಡಿಕೊಂಡಿದ್ದು, ಪೊಲೀಸರ ಸಹಯೋಗದಲ್ಲಿ ಒತ್ತುವರಿ ತೆರವುಗೊಳಿಸಬೇಕು ಎಂದು ಸೂಚನೆ ನೀಡಿದರು.

ಈಜೀಪುರ ಮೇಲ್ಸೇತುವೆ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಿದರು. ಜಯನಗರ ವ್ಯಾಪ್ತಿಯಲ್ಲಿ ಬರುವ ಬಿಡಿಎ ಕಾಂಪ್ಲೆಕ್ಸ್‌ನ ಬ್ಲಾಕ್ 1 ಅನ್ನು ಪರಿಶೀಲಿಸಿದರು.

ಯೋಜನಾ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್, ಸಂಚಾರ ವಿಭಾಗದ ಪೊಲೀಸ್ ಜಂಟಿ ಕಮಿಷನರ್ ಎಂ.ಎನ್. ಅನುಚೇತ್, ವಲಯ ಆಯುಕ್ತರಾದ ಕರೀಗೌಡ, ಸ್ನೇಹಲ್, ರಮ್ಯಾ, ವಿನೋತ್ ಪ್ರಿಯಾ, ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಭಾಗವಹಿಸಿದ್ದರು.

ನೀರು ನಿಲ್ಲದಂತೆ ಮೆಟ್ರೊ ಕಾಮಗಾರಿ ನಿರ್ವಹಿಸಿ

ನಾಗವಾರ ಜಂಕ್ಷನ್‌ನಲ್ಲಿ ಮೆಟ್ರೊ ನಿಲ್ದಾಣ ಕಾಮಗಾರಿ ಪ್ರಗತಿಯಲ್ಲಿದೆ. ಇಲ್ಲಿ ಮಳೆಗಾಲದಲ್ಲಿ ಜಲಾವೃತವಾಗುತ್ತದೆ. ಅದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ರಾಜಕಾಲುವೆ ನಿರ್ಮಿಸಿ ನೀರು ನಿಲ್ಲದಂತೆ ಬಿಎಂಆರ್‌ಸಿಎಲ್ ಕ್ರಮ ಕೈಗೊಳ್ಳಬೇಕು. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿಯೂ ಮಳೆ ನೀರು ನಿಲ್ಲದಂತೆ ಇದೇ ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಎಸ್. ಆರ್. ಉಮಾಶಂಕರ್ ತಿಳಿಸಿದರು.

ಕೆಂಪಾಪುರ ಜಂಕ್ಷನ್ ಬಳಿ ಮೆಟ್ರೊ ನಿಲ್ದಾಣ ಕಾಮಗಾರಿಗಾಗಿ ಪ್ರಮುಖ ರಸ್ತೆಯಲ್ಲಿ ಎರಡೂ ಬದಿ ತಲಾ ಮೂರು ಪಥಗಳ ವ್ಯವಸ್ಥೆ ಮಾಡಿಕೊಂಡು, ಹೊರ ವರ್ತುಲ ರಸ್ತೆಯ ಎರಡೂ ಸರ್ವೀಸ್ ರಸ್ತೆಗಳಲ್ಲಿ ಸಂಚಾರವನ್ನು ನಿಲ್ಲಿಸಲಾಗುವುದು ಎಂದು ಮೆಟ್ರೊ ಅಧಿಕಾರಿಗಳು ಮಾಹಿತಿ ನೀಡಿದರು.

'ರಾತ್ರಿ ಸಂಚಾರ ದಟ್ಟಣೆ ಕಡಿಮೆ ಇರುವುದರಿಂದ ಆ ಸಮಯದಲ್ಲಿ ಕೆಲಸ ಮಾಡಿ' ಎಂದು ಉಮಾಶಂಕರ್ ಸಲಹೆ ನೀಡಿದರು.

ಜಮ್ಮು: ಉಗ್ರರಿಂದ ಗ್ರಾಮ ರಕ್ಷಣಾ ಸದಸ್ಯರಿಬ್ಬರ ಹತ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು ವಲಯದಲ್ಲಿ ಗುಡ್ಡ ಪ್ರದೇಶ ವ್ಯಾಪ್ತಿಯ ಕಿಶ್ತವಾಡ್ ಜಿಲ್ಲೆಯಲ್ಲಿ ಉಗ್ರಗಾಮಿಗಳು ಗುರುವಾರ ತಾವು ಅಪಹರಣ ಮಾಡಿದ್ದ ಇಬ್ಬರು ಗ್ರಾಮ ರಕ್ಷಣಾ ಸಮೂಹದ ಸದಸ್ಯರನ್ನು (ವಿಡಿಜಿ) ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಉಗ್ರರ ಗುಂಡಿಗೆ ಬಲಿಯಾದವರನ್ನು ನಾಜಿರ್ ಅಹಮ್ಮದ್ ಮತ್ತು ಕುಲದೀಪ್ ಕುಮಾರ್ ಎಂದು ಗುರುತಿಸಲಾಗಿದೆ. ಈ ಇಬ್ಬರನ್ನೂ ಕಿಶ್ತವಾಡ್ ಜಿಲ್ಲೆಯ ಕುಗ್ರಾಮವೊಂದರ ಅವರ ಮನೆಯಿಂದ ಅಪಹರಿಸಲಾಗಿತ್ತು.

ಮೂಲಗಳ ಪ್ರಕಾರ, ಈ ಇಬ್ಬರನ್ನು ಒಹ್ಲಿ ಕುಂತ್ವಾರಾ ಅರಣ್ಯ ವಲಯದಲ್ಲಿ ಉಗ್ರಗಾಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ತೀವ್ರ ಶೋಧ ಕಾರ್ಯಾಚರಣೆಯ ಬಳಿಕ ಇಬ್ಬರ ಶವಗಳನ್ನು ಪತ್ತೆ ಮಾಡಲಾಯಿತು. ಇಲ್ಲಿ ಸಕ್ರಿಯವಾಗಿರುವ ಉಗ್ರಗಾಮಿಗಳ ನೆಲೆ ಪತ್ತೆಗೆ ರಕ್ಷಣಾ ಪಡೆಗಳು ಕಾರ್ಯಾಚರಣೆಯನ್ನು ಮುಂದುವರಿಸಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ಸ್ಥಳೀಯ 'ರೈಸಿಂಗ್ ಕಾಶ್ಮೀರ್' ದೈನಿಕ ವರದಿ ಮಾಡಿದೆ.

ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಜೈಷ್–ಎ–ಮೊಹಮ್ಮದ್ ಜೊತೆಗೆ ಗುರುತಿಸಿಕೊಂಡಿರುವ ಕಾಶ್ಮೀರಿ ಟೈಗರ್ಸ್ ಸಂಘಟನೆಯು ಈ ಇಬ್ಬರು ವಿಡಿಜಿಗಳ ಹತ್ಯೆ ಹೊಣೆಯನ್ನು ಹೊತ್ತುಕೊಂಡಿದೆ.

ಉಗ್ರಗಾಮಿಗಳ ದಾಳಿಗೆ ಪ್ರತಿರೋಧವನ್ನು ಒಡ್ಡಲು ಗ್ರಾಮ ರಕ್ಷಣಾ ಸಮೂಹಗಳನ್ನು 1990ರ ದಶಕದಲ್ಲಿ ರಚಿಸಲಾಗಿತ್ತು. ಉಗ್ರಗಾಮಿಗಳ ಚಟುವಟಿಕೆ ತೀವ್ರಗೊಂಡಿದ್ದ ಆ ಅವಧಿಯಲ್ಲಿ ಜಮ್ಮುವಿನ ಚೆನಾಬ್ ಕಣಿವೆ, ಪಿರ್ ಪಂಜಾಲ್ ವಲಯ ಹಾಗೂ ಗುಡ್ಡಗಾಡು ಪ್ರದೇಶವಾದ ಉಧಂಪುರ್, ಕಠುವಾ ಜಿಲ್ಲೆಗಳಲ್ಲಿ ಈ ಸಮೂಹಗಳು ಸಕ್ರಿಯವಾಗಿದ್ದವು. ಭದ್ರತಾ ಪಡೆಗಳ ಕಾರ್ಯಾಚರಣೆಗೆ ಬೆಂಬಲವಾಗಿ ಕಾರ್ಯನಿರ್ವಹಿಸುತ್ತಿದ್ದವು.


ಗ್ರಾಮ ರಕ್ಷಣಾ ಸಮೂಹದ ಸದಸ್ಯರಿಗೆ ಶಸ್ತ್ರಾಸ್ತ್ರ ಬಳಕೆ ಹಾಗೂ ಗುಪ್ತ ಮಾಹಿತಿ ಕಲೆಹಾಕುವ ಕುರಿತು ಭಾರತೀಯ ಸೇನೆಯು ತರಬೇತಿ ಶಿಬಿರಗಳನ್ನು ಆಯೋಜಿಸಿತ್ತು.

ಶಾಸಕ ಮುನಿರತ್ನ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣ

ವಿಕಾಸಸೌಧದ 334ರ ಕೊಠಡಿಯಲ್ಲಿ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು, ಸಂತ್ರಸ್ತೆಯನ್ನು ವಿಕಾಸಸೌಧಕ್ಕೆ ಕರೆತಂದು ಗುರುವಾರ ಸ್ಥಳ ಮಹಜರು ನಡೆಸಿದರು.



ಮುನಿರತ್ನ

ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಮುನಿರತ್ನ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಎಸ್‌ಐಟಿ ಚುರುಕುಗೊಳಿಸಿದೆ. ಪ್ರಕರಣದ ಸಂಬಂಧ ಎಸ್‌ಐಟಿ ಮತ್ತಷ್ಟು ಮಾಹಿತಿ ಕಲೆಹಾಕುತ್ತಿದೆ. ಗುರುವಾರ ಬೆಳಿಗ್ಗೆ 11ರ ಸುಮಾರಿಗೆ ವಿಕಾಸಸೌಧಕ್ಕೆ ಸಂತ್ರಸ್ತೆಯನ್ನು ಎಸ್‌ಐಟಿ ಅಧಿಕಾರಿಗಳು ಕರೆತಂದು ಮಹಜರು ನಡೆಸಿದರು.

ಮುನಿರತ್ನ ಅವರು ಹಿಂದಿನ ಸರ್ಕಾರದಲ್ಲಿ ತೋಟಗಾರಿಕೆ ಸಚಿವರಾಗಿದ್ದರು. ಆಗ ಅವರಿಗೆ ವಿಕಾಸಸೌಧದ 3ನೇ ಮಹಡಿಯ 334ನೇ ಸಂಖ್ಯೆಯ ಕೊಠಡಿ ನೀಡಲಾಗಿತ್ತು. ಅಲ್ಲಿ ಮಹಜರು ನಡೆಸಿದರು ಎಂದು ಗೊತ್ತಾಗಿದೆ.

'ಕೊಠಡಿಯ ಯಾವ ಸ್ಥಳದಲ್ಲಿ ನಿಮ್ಮ ಮೇಲೆ ಮುನಿರತ್ನ ಲೈಂಗಿಕ ದೌರ್ಜನ್ಯ ಎಸಗಿದ್ದರು' ಎಂಬುದಾಗಿ ಸಂತ್ರಸ್ತೆಯನ್ನು ಕೇಳಿ ಮಾಹಿತಿ ಪಡೆದುಕೊಳ್ಳಲಾಯಿತು ಎಂದು ಮೂಲಗಳು ಹೇಳಿವೆ.

ಲಿಖಿತ ಹೇಳಿಕೆ ದಾಖಲು: ಮಹಜರು ನಡೆಸಿದ ಬಳಿಕ ಸಿಐಡಿ ಕಚೇರಿಗೆ ಸಂತ್ರಸ್ತೆಯನ್ನು ಕರೆದೊಯ್ದ ತನಿಖಾಧಿಕಾರಿಗಳು, ಲಿಖಿತ ಹೇಳಿಕೆ ದಾಖಲಿಸಿಕೊಂಡರು. ಕೆಲವು ಪ್ರಶ್ನೆಗಳು ಕೇಳಿ ಆ ಹೇಳಿಕೆಯನ್ನು ವಿಡಿಯೊ ರೆಕಾರ್ಡ್ ಮಾಡಿಕೊಂಡರು.

ಈ ಹಿಂದೆ ಸಂತ್ರಸ್ತೆ ಕಗ್ಗಲೀಪುರ ಠಾಣೆಯಲ್ಲಿ ದೂರು ನೀಡುವಾಗ, 'ಶಾಸಕ ಮುನಿರತ್ನ ಸಚಿವರಾಗಿದ್ದಾಗ ವಿಕಾಸಸೌಧದಲ್ಲಿ ನೀಡಲಾಗಿದ್ದ ಅವರ ಕೊಠಡಿಯಲ್ಲೂ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು. ಅಲ್ಲಿಂದಲೇ ವಿಡಿಯೊ ಕರೆ ಮಾಡಿ ನಗ್ನ ಆಗುವಂತೆ ಪೀಡಿಸುತ್ತಿದ್ದರು' ಎಂದು ಆರೋಪಿಸಿದ್ದರು. ಈ ಸಂಬಂಧ ದಾಖಲಾದ ಪ್ರಕರಣದಲ್ಲಿ ಮುನಿರತ್ನ ಅವರನ್ನು ಬಂಧಿಸಲಾಗಿತ್ತು. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಮುನಿರತ್ನ ಅವರು ಇತ್ತೀಚೆಗೆ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

'ಪ್ರಕರಣದ ಸಂಬಂಧ ಸಂತ್ರಸ್ತೆ, ಆರೋಪಿಯ ಮೊಬೈಲ್ ಜಪ್ತಿ ಮಾಡಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಎಫ್‌ಎಸ್‌ಎಲ್ ಹಾಗೂ ವೈದ್ಯಕೀಯ ವರದಿಗಳು ಬಂದಿವೆ. ಮುನಿರತ್ನ ಹಾಗೂ ಸಹಚರರು ಹನಿಟ್ರ್ಯಾಪ್ ಮಾಡುತ್ತಿದ್ದರು ಎಂಬುದಾಗಿ ಆರೋಪಿಸಿ ಮಹಿಳೆ ದೂರು ನೀಡಿದ್ದರು. ಹನಿಟ್ರ್ಯಾಪ್ ಆರೋಪದ ಸಂಬಂಧವೂ ತನಿಖೆ ನಡೆಸಲಾಗಿದೆ. ರಹಸ್ಯ ಕ್ಯಾಮೆರಾ ಇಡುತ್ತಿದ್ದ ಸ್ಥಳದ ಮಾಹಿತಿ ಪಡೆಯಲಾಗಿದೆ. ತನಿಖೆ ಭಾಗಶಃ ಪೂರ್ಣಗೊಂಡಿದ್ದು, 60ಕ್ಕೂ ಹೆಚ್ಚು ಸಾಕ್ಷಿಗಳ ಹೇಳಿಕೆ, 40ಕ್ಕೂ ಹೆಚ್ಚು ಸಾಕ್ಷ್ಯಾಧಾರ ಸಹಿತ 900ಕ್ಕೂ ಹೆಚ್ಚು ಪುಟಗಳ ದೋಷಾರೋಪಪಟ್ಟಿಯನ್ನು ಶೀಘ್ರವೇ ನ್ಯಾಯಾಲಯಕ್ಕೆ ಸಲ್ಲಿಸಲು ಸಿದ್ಧತೆ ನಡೆದಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ರೈತ ಆತ್ಮಹತ್ಯೆ ಹೇಳಿಕೆ: ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದ್ದರಿಂದ ಮನನೊಂದು ಹಾವೇರಿ ಜಿಲ್ಲೆಯ ಹರನಗಿ ಗ್ರಾಮದ ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ 'ಎಕ್ಸ್'ನಲ್ಲಿ ಹಾಕಿದ ಪೋಸ್ಟ್ ತೀವ್ರ ಟೀಕೆಗೆ ಗುರಿಯಾಗಿದೆ.

'ಹಾವೇರಿಯಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡಿದ್ದು 2022ರಲ್ಲಿ. ಆಗ ನಿಮ್ಮದೇ ಪಕ್ಷ ಬಿಜೆಪಿಯ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದರು. ಈ ಕುರಿತು ಸ್ವತಃ ಹಾವೇರಿ ಎಸ್‌ಪಿ ಅವರೇ ಸ್ಪಷ್ಟನೆ ನೀಡಿದ್ದಾರೆ' ಎಂದು ನೆಟ್ಟಿಗರು ತರಾಟೆಗೆ ತೆಗೆದುಕೊಂಡಿದ್ದಾರೆ.

ಟೀಕೆಯ ನಂತರ ತೇಜಸ್ವಿ ಸೂರ್ಯ ಪೋಸ್ಟ್ ಅಳಿಸಿದ್ದಾರೆ. ಆದರೆ, ವಿಜಯೇಂದ್ರ ಪೋಸ್ಟ್ 'ಎಕ್ಸ್'ನಲ್ಲಿ ಹಾಗೆಯೇ ಇದೆ.

32 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಕೇಂದ್ರ ನಿರ್ಮಾಣ

ಸಮರ್ಥನಂ ಕಲಾ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲ ಕಲಾವಿದರಿಗೆ ಉತ್ತಮ ವೇದಿಕೆ ಕಲ್ಪಿಸುವ ಉದ್ದೇಶದಿಂದ ಸಮರ್ಥನಂ ಅಂಗವಿಕಲರ ಸಂಸ್ಥೆ ನಿರ್ಮಿಸಿರುವ 'ಸಮರ್ಥನಂ ಕಲಾ ಕೇಂದ್ರ'ಕ್ಕೆ ಗಾಯಕ ಕುನಾಲ್ ಗಾಂಜಾವಾಲಾ, ಬಿಎನ್‌ಪಿ ಪರಿಬಾಸ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಂಜಯ್ ಸಿಂಗ್, ಸಮರ್ಥನಂ ಟ್ರಸ್ಟ್‌ನ ಸಂಸ್ಥಾಪಕ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಮಹಾಂತೇಶ್ ಜಿ. ಕಿವಡಸಣ್ಣವರ್ ಗುರುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಮಹಾಂತೇಶ್ ಜಿ. ಕಿವಡಸಣ್ಣನವರ್, 'ಕಲಾ ಕೇಂದ್ರಗಳ ಸೃಜನಶೀಲತೆಗೆ ಯಾವುದೇ ಗಡಿಗಳಿಲ್ಲ. ಅಂಗವಿಕಲ ಕಲಾವಿದರನ್ನು ಬೆಂಬಲಿಸುವುದರ ಜೊತೆಗೆ ಅವರ ಸಾಮರ್ಥ್ಯದ ಗ್ರಹಿಕೆಗೆ ಈ ಕೇಂದ್ರ ಸವಾಲು ಹಾಕಲಿದೆ. 32 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಇರುವ ಕಲಾ ಕೇಂದ್ರದಲ್ಲಿ ಅಂಗವಿಕಲ ಕಲಾವಿದರನ್ನು ಸಬಲೀಕರಣಗೊಳಿಸಲಾಗುತ್ತದೆ. ಬಿಎನ್‌ಪಿ ಪರಿಬಾಸ್ ಮತ್ತು ಇತರ ಕಾರ್ಪೊರೇಟ್ ಪಾಲುದಾರರು ನಮ್ಮ ಈ ಕನಸನ್ನು ನನಸಾಗಿಸಲು ಸಹಾಯ ಮಾಡಿದ್ದಾರೆ' ಎಂದು ನೆನಪಿಸಿಕೊಂಡರು.



ಸಮರ್ಥನಂ ಅಂಗವಿಕಲರ ಸಂಸ್ಥೆ ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ನಿರ್ಮಿಸಿರುವ 'ಸಮರ್ಥನಂ ಕಲಾ ಕೇಂದ್ರ'ದ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಭರತನಾಟ್ಯ ಪ್ರಸ್ತುತಪಡಿಸಿದರು
–ಪ್ರಜಾವಾಣಿ ಚಿತ್ರ

ಬಿಎನ್‌ಪಿ ಪರಿಬಾಸ್‌ನ ಸಿಇಒ ಸಂಜಯ್ ಸಿಂಗ್ ಮಾತನಾಡಿ, 'ನಾವು ಆರ್ಥಿಕ ಪರಿಹಾರಗಳಲ್ಲಿ ಮಾತ್ರವಲ್ಲದೆ ಸಾಮಾಜಿಕ ಆರ್ಥಿಕತೆಗೆ ಹಣಕಾಸು ಅಥವಾ ಸಮಾನ ಅವಕಾಶಗಳನ್ನು ಒದಗಿಸಲು ಸಹಾಯ ಮಾಡುತ್ತೇವೆ. ವಿವಿಧತೆಯಲ್ಲಿ ಏಕತೆ ಮತ್ತು ಮಾನವ ಹಕ್ಕುಗಳ ಪ್ರಚಾರದಂತಹ ಕಾರ್ಯಕ್ರಮಗಳಲ್ಲಿ ನಮ್ಮನ್ನು ತೊಡಗಿಸಿಕೊಂಡಿದ್ದೇವೆ. ಅಂಗವಿಕಲರ ಕಲಾ ಪ್ರದರ್ಶನಕ್ಕೆ ಸೂಕ್ತ ವೇದಿಕೆ ನಿರ್ಮಿಸುವಲ್ಲಿ ಸಹಾಯ ಮಾಡಿರುವುದು ಖುಷಿ ನೀಡಿದೆ. ಅವರು ಸಮಾಜದ ಮುಖ್ಯ ವಾಹಿಯನಿಯಲ್ಲಿ ಬೆರೆಯಲು ಇದು ಸಹಕಾರಿ ಆಗಲಿದೆ' ಎಂದರು.

ಭಾರತೀಯ ಜೀವ ವಿಮಾ ನಿಗಮದ ವ್ಯವಸ್ಥಾಪಕಿ ಜಯಶ್ರೀ ಬಾಲಕೃಷ್ಣ, ಜೆಎಲ್‌ಎಲ್ ಇಂಡಿಯಾದ ಸಿಎಫ್‌ಒ ಅವೀಕ್ ಸಿನ್ಹಾ, ಥರ್ಮೊ ಫ್ರೆಷರ್ ಸೈಂಟಿಫಿಕ್‌ನ ಹಣಕಾಸು ನಿರ್ವಹಣಾಧಿಕಾರಿ ನಾಗಭೂಷಣ್ ರೆಡ್ಡಿ, ಎನ್‌ಟಿಟಿ ಡಾಟಾ ಇನ್ಫೊ ಸರ್ವೀಸ್ ಲಿಮಿಟೆಡ್‌ನ ರವಿ ಕುಮಾರ್ ಉಪಸ್ಥಿತರಿದ್ದರು.

'ಸಮರ್ಥನಂ ಕಲಾ ಕೇಂದ್ರದ ವೈಶಿಷ್ಟ್ಯ'

'ಅಂಗವಿಕಲ ಕಲಾವಿದರ ಪ್ರದರ್ಶನಗಳಿಗಾಗಿ ವಿನ್ಯಾಸಗೊಳಿಸಲಾದ ಸಭಾಂಗಣ, ಇಳಿಜಾರುಗಳು, ವಿಶೇಷ ಲಿಫ್ಟ್‌ಗಳು ಮತ್ತು ನಡೆದಾಡಲು ತೊಂದರೆ ಇರುವ ಕಲಾವಿದರಿಗೆ ಆಸನದ ವ್ಯವಸ್ಥೆ ಇದೆ' ಎಂದು ಮಹಾಂತೇಶ್ ಕಿವಡಸಣ್ಣವರ್ ಹೇಳಿದರು.

'ಇಲ್ಲಿ ತರಬೇತಿ, ಚಿಕಿತ್ಸೆ ಮತ್ತು ಸೃಜನಾತ್ಮಕ ಅಭಿವೃದ್ಧಿಗಾಗಿ ಸ್ಥಳವನ್ನು ಮೀಸಲಿಡಲಾಗಿದೆ. ಸಮರ್ಥನಂ ಇನ್‌ಸ್ಟಿಟ್ಯೂಟ್ ಆಫ್ ಮ್ಯೂಸಿಕ್ ಆ್ಯಂಡ್ ಪರ್ಫಾಮಿಂಗ್ ಆರ್ಟ್ಸ್ (ಸಿಂಪ) ಇದು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ನೀಡುತ್ತದೆ' ಎಂದರು.



ತೇಜು ಬೆಳವಾಡಿ

‘ಸಿನಿಮಾದಲ್ಲೇ ಮುಂದುವರಿಯುವ ಇಚ್ಛೆ’

ಅಭಿಲಾಷ್ ಪಿ.ಎಸ್.

‘ಲಾಫಿಂಗ್ ಬುದ್ಧ’ ಸಿನಿಮಾ ಮೂಲಕ ನಟಿ ತೇಜು ಬೆಳವಾಡಿ ಬೆಳ್ಳಿತೆರೆಯಲ್ಲಿ ಸಕ್ರಿಯರಾಗಿರುವ ಮುನ್ಸೂಚನೆ ನೀಡಿದ್ದಾರೆ. ಅವರು ನಟಿಸಿರುವ ‘ಮರ್ಯಾದೆ ಪ್ರಶ್ನೆ’ ಸಿನಿಮಾ ನ.22ರಂದು ಬಿಡುಗಡೆಯಾಗುತ್ತಿದ್ದು, ತಮ್ಮ ಸಿನಿಪಯಣದ ಬಗ್ಗೆ ‘ಸಿನಿಮಾ ಪುರವಣಿ’ ಜೊತೆ ಮಾತನಾಡಿದ್ದಾರೆ...

- **ರಂಗಭೂಮಿಯಿಂದ ಸಿನಿಮಾದತ್ತ ಹೆಜ್ಜೆ ಇಟ್ಟವರು ನೀವು. ಈ ಪಯಣ ಹೇಗಿದೆ?**

ಕಾಲೇಜಿನಲ್ಲಿದ್ದಾಗಲೇ ನಾನು ರಂಗಭೂಮಿಯಿಂದ ಸಿನಿಮಾಗೆ ಹೆಜ್ಜೆ ಇಟ್ಟಿದ್ದೆ. 2016ರಲ್ಲಿ ಪ್ರಕಾಶ್ ರಾಜ್ ಅವರ ‘ಇದೊಳ್ಳೆ ರಾಮಾಯಣ’ ಸಿನಿಮಾ ಮೂಲಕ ಬೆಳ್ಳಿತೆರೆ ಪ್ರವೇಶಿಸಿದೆ. ಅಲ್ಲಿ ನನ್ನ ಅಜ್ಜಿಯ ಪಾತ್ರವನ್ನು ನನ್ನಜ್ಜಿ ಭಾರ್ಗವಿ, ಅಮ್ಮನ ಪಾತ್ರವನ್ನು ಅತ್ತೆ ಸುಧಾ ಬೆಳವಾಡಿ ಮಾಡಿದ್ದರು. ಹೀಗಾಗಿ ನಾನು ಸಿನಿಮಾ ಮಾಡುತ್ತಿದ್ದೇನೆ ಎಂದು ಅನಿಸಿಯೇ ಇರಲಿಲ್ಲ. ಅದಾದ ಬಳಿಕ ‘ಗಂಟುಮೂಟೆ’ ಸಿನಿಮಾದಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿದೆ. ಇವೆಲ್ಲದರ ನಡುವೆ ನಾನು ನಾಟಕಗಳನ್ನು ಮಾಡುತ್ತಲೇ ಇದ್ದೆ. 2018–2020ರವರೆಗೆ ರಂಗಶಂಕರದಲ್ಲಿ ತಿಂಗಳಿಗೆ ಎರಡು ನಾಟಕ ಪ್ರದರ್ಶನವನ್ನಂತೂ ನೀಡಿದ್ದೇನೆ. ನಾಟಕದ ನಂಟು ಇನ್ನೂ ಬಿಟ್ಟಿಲ್ಲ. ‘ಲಾಫಿಂಗ್ ಬುದ್ಧ’ದಲ್ಲಿ ಪ್ರಮೋದ್ ಶೆಟ್ಟಿ ಅವರೂ ರಂಗಭೂಮಿ ಹಿನ್ನೆಲೆಯವರು, ‘ಮರ್ಯಾದೆ ಪ್ರಶ್ನೆ’ ಸಿನಿಮಾದ ನಿರ್ದೇಶಕರೂ ರಂಗಭೂಮಿಯಿಂದಲೇ ಬಂದವರು. ರಿಹರ್ಸಲ್ ಮೂಲಕವೇ ಈ ಸಿನಿಮಾಗಳನ್ನು ಮಾಡಿದ್ದೇವೆ. ನಾಟಕ–ಸಿನಿಮಾ ಎನ್ನುವ ಹಾದಿಯಲ್ಲಿ ಒಟ್ಟಿಗೇ ಹೆಜ್ಜೆ ಇಡುತ್ತಿದ್ದೇನೆ.

- **ನೀವು ಸಿನಿಮಾ ನಟನೆಯತ್ತ ಹೆಜ್ಜೆ ಇಡುವುದು ಪ್ರಕಾಶ್ ಬೆಳವಾಡಿಯವರಿಗೆ ಇಷ್ಟವಿರಲಿಲ್ಲವಂತೆ?**

ಹೌದು. ನಾನು ಸಿನಿಮಾದಲ್ಲಿ ನಟನೆ ಮಾಡುವುದು ಅಪ್ಪನಿಗೆ ಇಷ್ಟವೇ ಇರಲಿಲ್ಲ. ನಾನು ನಿರ್ದೇಶಕಿಯಾಗ ಬೇಕು ಅಥವಾ ಸಿನಿಮಾ ಸಂಕಲನ, ಛಾಯಾಚಿತ್ರಗ್ರಹಣ ಕಲಿಯಬೇಕು ಎಂಬ ಆಗ್ರಹ ಅವರದ್ದಾಗಿತ್ತು. ಆದರೆ ನನಗೆ ಈ ತಾಂತ್ರಿಕ ಕ್ಷೇತ್ರದಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ನಾಟಕಗಳನ್ನು ನಿರ್ದೇಶಿಸಿದ್ದೇನೆ. ನಾಟಕಗಳಲ್ಲಿ ನಟಿಸುವುದಕ್ಕೆ ಅಪ್ಪನ ಪ್ರೋತ್ಸಾಹ ಈಗಲೂ ಇದೆ. ಅಪ್ಪ ಬಹಳ ಸಂಕೋಚ ವ್ಯಕ್ತಿತ್ವವುಳ್ಳವರು. ‘ಲಾಫಿಂಗ್ ಬುದ್ಧ’ದಲ್ಲಿ ನಾನು ಚೆನ್ನಾಗಿ ನಟಿಸಿದ್ದೇನೆ ಎಂದು ಒಂದು ಕಿರುನಗೆಯಲ್ಲಷ್ಟೇ ವ್ಯಕ್ತಪಡಿಸಿದ್ದಾರೆ. ನನ್ನ ನಟನೆ ಅವರಿಗೆ ಸಂತೃಪ್ತಿ ತಂದಿದೆ.

- **‘ಲಾಫಿಂಗ್ ಬುದ್ಧ’ ನಿಮ್ಮ ಸಿನಿಪಯಣಕ್ಕೆ ತಂದ ಬದಲಾವಣೆ...**

ಮೊದಲ ಬಾರಿಗೆ ರಿಷಬ್ ಶೆಟ್ಟಿ ಪ್ರೊಡಕ್ಷನ್ ಹೌಸ್‌ನಂಥ ಒಂದು ಹೆಸರಾಂತ ನಿರ್ಮಾಣ ಸಂಸ್ಥೆಯ ಜೊತೆ ಕಾರ್ಯನಿರ್ವಹಿಸಿದ್ದು ಒಂದು ಭಿನ್ನ ಅನುಭವ. ಕೇವಲ ರಂಗಭೂಮಿಯ ಒಡನಾಟ ಹೊಂದಿದ್ದ ನನಗೆ ಮೊದಲ ಬಾರಿಗೆ ಕ್ಯಾರವಾನ್‌ನಲ್ಲಿ ಕೂತ ಅನುಭವ, ಹಿರಿಯ ಕಲಾವಿದರೊಂದಿಗೆ ಒಡನಾಡಿದ ಅನುಭವ ಮರೆಯುವಂತಿಲ್ಲ. ದೊಡ್ಡ ಸೆಟ್‌ನಲ್ಲಿ ಕೆಲಸ ಹೇಗಾಗುತ್ತದೆ ಎನ್ನುವುದನ್ನು ಕಲಿತುಕೊಂಡೆ. ನಟನೆಯ ವಿಚಾರಕ್ಕೆ ಬಂದರೆ, ನಿರ್ದೇಶಕ ಭರತ್ ರಾಜ್ ಕಣ್ಣಿನಲ್ಲೇ ನಟಿಸುವ ಪಾತ್ರವನ್ನು ಕೆತ್ತಿದ್ದರು. ನಾಟಕಗಳಲ್ಲಿದ್ದ ತೇಜು ಬೆಳವಾಡಿಗಿಂತ ಭಿನ್ನವಾದ ಒಂದು ನಟನೆಯನ್ನು ತೆಗೆಸಿದರು.

- **ಸಿನಿಮಾರಂಗದಲ್ಲಿದ್ದುಕೊಂಡು ತಾಯಿಯಾಗಿರುವ ಜವಾಬ್ದಾರಿ ಹಾಗೂ ಸವಾಲುಗಳೇನು?**


‘ಲಾಫಿಂಗ್ ಬುದ್ಧ’ ಮಾಡಿದ ಸಂದರ್ಭದಲ್ಲಿ ಭದ್ರಾವತಿಯಲ್ಲೇ ಹೆಚ್ಚಿನ ಚಿತ್ರೀಕರಣ ನಡೆದಿತ್ತು. ಅಲ್ಲಿಗೆ ನನ್ನ ತಾಯಿಯನ್ನೇ ಕರೆದುಕೊಂಡು ಹೋಗಿದ್ದೆ. ಮಗಳನ್ನು ಅವರೇ ನೋಡಿಕೊಂಡರು. ‘ಗಂಟುಮೂಟೆ’ 60 ದಿನ ಶೂಟಿಂಗ್ ನಡೆದಿತ್ತು. ಆಗ ಇಂತಹ ಯಾವ ಜವಾಬ್ದಾರಿಯೂ ಇರಲಿಲ್ಲ. ಇದೀಗ ಕುಟುಂಬದ ಜವಾಬ್ದಾರಿ ಇದೆ. ಹೊರಗಡೆ ಚಿತ್ರೀಕರಣ ಇದ್ದಾಗ ಕೆಲವು ಹೊಂದಾಣಿಕೆ ಮಾಡಿಕೊಂಡು ಹೋಗುವ ಸವಾಲು ಎದುರಿಗಿದೆ.

- **‘ಮರ್ಯಾದೆ ಪ್ರಶ್ನೆ’ ಸಿನಿಮಾದಲ್ಲಿನ ನಿಮ್ಮ ಪಾತ್ರದ ಬಗ್ಗೆ..**

ಇದು ನನ್ನ ಐದನೇ ಸಿನಿಮಾ. ನಾನು ‘ಲಕ್ಷ್ಮೀ’ ಎಂಬ ಪಾತ್ರವನ್ನು ನಿರ್ವಹಿಸಿದ್ದೇನೆ. ಲುಲು ಮಾಲ್‌ನಲ್ಲಿ ಈ ಸಿನಿಮಾ ಶೂಟಿಂಗ್ ಮಾಡಿದ್ದೆವು. ನಾನು ಇದರಲ್ಲಿ ಓರ್ವ ಸೇಲ್ಸ್ ಗರ್ಲ್. ಮಧ್ಯಮ ವರ್ಗದಿಂದ ಬಂದ ಹೆಣ್ಣುಮಕ್ಕಳಿಗೆ ಈ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚಿನ ಬಯಕೆಗಳು ಇಲ್ಲ. ನಾವೂ ದುಡಿಯುತ್ತಿದ್ದೇವೆ, ಮನೆಗೆ ಸಹಾಯ ಮಾಡುತ್ತೇವೆ, ಪ್ರೀತಿಸುವ ಹುಡುಗನಿಗೆ ಅಥವಾ ಅಣ್ಣನಿಗೆ ಸಹಾಯ ಮಾಡುವ ಮನಃಸ್ಥಿತಿ ಹೊಂದಿದ್ದಾರೆ. ಗಟ್ಟಿ ಸ್ವಭಾವದ ಹೆಣ್ಣು ಈ ಲಕ್ಷ್ಮೀ.

- **ಹೊಸ ಪ್ರಾಜೆಕ್ಟ್‌ಗಳು...**

ಸದ್ಯಕ್ಕೆ ಯಾವುದೇ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ. ಸ್ಕ್ರಿಪ್ಟ್ ಕೇಳುತ್ತಿದ್ದೇನೆ. ಸಿನಿಮಾದಲ್ಲೇ ಮುಂದುವರಿಯುವ ಇಚ್ಛೆ ಹೊಂದಿದ್ದೇನೆ.



ಶಿವರಾಜ್‌ಕುಮಾರ್

ಸೇಡಿನ ಕಥೆಯಲ್ಲ ಭೈರತಿ ರಣಗಲ್

ನಟ ಶಿವರಾಜ್‌ಕುಮಾರ್ ನಟನೆಯ ‘ಭೈರತಿ ರಣಗಲ್’ ಸಿನಿಮಾ ನ.15ರಂದು ಬಿಡುಗಡೆಯಾಗುತ್ತಿದೆ. ನರ್ತನ್ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾ ‘ಮಫ್ತಿ’ ಸಿನಿಮಾದ ಪ್ರೀಕ್ವೆಲ್. ಸಿನಿಮಾವನ್ನು ‘ಗೀತಾ ಪಿಕ್ಚರ್ಸ್’ ಲಾಂಛನದಡಿ ಗೀತಾ ಶಿವರಾಜ್‌ಕುಮಾರ್ ಅವರು ನಿರ್ಮಾಣ ಮಾಡಿದ್ದಾರೆ. ‘ವೇದ’ ಸಿನಿಮಾ ಬಳಿಕ ಗೀತಾ ಅವರು ನಿರ್ಮಾಣ ಮಾಡುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಸಿನಿಮಾದ ಬಗ್ಗೆ ಶಿವರಾಜ್‌ಕುಮಾರ್ ಹಂಚಿಕೊಂಡ ವಿಷಯಗಳು ಇಲ್ಲಿವೆ.

1 ‘ವೇದ’ ಬಳಿಕ ಗೀತಾ ಪಿಕ್ಚರ್ಸ್ ನಿರ್ಮಾಣ ಮಾಡಿರುವ ಎರಡನೇ ಸಿನಿಮಾ ‘ಭೈರತಿ ರಣಗಲ್’. ‘ಏತಕ್ಕೆ ಏಕಾಏಕಿ ಭೈರತಿ ರಣಗಲ್ ಮಾಡುತ್ತಿದ್ದೀರಿ’ ಎಂದು ಹಲವರು ಕೇಳಿದರು. ಈ ಸಿನಿಮಾ ಮಾಡಬೇಕು ಎನ್ನುವ ಯೋಚನೆ ‘ಮಫ್ತಿ’ ಮಾಡುವಾಗಲೇ ಇತ್ತು. ನರ್ತನ್ ಜೊತೆ ಆಗಲೇ ನಾನು ಚರ್ಚಿಸಿದ್ದೆ. ಶೇಕಡ 30–40 ಕಥೆ ಆಗಲೇ ಸಿದ್ಧವಿತ್ತು. ಕಥೆ ಬೆಳೆಯುತ್ತಾ ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್, ಗೋಪಾಲಕೃಷ್ಣ ದೇಶಪಾಂಡೆ, ಶಬೀರ್ ಅವರ ಪಾತ್ರಗಳು ಸೇರಿಕೊಂಡವು.

2 ‘ಮಫ್ತಿ’ ಶ್ರೀಮುರಳಿ ಸಿನಿಮಾವಾಗಿತ್ತು. ಅದರಲ್ಲಿ ಮೊದಲಾರ್ಧದ ಬಳಿಕ ‘ಭೈರತಿ ರಣಗಲ್’ ಪಾತ್ರದ ಪ್ರವೇಶವಾಗಿತ್ತು. ಈ ಬಗ್ಗೆ ನರ್ತನ್ ಹೇಳಿದಾಗ, ಹೆಚ್ಚು ಕಡಿಮೆ ಆದರೆ ಏನು ಎಂಬ ಭಯವಿತ್ತು. ಬಳಿಕ ಗೀತಾ ಜೊತೆ ಚರ್ಚಿಸಿ ಸಿನಿಮಾ ಒಪ್ಪಿಕೊಂಡೆ. ಆದರೆ ‘ಭೈರತಿ ರಣಗಲ್’ ಎಂಬ ಪಾತ್ರವನ್ನು ಜನರು ವಿಜ್ರಂಭಣೆಯಿಂದ ಸ್ವೀಕರಿಸಿದರು. ನರ್ತನ್ ಕೆಲಸದಲ್ಲಿ ಮೌಲ್ಯಯುತ ಅಂಶಗಳು ಇರುತ್ತವೆ, ಅವರಿಗೆ ಸಿನಿಮಾ ಬಗ್ಗೆ ಅಪಾರ ಪ್ರೀತಿ ಇರುವುದು ತಿಳಿಯುತ್ತದೆ. ಸಿನಿಮಾ ಪೂರ್ಣಗೊಳಿಸಿದ್ದೇ ಅರಿವಿಗೆ ಬರಲಿಲ್ಲ.

3 ನಾನು ಮತ್ತು ರಾಹುಲ್ ಬೋಸ್ ಪಾತ್ರಗಳ ಮೂಲಕ ಎದುರಾದಾಗ ನಮ್ಮ ಕಣ್ಣುಗಳಲ್ಲಿ ಸೌಮ್ಯತೆ ಇತ್ತು. ಆದರೆ ಅವುಗಳಲ್ಲಿ ಬೆಂಕಿಯೂ ಇತ್ತು. ಭೈರತಿ ರಣಗಲ್ ಒಳಗೆ ಒಬ್ಬ ರಕ್ಷಕನೂ ಇದ್ದ, ರಾಕ್ಷಸನೂ ಇದ್ದಾನೆ. ಹೀಗೆ ರಾಹುಲ್ ಬೋಸ್ ಎದುರು ಮತ್ತೊಬ್ಬ ಖಳನಾಯಕನೇ ಇದ್ದ.

4 ‘ಮಫ್ತಿ’ಯ ಪ್ರೀಕ್ವೆಲ್ ‘ಭೈರತಿ ರಣಗಲ್’. ಮುಂದೆ ‘ಭೈರತಿ ರಣಗಲ್’ನ ಸೀಕ್ವೆಲ್ ಕೂಡಾ ಬರಲಿದೆ. ಇದರೊಂದಿಗೆ ಕಥೆಗೊಂದು ಅಂತ್ಯ ಸಿಗಲಿದೆ. ಇದೊಂದು ರಿವೇಂಜ್ ಕಥೆ ಅಲ್ಲ. ಒಂದು ಮಹತ್ವಾಕಾಂಕ್ಷೆ ಇರುವ ಸಿನಿಮಾ.

ಹನುಮಂತನಾದ ರಿಷಬ್ ಶೆಟ್ಟಿ

ಪ್ರಸ್ತುತ ‘ಕಾಂತಾರ’ ಸಿನಿಮಾದ ಪ್ರೀಕ್ವೆಲ್‌ನಲ್ಲಿ ತೊಡಗಿಸಿಕೊಂಡಿರುವ ನಟ ರಿಷಬ್ ಶೆಟ್ಟಿ ಟಾಲಿವುಡ್‌ಗೆ ಹೆಜ್ಜೆ ಇಡಲು ಸಜ್ಜಾಗಿದ್ದಾರೆ. ಪ್ರಶಾಂತ್ ವರ್ಮಾ ನಿರ್ದೇಶಿಸುತ್ತಿರುವ ‘ಜೈ ಹನುಮಾನ್’ ಸಿನಿಮಾದಲ್ಲಿ ಹನುಮಂತನಾಗಿ ರಿಷಬ್ ಬಣ್ಣಹಚ್ಚಿದ್ದಾರೆ.

ಇತ್ತೀಚೆಗೆ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ‘ಡಿವೈನ್ ಸ್ಟಾರ್’ ಎಂದೇ ಖ್ಯಾತಿ ಪಡೆದಿರುವ ರಿಷಬ್, ‘ಕನ್ನಡ ನೆಲದ ವರಸುತ ಆಂಜನೇಯನ ಆಶೀರ್ವಾದದೊಂದಿಗೆ ಭಾರತ ಇತಿಹಾಸದ ಸರ್ವಶ್ರೇಷ್ಠ ಭಾವವೊಂದನ್ನು ತೆರೆಯ ಮೇಲೆ ತರಲಿದ್ದೇವೆ’ ಎಂದು ಸಿನಿಮಾ ಬಗ್ಗೆ ಹೇಳಿದ್ದಾರೆ. 2024ರ ಆರಂಭದಲ್ಲಿ ಟಾಲಿವುಡ್ ಅಂಗಳದಲ್ಲಿ ಮೂಡಿಬಂದಿದ್ದ ತೇಜ್ ಸಜ್ಜಾ ನಟನೆಯ ‘ಹನುಮಾನ್’ ಸಿನಿಮಾ ಭಾರತದಾದ್ಯಂತ ಉತ್ತಮ ಗಳಿಕೆ ಮಾಡಿತ್ತು. ಇದೀಗ ಇದೇ ಸಿನಿಮಾದ ಸೀಕ್ವೆಲ್ ಮೂಡಿಬರುತ್ತಿದೆ. ಇದರಲ್ಲಿ ತೇಜ್ ಸಜ್ಜಾ ಅವರೂ ಇರಲಿದ್ದಾರೆ ಎಂದಿದೆ ಚಿತ್ರತಂಡ.

‘ಕಾಂತಾರ’ ಸಿನಿಮಾದಲ್ಲಿನ ನಟನೆಗಾಗಿ ರಾಷ್ಟ್ರಪ್ರಶಸ್ತಿ ಮುಡಿಗೇರಿಸಿಕೊಂಡಿದ್ದ ರಿಷಬ್ ಶೆಟ್ಟಿ, ಇದೀಗ ಪೌರಾಣಿಕ ಪಾತ್ರವೊಂದನ್ನು ನಿಭಾಯಿಸಲಿದ್ದಾರೆ. ಇತ್ತೀಚೆಗೆ ಬಿಡುಗಡೆಗೊಂಡ ಫಸ್ಟ್‌ಲುಕ್‌ನಲ್ಲಿ ಕೈಯಲ್ಲಿ ರಾಮನ ವಿಗ್ರಹ ಹಿಡಿದು ಕುಳಿತ ಹನುಮಂತನಾಗಿ ರಿಷಬ್ ಕಾಣಿಸಿಕೊಂಡಿದ್ದಾರೆ. ‘ಜೈ ಹನುಮಾನ್’ ಸಿನಿಮಾ ಪ್ರಶಾಂತ್ ವರ್ಮಾ ಸಿನಿಮಾಟಿಕ್ ಯೂನಿವರ್ಸ್‌ನ ಭಾಗವಾಗಿ ತಯಾರಾಗಲಿದೆ. ನವೀನ್ ಯೆರ್ನೇನಿ ಮತ್ತು ವೈ ರವಿ ಶಂಕರ್ ದೊಡ್ಡ ಬಜೆಟ್‌ನಲ್ಲಿ ಮೈತ್ರಿ ಮೂವೀ ಮೇಕರ್ಸ್ ಬ್ಯಾನರ್‌ನಡಿ ‘ಜೈ ಹನುಮಾನ್’ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

‘ಬಿಟಿಎಸ್’ ಇಂದು ತೆರೆಗೆ

ಹೊಸಬರ ಹೊಸ ಪ್ರಯೋಗವಾದ ‘ಬಿಟಿಎಸ್’, ‘ಸಂತೋಷ ಸಂಗೀತ’ ಸಿನಿಮಾಗಳು ಇಂದು (ನ.8) ತೆರೆಕಾಣುತ್ತಿದ್ದು, ಜೊತೆಗೆ ದಿನಕರ್ ತೂಗುದೀಪ ನಿರ್ದೇಶನದ ‘ನವಗ್ರಹ’ ಸಿನಿಮಾ ರಿರಿಲೀಸ್ ಆಗುತ್ತಿದೆ.

ಬಿಟಿಎಸ್

ಇದು ಐವರು ಸಿನಿಮೋತ್ಸಾಹಿಗಳ ಕನಸು. ‘ಬಿಟಿಎಸ್’ ಎಂದರೆ ‘ಬಿಹೈಂಡ್ ದಿ ಸೀನ್ಸ್’ ಎಂದರ್ಥ. ತೆರೆಯ ಹಿಂದಿನ ಕಥೆಗಳು ಈ ಸಿನಿಮಾ. ಐದು ಕಥೆಗಳು ಈ ಸಿನಿಮಾದಲ್ಲಿವೆ. ‘ಬಾನಿಗೊಂದು ಎಲ್ಲೆ ಎಲ್ಲಿದೆ’, ‘ಕಾಫಿ, ಸಿಗರೇಟ್ಸ್ ಅಂಡ್ ಲೈನ್ಸ್’, ‘ಹೀರೋ’, ‘ಬ್ಲಾಕ್ ಬಸ್ಟರ್’ ಹಾಗೂ ‘ಸುಮೋಹ’ ಎಂಬ ಕಥೆಗಳ ಸಮ್ಮಿಲನ ಇದು. ಬಿಟಿಎಸ್ ಚಿತ್ರವನ್ನು ಪ್ರಜ್ವಲ್ ರಾಜ್, ಸಾಯಿ ಶ್ರೀನಿಧಿ, ಕುಲದೀಪ್ ಕಾರಿಯಪ್ಪ, ರಾಜೇಶ್ ಎನ್.ಎಸ್, ಅಪೂರ್ವ ಭಾರದ್ವಾಜ್ ನಿರ್ದೇಶನ ಮಾಡಿದ್ದಾರೆ. ನಿರ್ದೇಶಕರೇ ಸಿನಿಮಾಗೆ ಬಂಡವಾಳ ಹಾಕಿರುವುದು ವಿಶೇಷ. ವಿಜಯ್ ಕೃಷ್ಣ, ಮಹದೇವ ಪ್ರಸಾದ್, ಶ್ರೀಪ್ರಿಯ, ಕೌಶಿಕ್, ಚಂದನ, ಮೇದಿನಿ ಕೆಳಮನೆ, ಆಹನ್, ಜಹಾಂಗೀರ್ ನೀನಾಸಂ ಸೇರಿದಂತೆ ಮತ್ತಿತರರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಸಂತೋಷ ಸಂಗೀತ

ಸಿದ್ದು ಎಸ್. ನಿರ್ಮಿಸಿ, ನಿರ್ದೇಶಿಸಿರುವ ಚಿತ್ರವಿದು. ಸಿನಿಮಾದ ನಾಯಕ-ನಾಯಕಿಯಾಗಿ ಅರ್ನವ್ ವಿನ್ಯಾಸ್ ಹಾಗೂ ರಾಣಿ ವರದ್ ನಟಿಸಿದ್ದಾರೆ. ನಕ್ಷತ್ರ, ದೊಡ್ಡಣ್ಣ, ಅವಿನಾಶ್, ಲಯಕೋಕಿಲ, ಮಡೆನೂರ್ ಮನು, ಮಿಮಿಕ್ರಿ ಗೋಪಿ, ವಾಣಿ, ಸೀತಾ ಕೋಟೆ, ಸೂರ್ಯ ಕಿರಣ್, ಅಮಿತ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಿರ್ದೇಶಕ ಸಿದ್ದು ಅವರೇ ಚಿತ್ರಕ್ಕೆ ಕಥೆ ಬರೆಯುವುದರೊಂದಿಗೆ ಸಂಗೀತ ಸಂಯೋಜನೆಯನ್ನು ಮಾಡಿದ್ದಾರೆ. ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣ, ವಿನಯ್ ಯದುನಂದನ್ ಸಂಕಲನ ಚಿತ್ರಕ್ಕಿದೆ.

ನವಗ್ರಹ

ದಿನಕರ್ ತೂಗುದೀಪ ನಿರ್ದೇಶಿಸಿದ ದರ್ಶನ್ ಅಭಿನಯದ ಈ ಸಿನಿಮಾ ಮರುಬಿಡುಗಡೆಯಾಗುತ್ತಿದೆ. 2008ರ ನವೆಂಬರ್ 7ರಂದು ಬಿಡುಗಡೆಯಾಗಿದ್ದ ಈ ಸಿನಿಮಾ ಇದೀಗ 16 ವರ್ಷಗಳ ಬಳಿಕ ರಿರಿಲೀಸ್ ಆಗುತ್ತಿದೆ. ಇದು ದಿನಕರ್ ನಿರ್ದೇಶನದ ಎರಡನೇ ಸಿನಿಮಾ. ಕನ್ನಡ ಚಿತ್ರರಂಗದ ಖ್ಯಾತ ಖಳನಾಯಕರ ಮಕ್ಕಳನ್ನು ಒಟ್ಟಿಗೆ ಬೆಳ್ಳಿತೆರೆಯ ಮೇಲೆ ತಂದಿದ್ದರು ದಿನಕರ್. ಚಿನ್ನದ ಅಂಬಾರಿಯನ್ನು ಕದಿಯಲು ಯತ್ನಿಸುವ ಕಥೆಯನ್ನೊಳಗೊಂಡ ಈ ಸಿನಿಮಾದಲ್ಲಿ ಧರ್ಮ ಕೀರ್ತಿರಾಜ್, ಶರ್ಮಿಳಾ ಮಾಂಡ್ರೆ, ತರುಣ್ ಸುಧೀರ್, ಸೃಜನ್ ಲೋಕೇಶ್ ಮತ್ತಿತರರು ನಟಿಸಿದ್ದಾರೆ.



ಬಿಟಿಎಸ್ ಚಿತ್ರತಂಡ

‘ಟೆನಂಟ್’ ಟ್ರೇಲರ್ ಬಿಡುಗಡೆ

ಶ್ರೀಧರ್ ಶಾಸ್ತ್ರಿ ನಿರ್ದೇಶನದ ‘ಟೆನಂಟ್’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ನ.22ರಂದು ಸಿನಿಮಾ ತೆರೆಕಾಣುತ್ತಿದೆ. ಈ ಹೊಸ್ತಿಲಲ್ಲಿ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

ಚಿತ್ರದಲ್ಲಿ ‘ಬಿಗ್‌ಬಾಸ್’ ಮನೆಯಲ್ಲಿರುವ ಧರ್ಮ ಕೀರ್ತಿರಾಜ್, ಉಗ್ರಂ ಮಂಜು ನಟಿಸಿದ್ದಾರೆ. ತಿಲಕ್, ರಾಕೇಶ್ ಮಯ್ಯ, ಸೋನು ಗೌಡ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಇದು ಶ್ರೀಧರ್ ಅವರ ಚೊಚ್ಚಲ ಸಿನಿಮಾವಾಗಿದ್ದು, ಮಾಸ್ಟರ್ ಚಾಯ್ಸ್ ಕ್ರಿಯೇಶನ್‌ನಡಿ ನಾಗರಾಜ್ ಟಿ. ನಿರ್ಮಾಣ ಮಾಡಿದ್ದಾರೆ.

ಇದು ಒಂದೇ ಮನೆಯಲ್ಲಿ ನಡೆಯುವ ಕಥೆ. ಲವರ್ ಬಾಯ್ ಆಗಿ ಮಿಂಚಿದ್ದ ನಟ ಧರ್ಮ ಕೀರ್ತಿರಾಜ್ ಈ ಸಿನಿಮಾದಲ್ಲಿ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ಪೊಲೀಸ್ ಪಾತ್ರದಲ್ಲಿ ತಿಲಕ್ ಕಾಣಿಸಿಕೊಂಡಿದ್ದಾರೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಈ ಸಿನಿಮಾದ ಚಿತ್ರೀಕರಣ ನಡೆದಿತ್ತು. ಲಾಕ್‌ಡೌನ್ ಅನ್ನೇ ಆಧಾರವಾಗಿಟ್ಟುಕೊಂಡು ಹೆಣೆದಿರುವ ಕಥೆ ಇದಾಗಿದೆ. ಚಿತ್ರಕ್ಕೆ ಗಿರೀಶ್ ಹೊತೂರ್ ಸಂಗೀತ ಸಂಯೋಜನೆ, ಉಜ್ವಲ್ ಸಂಕಲನ, ಮನೋಹರ್ ಛಾಯಾಚಿತ್ರಗ್ರಹಣವಿದೆ.




ರಾಕೇಶ್ ಮಯ್ಯ, ಸೋನು ಗೌಡ, ತಿಲಕ್

ಅಚ್ಯುತ್–ಗೋಪಾಲ್ ಅಣ್ತಮ್ಮನ

ತಮ್ಮ ಭಿನ್ನವಾದ ನಟನೆಯಿಂದಲೇ ಗಮನಸೆಳೆದಿರುವ ಅಚ್ಯುತ್ ಕುಮಾರ್ ಹಾಗೂ ಗೋಪಾಲಕೃಷ್ಣ ದೇಶಪಾಂಡೆ ಸಿನಿಮಾವೊಂದರ ಮೂಲಕ ತೆರೆಹಂಚಿಕೊಳ್ಳುತ್ತಿದ್ದಾರೆ.

ಪೇಟಾಸ್ ಸಿನಿ ಕೆಫೆ ಮತ್ತು ಫಿಲ್ಮಿ ಮಾಂಕ್ ಸಹಯೋಗದೊಂದಿಗೆ ವಿಶ್ವ ನಿರ್ದೇಶನದ ‘ಅಣ್ತಮ್ಮನ’ ಸಿನಿಮಾದಲ್ಲಿ ಅಣ್ಣ ತಮ್ಮನಾಗಿ ಅಚ್ಯುತ್ ಕುಮಾರ್ ಹಾಗೂ ಗೋಪಾಲಕೃಷ್ಣ ದೇಶಪಾಂಡೆ ನಟಿಸಲಿದ್ದಾರೆ. ಪ್ರದೀಪ್ ರಾಜ್, ಪಿ.ಸಿ.ಶೇಖರ್, ಪ್ರಶಾಂತ್ ರಾಜಪ್ಪ ನಿರ್ದೇಶನ ತಂಡದಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ ವಿಶ್ವ. ‘ಒಂದ್ ಕಥೆ ಹೇಳ್ಲಾ’ ಹಾಗೂ ‘ಶಾಲಿವಾಹನ ಶಕೆ’ ಖ್ಯಾತಿಯ ಗಿರೀಶ್ ಜಿ. ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ, ಪೂರ್ಣಚಂದ್ರ ತೇಜಸ್ವಿ ಎಸ್.ವಿ. ಅವರ ಸಂಗೀತ, ಶೈಲೇಶ್ ಕುಮಾರ್ ಸಂಭಾಷಣೆ, ಹರಿ ಪರಾಕ್ ಸಾಹಿತ್ಯ ಚಿತ್ರಕ್ಕಿದೆ. ಈ ಚಿತ್ರ ಅಣ್ಣ–ತಮ್ಮನ ಸಂಬಂಧ, ನಮ್ಮ ಮಣ್ಣಿನ ಆಚರಣೆ, ಹಳೆ ಮೈಸೂರು ಸಂಸ್ಕೃತಿ, ನಂಬಿಕೆ ಮೂಢನಂಬಿಕೆಗಳ ಸುತ್ತ ಹೆಣೆದಿರುವ ಕಥೆ ಹೊಂದಿದೆ. ಆದಿಚುಂಚನಗಿರಿ, ನಾಗಮಂಗಲ, ಮದ್ದೂರು, ಮಂಡ್ಯ ಸುತ್ತಮುತ್ತ ಚಿತ್ರೀಕರಣ ನಡೆಯಲಿದ್ದು, ಶೀಘ್ರದಲ್ಲೇ ಚಿತ್ರೀಕರಣ ಪ್ರಾರಂಭವಾಗಲಿದೆ ಎಂದಿದೆ ಚಿತ್ರತಂಡ.



ಅಚ್ಯುತ್‌ಕುಮಾರ್



ಗೋಪಾಲಕೃಷ್ಣ ದೇಶಪಾಂಡೆ



ರಿಷಬ್ ಶೆಟ್ಟಿ

‘ಮೇಘ’ದೊಳಗೆ ಕಿರಣ್–ಕಾಜಲ್

‘ರಾನಿ’ ಬಳಿಕ ಕಿರಣ್‌ರಾಜ್ ನಟನೆಯ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಚರಣ್ ನಿರ್ದೇಶನದ, ಕಿರಣ್‌ರಾಜ್ ಹಾಗೂ ಕಾಜಲ್ ಕುಂದರ್ ಜೋಡಿ ನಟಿಸಿರುವ ‘ಮೇಘ’ ಸಿನಿಮಾ ಶೀಘ್ರದಲ್ಲೇ ಬಿಡುಗಡೆಯಾಗಲಿದೆ.

‘ಮೇಘ’, ಕೃಷಿ ಪ್ರೊಡಕ್ಷನ್ಸ್ ಬ್ಯಾನರ್‌ನ ಚೊಚ್ಚಲ ಚಿತ್ರವಾಗಿದ್ದು, ನಾಯಕನ ತಂದೆಯಾಗಿ ರಾಜೇಶ್ ನಟರಂಗ ನಟಿಸಿದ್ದಾರೆ. ಶೋಭರಾಜ್, ಸಂಗೀತಾ, ಸುಂದರ್ ವೀಣಾ, ಹನುಮಂತೇಗೌಡ, ತರಂಗ ವಿಶ್ವ ಮತ್ತು ಗಿರೀಶ್ ಶಿವಣ್ಣ ಮುಂತಾದ ಕಲಾವಿದರು ತಾರಾಬಳಗದಲ್ಲಿದ್ದಾರೆ. ‘ಚಿತ್ರದ ಕಥೆಯು ನಿಜವಾದ ಸ್ನೇಹ ಮತ್ತು ಪ್ರೀತಿಯ ನಡುವೆ ಇರುವ ಸಣ್ಣ ವ್ಯತ್ಯಾಸವನ್ನು ನಿರೂಪಿಸುತ್ತದೆ. ಮಾನವ ಭಾವನೆಗಳ ಸಿನಿಮೀಯ ಚಿತ್ರಣವನ್ನು ಚಿತ್ರಿಸುತ್ತದೆ. ಇದು ವಿವಿಧ ಸಂಬಂಧಗಳ ಮೌಲ್ಯಗಳನ್ನು ವಿವರಿಸುವ ನಿಟ್ಟಿನಲ್ಲಿ ರೂಪಕಗೊಂಡ ಕಥೆ’ ಎಂದಿದೆ ಚಿತ್ರತಂಡ.

ವಿ.ನಾಗೇಂದ್ರ ಪ್ರಸಾದ್ ಅವರ ಎರಡು ಹಾಡುಗಳು, ನಿರ್ದೇಶಕ ಚರಣ್ ಅವರ ಮೂರು ಹಾಡುಗಳು ಚಿತ್ರದಲ್ಲಿದ್ದು, ಜೋಯಲ್ ಸಕ್ಕರಿ ಅವರು ಸಂಗೀತ ಸಂಯೋಜಿಸಿದ್ದಾರೆ. ವಿಜಯ್ ಪ್ರಕಾಶ್ ಮತ್ತು ವಾಸುಕಿ ವೈಭವ್ ಹಾಡುಗಳಿಗೆ ಧ್ವನಿಯಾಗಿದ್ದಾರೆ.



ಕಾಜಲ್ ಕುಂದರ್

₹99ಕ್ಕೆ ಅರವಿಂದ ಸ್ವಾಮಿ!



ಹೃತಿಕ ಶ್ರೀನಿವಾಸ್

ಅಭಿಷೇಕ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ ‘ಆರಾಮ್ ಅರವಿಂದ ಸ್ವಾಮಿ’ ಸಿನಿಮಾ ನವೆಂಬರ್ 22ರಂದು ತೆರೆಕಾಣಲಿದೆ. ಚಿತ್ರತಂಡವು ಮೊದಲ ಮೂರು ದಿನಗಳಿಗೆ ಸಿನಿಮಾ ಟಿಕೆಟ್ ದರವನ್ನು ₹99 ನಿಗದಿಪಡಿಸಿದೆ.

ಪ್ರೇಕ್ಷಕರನ್ನು ತಲುಪಲು ಮತ್ತೊಂದು ಪ್ರಯೋಗಕ್ಕೆ ಕೈಹಾಕಿರುವ ಚಿತ್ರತಂಡ, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ನಿರ್ಮಾಪಕ–ವಿತರಕರಾದ ಜಯಣ್ಣ, ಕಾರ್ತಿಕ್ ಗೌಡ, ಯೋಗಿ ಜಿ. ರಾಜ್, ನಿರ್ದೇಶಕ ತರುಣ್ ಸುಧೀರ್, ನಟ ಯುವ ರಾಜ್‌ಕುಮಾರ್‌ಗೆ ₹99ರ ಟಿಕೆಟ್‌ಗಳನ್ನು ನೀಡಿದೆ.

ಸಿನಿಮಾದಲ್ಲಿ ಅನೀಶ್ ತೇಜೇಶ್ವರ್ ನಾಯಕನಾಗಿ ನಟಿಸಿದ್ದಾರೆ. ಮಿಲನಾ ನಾಗರಾಜ್ ಹಾಗೂ ಹೃತಿಕ ಶ್ರೀನಿವಾಸ್ ಅನೀಶ್‌ಗೆ ಜೋಡಿಯಾಗಿದ್ದಾರೆ. ಮಾಸ್ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅನೀಶ್, ಈ ಸಿನಿಮಾ ಮೂಲಕ ರೊಮ್ಯಾಂಟಿಕ್ ಹೀರೊ ಆಗಿ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಮಲಯಾಳ ಹುಡುಗಿಯಾಗಿ ಇಲ್ಲಿ ಮಿಲನಾ ಕಾಣಿಸಿಕೊಂಡಿದ್ದಾರೆ. ‘ನಮ್ ಗಣಿ ಬಿಕಾಂ ಪಾಸ್’, ‘ಗಜಾನನ ಆ್ಯಂಡ್ ಗ್ಯಾಂಗ್’ ಬಳಿಕ ಅಭಿಷೇಕ್ ಶೆಟ್ಟಿ ನಿರ್ದೇಶಿಸುತ್ತಿರುವ ಮೂರನೇ ಚಿತ್ರ ಇದಾಗಿದೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆ, ವೈವಿಬಿ ಶಿವಸಾಗರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಶ್ರೀಕಾಂತ್ ಪ್ರಸನ್ನ ಹಾಗೂ ಪ್ರಶಾಂತ್ ರೆಡ್ಡಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

ಮಾನನಷ್ಟ ಪ್ರಕರಣದ ವಿಚಾರಣೆ ಮುಂದುವರಿಸಲು ಪೀಠ ಅನುಮತಿ

ರೂಪಾಗೆ 'ಸುಪ್ರೀಂ'ನಲ್ಲಿ ಹಿನ್ನಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮ ವಿರುದ್ಧ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹೂಡಿರುವ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯನ್ನು ಹಿಂಪಡೆಯಲು ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಅನುಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ, ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ಆಗಸ್ಟಿನ್ ಜಾರ್ಜ್ ಮಸಿಹ್ ಅವರಿದ್ದ ಪೀಠಕ್ಕೆ, 'ಇಬ್ಬರು ಕೂಡ ಇತ್ಯರ್ಥಕ್ಕೆ ಬರಲು ಸಾಧ್ಯವಾಗಿಲ್ಲ. ಉಭಯ ಅಧಿಕಾರಿಗಳು ಪ್ರಕರಣದ ವಿಚಾರಣೆಯೊಂದಿಗೆ ಮುಂದುವರಿಯಲಿದ್ದಾರೆ' ಎಂದು ವಕೀಲರು ತಿಳಿಸಿದರು. ಬಳಿಕ ಪೀಠವು ಅರ್ಜಿ ಹಿಂಪಡೆಯಲು ಒಪ್ಪಿತು.

ಸಿಂಧೂರಿ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, 'ತಾವು ಸಲಹೆ ನೀಡಿದರೂ ರೂಪಾ ಅವರು ಇತ್ಯರ್ಥಕ್ಕೆ ಒಪ್ಪಲಿಲ್ಲ' ಎಂದರು. ಇಬ್ಬರೂ ಅಧಿಕಾರಿಗಳು ನ್ಯಾಯಾಲಯದಲ್ಲಿ ಹಾಜರಿದ್ದರು.

ವಿಚಾರಣೆ ವೇಳೆ ನ್ಯಾಯಪೀಠ, ಸಿಂಧೂರಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆರೋಪಗಳನ್ನು ಮಾಡಿರುವ ರೂಪಾ ಅವರ ಉದ್ದೇಶವನ್ನು ಪ್ರಶ್ನಿಸಿತು.

'ನಿಮ್ಮ ಕಕ್ಷಿದಾರರು ಸಾಮಾಜಿಕ ಜಾಲತಾಣಗಳಲ್ಲಿ ಇಂತಹ ಹೇಳಿಕೆಗಳನ್ನು ಏಕೆ ನೀಡಿದರು? ಪ್ರತಿವಾದಿ ವಿರುದ್ಧ ಇಂತಹ ಆರೋಪಗಳನ್ನು ಮಾಡಲು ನಿಮ್ಮ ಕಕ್ಷಿದಾರರು ತನಿಖಾಧಿಕಾರಿಯೇ' ಎಂದು ರೂಪಾ ವಕೀಲರನ್ನು ಪ್ರಶ್ನಿಸಿತು. ರೂಪಾ ಪರ ವಕೀಲರು, 'ನನ್ನ ಕಕ್ಷಿದಾರರು ಸಿಂಧೂರಿ ಅವರ ಅಕ್ರಮಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದರು' ಎಂದು ಗಮನ ಸೆಳೆದರು.

ಆಗ ನ್ಯಾಯಪೀಠವು, 'ಈ ಬಗ್ಗೆ ಇಲಾಖೆಯೊಳಗೆ ದೂರು ಸಲ್ಲಿಸಬಹುದಿತ್ತು ಅಲ್ಲವೇ' ಎಂದು ಕೇಳಿತು. 'ನೀವು ಆಕೆಯ ಮೇಲೆ ನೇರವಾಗಿ ಆರೋಪ ಮಾಡಲು ನಿರ್ಧರಿಸಿದ್ದೀರಿ. ಇದು ಮಾನಹಾನಿಯಲ್ಲವೇ. ನಿಮಗೆ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ಪ್ರತಿಯೊಂದು ಅಂಶವೂ ಗೊತ್ತಿದೆ. ಆದರೂ, ಇದನ್ನು ಮಾಡಿದ್ದೀರಿ' ಎಂದು ಹೇಳಿತು.

ಜತೆಗೆ, ಇಬ್ಬರೂ ಈ ವಿವಾದವನ್ನು ನ್ಯಾಯಾಲಯದ ಹೊರಗೆ ಇತ್ಯರ್ಥಪಡಿಸಿಕೊಳ್ಳುವುದು ಸೂಕ್ತ. ಅದರ ಹೊರತಾಗಿ ನ್ಯಾಯಾಂಗ ಹೋರಾಟಕ್ಕೆ ಮುಂದಾದಲ್ಲಿ ಅದು ಇಬ್ಬರ ವೃತ್ತಿ ಜೀವನಕ್ಕೆ ತೊಂದರೆ ಉಂಟು ಮಾಡಬಹುದು ಎಂದು ನ್ಯಾಯಪೀಠ ಕಿವಿ ಮಾತು ಹೇಳಿತು. ಅಲ್ಲದೇ, 'ಇಬ್ಬರು ಅಧಿಕಾರಿಗಳು ತಮ್ಮ ಕೆಲಸಗಳಿಗೆ ಗಮನ ಕೊಡುವುದಕ್ಕಿಂತ ಹೆಚ್ಚಿನ ಸಮಯ ವಕೀಲರ ಕಚೇರಿಗಳಲ್ಲಿ ಕಳೆಯುತ್ತಿದ್ದಾರೆ' ಎಂದಿತು.

ಇತ್ಯರ್ಥದ ಸಲಹೆಯನ್ನು ಒಪ್ಪದ ಸಿಂಧೂರಿ ಪರ ವಕೀಲರು, 'ನನ್ನ ಕಕ್ಷಿದಾರರ ಘನತೆಗೆ ಭಾರಿ ಹಾನಿಯಾಗಿದೆ. ಆದ್ದರಿಂದ ಸಿಂಧೂರಿ ಅವರು ರಾಜಿಸಂಧಾನದಲ್ಲಿ ನಂಬಿಕೆ ಇಟ್ಟಿಲ್ಲ ಮತ್ತು ಪ್ರಕರಣ ಮೆರಿಟ್ ಮೇಲೆ ಇತ್ಯರ್ಥವಾಗಬೇಕು ಎಂದು ಬಯಸುತ್ತಿದ್ದಾರೆ' ಎಂದರು.

ಸಿಂಧೂರಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಪೋಸ್ಟ್‌ಗಳನ್ನು ತೆಗೆಯುವಂತೆ ರೂಪಾ ಅವರಿಗೆ ನ್ಯಾಯಾಲಯವು 2023ರ ಡಿಸೆಂಬರ್‌ನಲ್ಲಿ ನಿರ್ದೇಶನ ನೀಡಿತ್ತು.

ಪ್ರಕರಣವೇನು?

'ನನ್ನ ವಿರುದ್ಧ ರೂಪಾ ಮೌದ್ಗಿಲ್ 2023ರ ಫೆಬ್ರುವರಿ 18 ಮತ್ತು 19ರಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಆರೋಪಗಳು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವಂತಿವೆ. ನನ್ನ ತೇಜೋವಧೆ ಮಾಡುವ ದುರದ್ದೇಶದಿಂದಲೇ ಈ ಕೃತ್ಯ ಎಸಗಲಾಗಿದೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಮಾನಸಿಕ ಯಾತನೆ ಉಂಟು ಮಾಡಿದೆ' ಎಂದು ಆರೋಪಿಸಿ ರೋಹಿಣಿ ಸಿಂಧೂರಿ ಮಾರ್ಚ್ 3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

'ಮಾನಹಾನಿ ಮತ್ತು ಮಾನಸಿಕ ಯಾತನೆ ಉಂಟು ಮಾಡಿರುವುದಕ್ಕಾಗಿ ರೂಪಾ ಅವರಿಂದ ₹1 ಕೋಟಿ ಮೊತ್ತವನ್ನು ಪರಿಹಾರ ರೂಪವಾಗಿ ಕೊಡಿಸಬೇಕು. ಅವರ ವಿರುದ್ಧ ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದರು. ದೂರು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ಮಾರ್ಚ್ 24ರಂದು ಆದೇಶಿಸಿತ್ತು. ಈ ಆದೇಶ ಮತ್ತು ಖಾಸಗಿ ದೂರನ್ನು ರದ್ದುಪಡಿಸಬೇಕು ಎಂದು ಕೋರಿ ರೂಪಾ 2023ರ ಮೇ 31ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು.

ಪಿಜಿ–ಸಿಇಟಿ: ಆಪ್ಷನ್ ದಾಖಲು ಇಂದೇ ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಬಿ.ಎ, ಎಂ.ಸಿ.ಎ, ಎಂ.ಇ, ಎಂ.ಟೆಕ್ ಹಾಗೂ ಎಂ.ಆರ್ಕ್ ಸೇರಿದಂತೆ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಆಪ್ಷನ್ ದಾಖಲಿಸಲು ನ. 8 ಕೊನೆಯ ದಿನ. 9ರಂದು ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಅಣಕು ಫಲಿತಾಂಶ ನಂತರ ನ.9ರಿಂದ 12ರ ಬೆಳಿಗ್ಗೆ 11ರವರೆಗೆ ಅಗತ್ಯ ಇದ್ದರೆ ಆಪ್ಷನ್ ಬದಲಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಅಂದೇ ಸಂಜೆ 6ಕ್ಕೆ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಚಾಯ್ಸ್ ದಾಖಲಿಸಲು ನ.13ರಿಂದ 14ರವರೆಗೆ ಅವಕಾಶ ಇರುತ್ತದೆ. ಚಾಯ್ಸ್-1 ಮತ್ತು 2 ಅನ್ನು ಆಯ್ಕೆ ಮಾಡಿದವರು ಶುಲ್ಕ ಪಾವತಿ ಮಾಡಬೇಕು. ಚಾಯ್ಸ್-1 ದಾಖಲಿಸಿದವರು ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ನ. 16ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು.

ಪಿಜಿ ಆಯುಷ್ ಮೊದಲ ಸುತ್ತು: ಪಿಜಿ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಗೆ ನ.8ರ ಮಧ್ಯಾಹ್ನ 1ರವರೆಗೆ ಆಪ್ಷನ್ ದಾಖಲಿಸಿಕೊಳ್ಳಬಹುದು. ಅಂದೇ ಸಂಜೆ 8ಕ್ಕೆ ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ. ನ.11ರ ಬೆಳಿಗ್ಗೆ 11 ರವರೆಗೆ ಆಪ್ಷನ್ ಬದಲಿಸಿಕೊಳ್ಳಲು ಅವಕಾಶ ನೀಡುತ್ತಿದ್ದು, ಅಂದೇ ಸಂಜೆ 6ಕ್ಕೆ ನೈಜ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗತ್ತದೆ.

ನ.11ರಿಂದ 12ರವರೆಗೆ ಚಾಯ್ಸ್ ದಾಖಲಿಸಬೇಕು. ನಂತರ ಶುಲ್ಕ ಪಾವತಿಸಿ ಕಾಲೇಜಿಗೆ ಪ್ರವೇಶ ಪಡೆಯಲು ನ.14ರವರೆಗೆ ಅವಕಾಶ ಇರುತ್ತದೆ ಎಂದು ಪ್ರಸನ್ನ ಅವರು ಮಾಹಿತಿ ನೀಡಿದ್ದಾರೆ.

ಕುಮಟಾ: ಆರ್‌ಎಸ್‌ಎಸ್ ಬೈಠಕ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಕಾರವಾರ: ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಕುಮಟಾದಲ್ಲಿ ನವೆಂಬರ್ 8 ರಿಂದ 10ರವರೆಗೆ ಆರ್‌ಎಸ್‌ಎಸ್ ಉತ್ತರ ಪ್ರಾಂತ್ಯದ ಪ್ರಮುಖರ ಬೈಠಕ್ ನಡೆಯಲಿದೆ. ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪಾಲ್ಗೊಳ್ಳುವರು.

'ಸಂಘದ ಚಟುವಟಿಕೆ ವಿಸ್ತರಣೆ ಜೊತೆಗೆ ಶಾಖೆಗಳನ್ನು ಬಲಪಡಿಸುವ ಬಗ್ಗೆ ಬೈಠಕ್‌ನಲ್ಲಿ ಚರ್ಚಿಸಲಾಗುವುದು. ಇದು ಹೊರತುಪಡಿಸಿ ಬೇರೆ ವಿಷಯಗಳನ್ನು ಬಹಿರಂಗಪಡಿಸಲು ಆಗದು. ತಾಲ್ಲೂಕು ಪ್ರಮುಖರು ಮತ್ತು ಅದಕ್ಕಿಂತ ಮೇಲಿನ ಹದ್ದೆಯಲ್ಲಿ ಇರುವವರು ಮಾತ್ರ ಭಾಗಿಯಾಗುವರು' ಎಂದು ಆರ್‌ಎಸ್‌ಎಸ್ ಪ್ರಮುಖರೊಬ್ಬರು ತಿಳಿಸಿದರು.

'ಬೈಠಕ್‌ಗೂ ರಾಜಕೀಯ ನಾಯಕರಿಗೂ ಸಂಬಂಧವಿಲ್ಲ. ಮಾಜಿ ಸಂಸದ ಅನಂತಕುಮಾರ ಹೆಗಡೆ ಪಾಲ್ಗೊಳ್ಳುವರು ಎಂಬುದೆಲ್ಲ ಊಹಾಪೋಹ. ಸಂಘದಲ್ಲಿ ಜವಾಬ್ದಾರಿ ಹೊತ್ತವರು ಹೊರತುಪಡಿಸಿ ಇತರರನ್ನು ಆಹ್ವಾನಿಸಿಲ್ಲ. ನವೆಂಬರ್ 10ರಂದು ವಿವಿಧ ಕ್ಷೇತ್ರಗಳ ಪ್ರಮುಖರು, ಉದ್ಯಮಿಗಳ ಜೊತೆ ಸಂವಾದ ನಡೆಯಲಿದೆ' ಎಂದರು.

ನಿಧನ ವಾರ್ತೆ

ಕವಯತ್ರಿ ಆಶಾ ಕಡಪಟ್ಟಿ ನಿಧನ



ಬೆಳಗಾವಿ: ಜಿಲ್ಲಾ ಲೇಖಕಿಯರ ಸಂಘದ ಸಂಸ್ಥಾಪಕ ಅಧ್ಯಕ್ಷೆ, ಕವಯತ್ರಿ ಆಶಾ ಕಡಪಟ್ಟಿ (82) ಅವರು ಗುರುವಾರ ನಿಧನರಾದರು. ಎರಡು ಕಾದಂಬರಿ, ಎಂಟು ಕವನ ಸಂಕಲನ ಹಾಗೂ ಕಥಾ ಸಂಕಲನಗಳನ್ನು ಅವರು ರಚಿಸಿದ್ದಾರೆ.

ಆಶಾ ಅವರು ಸ್ಥಾಪಿಸಿದ ಜಿಲ್ಲಾ ಲೇಖಕಿಯರ ಸಂಘಕ್ಕೆ ಈಗ 25 ವರ್ಷಗಳಾಗಿವೆ. ಸಂಘದ ಮೂಲಕ ಜಿಲ್ಲೆಯ ಹಲವು ಲೇಖಕಿಯರನ್ನು, ಕವಯತ್ರಿಯರನ್ನು, ಯುವ ಬರಹಗಾರರನ್ನು ಅವರು ಪ್ರೋತ್ಸಾಹಿಸಿದ್ದರು. ಸರ್ಕಾರದ ಡಾ.ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಸದಸ್ಯರೂ ಆಗಿದ್ದರು.

ಇಲ್ಲಿನ ಮರಾಠಾ ಲಘು ಪದಾತಿದಳದಲ್ಲಿ ಸಿವಿಲ್ ಎಂಜಿನಿಯರ್ ಆಗಿದ್ದ ಅವರ ಪತಿ ಬಾಲಚಂದ್ರ ಕಡಪಟ್ಟಿ ಅವರು ಐದು ವರ್ಷಗಳ ಹಿಂದೆ ನಿಧನರಾಗಿದ್ದರು. ಅವರಿಗೆ ಮಕ್ಕಳು ಇರಲಿಲ್ಲ. ಆಶಾ ಅವರ ಬಯಕೆಯಂತೆ ಅವರ ದೇಹವನ್ನು ಇಲ್ಲಿನ ಡಾ.ರವಿ ಪಾಟೀಲ ಅವರ ಆಸ್ಪತ್ರೆಗೆ ದಾನ ಮಾಡಲಾಯಿತು.

ಪಿಎ ಕೆಲಸಕ್ಕೆ ಸಚಿವರದ್ದೇ ನಿರ್ದೇಶನ: ಬೆಲ್ಲದ

ಎಸ್‌ಡಿಎ ಆತ್ಮಹತ್ಯೆ ಪ್ರಕರಣ: ಸಚಿವೆ ಲಕ್ಷ್ಮಿ ಹೆಬ್ಬಾಳಕರ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಆಪ್ತ ಸಹಾಯಕರು (ಪಿಎ) ಸಚಿವರು ಹೇಳಿದಂತೆ ಕೇಳುತ್ತಾರೆಯೇ ಹೊರತು ಸ್ವಂತ ಬುದ್ಧಿಯಿಂದ ಕೆಲಸ ಮಾಡಲ್ಲ. ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪಿಎ ಹೆಸರು ಕೇಳಿಬಂದಿದೆ. ತಾವು ಜವಾಬ್ದಾರರಲ್ಲ ಎಂದು ಸಚಿವೆ ನುಣುಚಿಕೊಳ್ಳಲು ಆಗದು' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

'ರುದ್ರಣ್ಣ ಅವರು ಲಕ್ಷ್ಮಿ ಹೆಬ್ಬಾಳಕರ ಪಿಎ ಹೆಸರು ಬರೆದು ಬೆಳಗಾವಿ ತಹಶೀಲ್ದಾರ್ ಕಚೇರಿಯಲ್ಲಿ ಸಾವಿಗೆ ಶರಣಾಗಿದ್ದಾರೆ. ಇದಕ್ಕೆ ಸಚಿವೆ ನೇರ ಹೊಣೆ. ತಕ್ಷಣ ಅವರು ರಾಜೀನಾಮೆ ಕೊಟ್ಟು ತನಿಖೆ ಎದುರಿಸಬೇಕು. ತನಿಖೆಯಲ್ಲಿ ನಿರಪರಾಧಿ ಎಂದು ಕಂಡುಬಂದರೆ ಮತ್ತೆ ಸಚಿವರಾಗಲಿ' ಎಂದು ಅವರು ಗುರುವಾರ ಹೇಳಿದರು.

ಇದಕ್ಕೂ ಮುನ್ನ ಸಚಿವೆ ಲಕ್ಷ್ಮಿ ಹೆಬ್ಬಾಳಕರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ರಾಣಿ ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು. ಬಳಿಕ ಬೊಬ್ಬೆ ಹೊಡೆದು, ಮೆರವಣಿಗೆ ಕೈಗೊಂಡರು.



ಸಚಿವೆ ಲಕ್ಷ್ಮಿ ಹೆಬ್ಬಾಳಕರ ರಾಜೀನಾಮೆಗೆ ಆಗ್ರಹಿಸಿ ಬೆಳಗಾವಿಯಲ್ಲಿ ಗುರುವಾರ ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರ ನೇತೃತ್ವದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಬೊಬ್ಬೆ ಹೊಡೆದು ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಪ್ರಜಾ ಮತ

‘ಉದ್ಯೋಗ ಸೃಷ್ಟಿಗೆ ಆದ್ಯತೆ’

ಶಿಗ್ಗಾವಿ: ‘ಕೈ’ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ



● ನಿಮಗೆ ಮತ ಏಕೆ ಹಾಕಬೇಕು ?
ಉತ್ತರ: ಬಸವರಾಜ ಬೊಮ್ಮಾಯಿಗೆ ಜನರು ನಾಲ್ಕು ಬಾರಿ ಅಧಿಕಾರ ಕೊಟ್ಟಿದ್ದರು. ಜನರನ್ನು ಬೊಮ್ಮಾಯಿ ಸರಿಯಾಗಿ ನೋಡಿ-ಕೊಳ್ಳಲಿಲ್ಲ. ಕ್ಷೇತ್ರದ ಜನರಿಗಾಗಿ ಒಂದೂ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಈ ಬಾರಿಯೂ ಅವರಿಗೆ ಮತ ನೀಡಿದರೆ, ಅದೇ ರಾಗ ಅದೇ ಹಾಡು. ಕಾಂಗ್ರೆಸ್ ಸರ್ಕಾರದಿಂದ ಕ್ಷೇತ್ರದ ಸಕಲ ಅಭಿವೃದ್ಧಿಗಾಗಿ ಜನರು ನನಗೆ ಮತ ಹಾಕಬೇಕು.

ಶಿಗ್ಗಾವಿ : ‘ಜನರ ಆಶೀರ್ವಾದದಿಂದ ಶಾಸಕ, ಸಚಿವ ಹಾಗೂ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಯಾವುದೇ ಅಭಿವೃದ್ಧಿ ಮಾಡಲಿಲ್ಲ. ಜನರಿಗೆ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿ ನೀಡಿದ್ದು, ಅಭಿ-ವೃದ್ಧಿಯಲ್ಲೂ ಮುಂದಿದೆ. ಕ್ಷೇತ್ರದ ಜನರು, ಹಸ್ತಕ್ಕೆ ಮತ ನೀಡಿ ರಾಜ್ಯ ಸರ್ಕಾರವನ್ನು ಗೆಲ್ಲಿಸಲಿದ್ದಾರೆ’ ಎಂದು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಚುನಾವಣೆ ಬಗ್ಗೆ ‘ಪ್ರಜಾವಾಣಿ’ಗೆ ವಿಶೇಷ ಸಂದರ್ಶನ ನೀಡಿದ ಅವರು, ಹಲವು ಪ್ರಶ್ನೆಗಳಿಗೆ ಉತ್ತರಿಸಿದರು.

● **ಜನರ ಪ್ರತಿಕ್ರಿಯೆ ಹೇಗಿದೆ ?**
ಯಾಸೀರ ಅಹ್ಮದ್ ಖಾನ್ ಪಠಾಣ: ಬೊಮ್ಮಾಯಿ ಮನೆತನದ ಆಡಳಿತ ನೋಡಿ ಜನರು ಬೇಸತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ತಡವಾಗಿ ಟಿಕೆಟ್ ಸಿಕ್ಕಿದ್ದರಿಂದ, ಎಲ್ಲ ಕಡೆ ಹೋಗಲು ಆಗಿರಲಿಲ್ಲ. ಈ ಬಾರಿ ಪ್ರತಿ ಹಳ್ಳಿಗೂ ಭೇಟಿ ನೀಡುತ್ತಿದ್ದೇನೆ. ಜನರಿಂದ ಉತ್ತಮ ಪ್ರತಿಕ್ರಿಯೆ ಇದೆ.

● **ಅಲ್ಪಸಂಖ್ಯಾತ ಎಂಬ ಕಾರಣಕ್ಕೆ ಟಿಕೆಟ್ ಸಿಕ್ಕಿದೆಯೇ?**
ಉತ್ತರ: ಅಲ್ಪಸಂಖ್ಯಾತ ಎಂಬುದು ಸೇರಿ ಎಲ್ಲ ವಿಚಾರವನ್ನೂ ಪರಿಗಣಿಸಿ ಟಿಕೆಟ್ ನೀಡಿದ್ದಾರೆ. ಸಾರ್ವತ್ರಿಕ ಚುನಾವಣೆಯಲ್ಲಿ ಸೋತರೂ ಕ್ಷೇತ್ರದ ಜನರ ಜೊತೆಗಿನ ಒಡನಾಟ ಬಿಟ್ಟಿಲ್ಲ. ಹಳ್ಳಿ ಹಳ್ಳಿಯಲ್ಲೂ ಸಂಘಟನೆ ಮಾಡಿದ್ದೇನೆ. ಟಿಕೆಟ್ ಸಿಗಲು, ಜೊತೆಗಿದ್ದ ಆಕಾಂಕ್ಷಿಗಳು ನೆರವಾಗಿದ್ದಾರೆ.

● **ನಿಮ್ಮ ಪರ ಪ್ರಚಾರಕ್ಕೆ ಇಡೀ ಸರ್ಕಾರ ಬಂದಿದೆ? ಇದು ಮತ ಸೆಳೆಯಲು ಅನುಕೂಲವೇ ?**
ಉತ್ತರ: ಇಡೀ ಸರ್ಕಾರ, ನನ್ನ ಪರ ಪ್ರಚಾರಕ್ಕೆ ಬಂದಿರುವುದು ಶಕ್ತಿ ತಂದು ಕೊಟ್ಟಿದೆ. ಗ್ಯಾರಂಟಿ ಯೋಜನೆ, ಪಿಂಚಣಿ ಹಾಗೂ ಅಭಿವೃದ್ಧಿ ಕೆಲಸಗಳನ್ನು ಮಾಡಿರುವ ಕಾಂಗ್ರೆಸ್ ಸರ್ಕಾರದ ಋಣ ಜನರ ಮೇಲಿದೆ.

● **ನಾಲ್ಕು ಅವಧಿಯಿಂದ ಬಿಜೆಪಿ ಭದ್ರಕೋಟೆಯಾಗಿರುವ ಕ್ಷೇತ್ರವನ್ನು ಈ ಬಾರಿ ಕಾಂಗ್ರೆಸ್ ಭೇದಿಸುತ್ತಾ?**
ಉತ್ತರ: ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಭಾವ ಹೆಚ್ಚಾಗಿದ್ದು, ಕಳೆದ ಲೋಕಸಭೆ ಯಲ್ಲಿ ಸಾಬೀತಾಗಿದೆ. ಉಪಚುನಾವಣೆ-ಯಲ್ಲಿ ಶಿಗ್ಗಾವಿ ಕ್ಷೇತ್ರವು ನಿಶ್ಚಿತವಾಗಿ ‘ಕೈ’ ವಶವಾಗಲಿದೆ.

● **ಕ್ಷೇತ್ರದಲ್ಲಿ ಏನೆಲ್ಲ ಸಮಸ್ಯೆಗಳಿವೆ. ಮತದಾರರಿಗೆ ನೀವು ನೀಡುವ ಮೂರು ಭರವಸೆಗಳು ಏನು?**
ಉತ್ತರ: ನೀರಾವರಿ ಸಮಸ್ಯೆ ಹೆಚ್ಚಿದೆ. ಸೂಕ್ತ ಆಸ್ಪತ್ರೆಗಳಿಲ್ಲ. ಶಿಕ್ಷಣ ಅಭಿವೃದ್ಧಿಯಾಗಿಲ್ಲ. ಶಾಲೆ–ಕಾಲೇಜುಗಳಿಲ್ಲ. ಕೆಲ ಗ್ರಾಮಗಳಲ್ಲಿ ತಗಡಿನ ಶೆಡ್‌ನಲ್ಲಿ ಶಾಲೆಗಳಿವೆ. ನೀರಾವರಿಗೆ ಆದ್ಯತೆ ನೀಡುತ್ತೇನೆ. ಹೊಸ ಉದ್ಯೋಗ ಸೃಷ್ಟಿ, ಆರೋಗ್ಯ, ರಸ್ತೆ, ಶಿಕ್ಷಣ, ಮೂಲ ಸೌಕರ್ಯ ಅಭಿವೃದ್ಧಿ ಮಾಡುವೆ.

ಪ್ರಜಾವಾಣಿ ಸಂದರ್ಶನ
ಸಂತೋಷ ಜಿಗಳಿಕೊಪ್ಪ

ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅಭಿಮತ

‘ಶಾಶ್ವತ ಗ್ಯಾರಂಟಿಯೇ ಗುರಿ’



● **ಟಿಕೆಟ್ ವಿಷಯದಲ್ಲಿ ಬಿಜೆಪಿಯಲ್ಲಿ ಬಂಡಾಯ ಎದ್ದಿತ್ತು, ಅದು ಪ್ರಭಾವ ಬೀರುವುದೇ?**
ಉತ್ತರ: ಟಿಕೆಟ್ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷದಲ್ಲಿ ಯಾವುದೇ ರೀತಿಯ ಬಂಡಾಯ ಇಲ್ಲ. ಎಲ್ಲರೂ ನಮ್ಮವರು. ಎಲ್ಲರೂ ಬಸವರಾಜ ಬೊಮ್ಮಾಯಿ ಅವರ ಅಭಿಮಾನಿಗಳು. ಬಿಜೆಪಿ ಗೆಲ್ಲಿಸುವುದೇ ಎಲ್ಲರ ಗುರಿ. ಜವಾಬ್ದಾರಿಗಳನ್ನು ವಹಿಸಿಕೊಂಡು ಪ್ರತಿಯೊಬ್ಬರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ.

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಅಧಿಕಾರಕ್ಕಾಗಿ ಕಾಂಗ್ರೆಸ್ ಏನು ಬೇಕಾದರೂ ಮಾಡುತ್ತದೆ. ಅವರ ಗ್ಯಾರಂಟಿ ಯೋಜನೆಗಳು ಕೇವಲ ತಾತ್ಕಾಲಿಕ. ಕ್ಷೇತ್ರದ ಜನರಿಗೆ ಬಿಜೆಪಿ ಕೊಟ್ಟಿರುವ ಕುಡಿಯುವ ನೀರು, ಉದ್ಯೋಗ, ವಾಸಕ್ಕೆ ಜಾಗ ಸೇರಿ ಅಭಿವೃದ್ಧಿ ಕೆಲಸಗಳು ಶಾಶ್ವತ ಗ್ಯಾರಂಟಿಗಳು. ಮುಂದಿನ ದಿನಗಳಲ್ಲೂ ಜನರಿಗೆ ಶಾಶ್ವತ ಗ್ಯಾರಂಟಿ ನೀಡಲು ಕೆಲಸ ಮಾಡುವೆ’ ಎಂದು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಭರತ್ ಬೊಮ್ಮಾಯಿ ಭರವಸೆ ನೀಡಿದರು.

ಕ್ಷೇತ್ರದ ಚುನಾವಣೆ ಬಗ್ಗೆ ‘ಪ್ರಜಾವಾಣಿ’ಗೆ ವಿಶೇಷ ಸಂದರ್ಶನ ನೀಡಿದ ಅವರು, ಹಲವು ವಿಚಾರಗಳನ್ನು ಪ್ರಸ್ತಾಪಿಸಿದರು.

● **ಮತದಾರರ ಪ್ರತಿಕ್ರಿಯೆ ಹೇಗಿದೆ?**
ಭರತ್ ಬೊಮ್ಮಾಯಿ: ಹಳ್ಳಿಹಳ್ಳಿಗೆ ಭೇಟಿ ನೀಡುತ್ತಿದ್ದೇನೆ. ಜನರಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಯುವಕರು, ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿಗಾಗಿ ಪ್ರಚಾರ ಮಾಡುತ್ತಿದ್ದಾರೆ. ಎಲ್ಲ ಸಮುದಾಯದವರು ಬೆಂಬಲ ಸೂಚಿಸುತ್ತಿದ್ದಾರೆ.

● **ನೀವು ಯಶಸ್ವಿ ಉದ್ಯಮಿ. ದಿಢೀರ್ ರಾಜಕೀಯಕ್ಕೆ ಬರಲು ಕಾರಣವೇನು? ತಂದೆಯ ಮುಖ ನೋಡಿ ಟಿಕೆಟ್ ಸಿಕ್ಕಿದೆಯೇ?**
ಉತ್ತರ: ನಾನು ಟಿಕೆಟ್ ಆಕಾಂಕ್ಷಿ ಆಗಿರಲಿಲ್ಲ. ಈ ಬಾರಿ ಟಿಕೆಟ್ ಬೇಡವೆಂದು ತಂದೆ ಹೇಳಿದ್ದರು. ಪಕ್ಷದ ವರಿಷ್ಠರು ಕ್ಷೇತ್ರದಲ್ಲಿ ಸಮೀಕ್ಷೆ ಮಾಡಿದ್ದರು. ಬಹುತೇಕರು ನನ್ನ ಹೆಸರು ಹೇಳಿದ್ದರಿಂದ, ಹೈಕಮಾಂಡ್ ನನಗೆ ಟಿಕೆಟ್ ನೀಡಿದೆ. ನಾನು ಸಾಮಾನ್ಯ ಕಾರ್ಯಕರ್ತ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿ ಚುನಾವಣೆಗೆ ನಿಂತಿದ್ದೇನೆ

● **ಪ್ರತಿಸ್ಪರ್ಧಿ ಯಾರು ? ನಿಮ್ಮನ್ನು ಸೋಲಿಸಲು ರಾಜ್ಯ ಸರ್ಕಾರವೇ ಕ್ಷೇತ್ರಕ್ಕೆ ಬಂದಿದೆಯಲ್ಲವೇ ?**
ಉತ್ತರ: ಬಿಜೆಪಿ– ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದೆ. ಎಲ್ಲ ಶಾಸಕರು, ಸಚಿವರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬರುವುದು ಸಹಜ.

● **ಜನರಿಗೆ ನೀವು ನೀಡುವ ಪ್ರಮುಖ ಮೂರು ಆಶ್ವಾಸನೆಗಳು ಏನು?**
ಉತ್ತರ: ತಂದೆಯವರು, ಕ್ಷೇತ್ರದಲ್ಲಿ ‘ಜಲಜೀವನ್ ಮಿಷನ್’ ಯೋಜನೆ ಮೂಲಕ ಮನೆ ಮನೆಗೆ ನೀರು ಕೊಟ್ಟಿದ್ದಾರೆ. ತಲಾ ₹ 5 ಲಕ್ಷ ಮೊತ್ತದಲ್ಲಿ 15,000 ಮನೆ ಕಟ್ಟಿಸಿದ್ದಾರೆ. ದೂರದೃಷ್ಟಿಯಿಂದ ಶಾಶ್ವತ ಗ್ಯಾರಂಟಿ-ಗಳನ್ನು ನೀಡಿದ್ದಾರೆ. ಅವರ ಅಭಿವೃದ್ಧಿ ಕೆಲಸಗಳನ್ನು ಮುಂದುವರಿಸುತ್ತೇನೆ. ಶಿಕ್ಷಣ, ಆರೋಗ್ಯ, ರೈತರು, ರೈತರ ಆದಾಯ ವೃದ್ಧಿ, ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಗೆ ಒತ್ತು ನೀಡುತ್ತೇನೆ.

● **ಅಲ್ಪಸಂಖ್ಯಾತ ಸಮುದಾಯದವರ ಜೊತೆ ಬಸವರಾಜ ಬೊಮ್ಮಾಯಿ ಉತ್ತಮ ಒಡನಾಟ ಇಟ್ಟುಕೊಂಡಿದ್ದಾರೆ. ಅವರೊಂದಿಗೆ ನಿಮ್ಮ ಒಡನಾಟ ಹೇಗಿರುತ್ತದೆ ?**
ಉತ್ತರ: ತಂದೆ (ಬಸವರಾಜ ಬೊಮ್ಮಾಯಿ) ಹಾಗೂ ತಾತ (ಎಸ್. ಆರ್. ಬೊಮ್ಮಾಯಿ), ಎಲ್ಲ ಸಮುದಾಯಗಳ ಸಮಗ್ರ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಿದ್ದರು. ಅವರ ಮಾತಿನಂತೆ, ಭಾವೈಕ್ಯದ ನಾಡಾದ ಶಿಗ್ಗಾವಿ–ಸವಣೂರು ಕ್ಷೇತ್ರದಲ್ಲಿ ಸರ್ವಜನಾಂಗದ ಅಭಿವೃದ್ಧಿಗೆ ಶ್ರಮಿಸುವೆ.

ಮೂರೂವರೆ ವರ್ಷ ‘ಸಿದ್ದರಾಮಯ್ಯ ಕಾಂಗ್ರೆಸ್ಸು’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ರಾಜ್ಯದಲ್ಲಿ ಮೂರೂವರೆ ವರ್ಷ ಸಿದ್ದರಾಮಯ್ಯ ಕಾಂಗ್ರೆಸ್ ಅಧಿಕಾರದಲ್ಲಿ ಇರಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಈ ಮೂಲಕ ಸರ್ಕಾರದ ಅವಧಿ ಪೂರ್ಣಗೊಳ್ಳುವವರೆಗೆ ತಾವೇ ಅಧಿಕಾರದಲ್ಲಿ ಮುಂದುವರಿಯುವುದಾಗಿ ಅವರು ಸ್ಪಷ್ಟಪಡಿಸಿದರು.

ಸಂಡೂರಿನಲ್ಲಿ ಗುರುವಾರ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡುತ್ತ, ‘ಬಿಜೆಪಿಯವರು ನುಡಿದಂತೆ ನಡೆದರಾ? ಮೂರೂವರೆ ವರ್ಷ ಯಾರು ಅಧಿಕಾರದಲ್ಲಿ ಇರಲಿದ್ದಾರೆ? ನೀವು ಯಾರಿಗೆ ಮತ ನೀಡಬೇಕು’ ಎಂದು ಜನರನ್ನು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಜನ, ‘ಕಾಂಗ್ರೆಸ್ಸು’ ಎಂದರು. ಆಗ ಮಾತು ಮುಂದುವರಿಸುತ್ತ ತಮ್ಮತ್ತ ಕೈ ಮಾಡಿಕೊಂಡು ಸಿದ್ದರಾಮಯ್ಯ ಜೋರಾಗಿ, ‘ಸಿದ್ದರಾಮಯ್ಯ ಕಾಂಗ್ರೆಸ್ಸು’ ಎಂದು ಹೇಳಿದರು.

‘ಐದು ವರ್ಷ ತುಕಾರಾಂ ಸಂಸದರಾಗಿ ಇರಲಿದ್ದಾರೆ. ಅನ್ನಪೂರ್ಣ ಗೆದ್ದರೆ, ಮೂರುವರೆ ವರ್ಷ ಶಾಸಕಿಯಾಗಿ ಇಲಿದ್ದಾರೆ’ ಎಂದು ಹೇಳಿದರು.

ಕಾಂಗ್ರೆಸ್ ಗೆಲುವು ಕಠಿಣ: ಘೋರ್ಪಡೆ

ಪ್ರಜಾವಾಣಿ ವಾರ್ತೆ

ಸಂಡೂರು(ಬಳ್ಳಾರಿ): ‘ಮೂಲ ಕಾಂಗ್ರೆಸ್‌ನವರನ್ನು ಸಂತೋಷ್ ಲಾಡ್ ಮತ್ತು ತುಕಾರಾಂ ಸಂಪೂರ್ಣ ಕಡೆಗಣಿಸಿದ್ದು, ಇದು ಉಪಚುನಾವಣೆ ಮೇಲೆ ಪ್ರಭಾವ ಬೀರಲಿದೆ. ಗೆಲುವು ಕಠಿಣವಾಗಲಿದೆ’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ರಾಜವಂಶಸ್ಥ ವೆಂಕಟರಾವ್ ಘೋರ್ಪಡೆ ಎಚ್ಚರಿಕೆ ನೀಡಿದ್ದಾರೆ.

ಗುರುವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಕೆಪಿಸಿಸಿ ಅಧ್ಯಕ್ಷರ ಸೂಚನೆ ಮೇರೆಗೆ ಚುನಾವಣಾ ಪ್ರಕ್ರಿಯೆ ಭಾಗವಾಗಿ ಹಲವು ಗ್ರಾಮ ಪಂಚಾಯಿತಿಗಳ ಹಳೇ ಕಾಂಗ್ರೆಸ್‌ನವರನ್ನು ಸಂಪರ್ಕಿಸಿದ್ದೇನೆ. ತಮ್ಮನ್ನು ಕಡೆಗಣಿಸಿದ್ದಾರೆ ಎಂಬ ಅಳಲನ್ನು ಅವರು ತೋಡಿಕೊಂಡಿದ್ದಾರೆ. ಈಚೆಗೆ ಸಂಡೂರಿನಲ್ಲಿ ಚುನಾವಣಾ ಪ್ರಚಾರ ನಡೆಸಿದ್ದು, ಸ್ಥಳೀಯರನ್ನು ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ-ಯಾದ ನನ್ನನ್ನೇ ಆಹ್ವಾನಿಸಿಲ್ಲ’ ಎಂದು ತಿಳಿಸಿದ್ದಾರೆ.



ವೆಂಕಟರಾವ್ ಘೋರ್ಪಡೆ

‘ಸಂಡೂರು ಕ್ಷೇತ್ರದ ಮೂಲ ಕಾಂಗ್ರೆಸ್‌ನವರು ಮತ್ತು ಜೆಡಿಎಸ್ ಮುಖಂಡರು ಬಿಜೆಪಿಯತ್ತ ಮುಖ ಮಾಡಿದ್ದಾರೆ. 2008ರಲ್ಲಿ ತುಕಾರಾಂಗೆ ಟಿಕೆಟ್ ನೀಡುವಾಗ ಸೋನಿಯಾ ಗಾಂಧಿಯವರೇ ವೆಂಕಟ ರಾವ್ ಘೋರ್ಪಡೆ ನಿರ್ಧಾರವೇ ಅಂತಿಮ ಎಂದು ಸಂತೋಷ್ ಲಾಡ್ ಅವರಿಗೆ ಹೇಳಿದ್ದರು. ಹಳೆಯ ಕಾಂಗ್ರೆಸ್ ಮುಖಂಡರಿಗೆ ಟಿಕೆಟ್ ನೀಡದೇ ತುಕಾರಾಂಗೆ ಟಿಕೆಟ್ ನೀಡಿದ್ದನ್ನು ಅವರೆಲ್ಲಾ ಮರೆತಿದ್ದಾರೆ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಮೇಕೆದಾಟು ಯೋಜನೆ: ಒಪ್ಪಿಗೆ ಕೊಡಿಸುವೆ’

ಜೆಡಿಎಸ್ ಅಭ್ಯರ್ಥಿ ನಿಖಿಲ್ ಪರ ಪ್ರಚಾರ ಎಚ್‌.ಡಿ.ದೇವೇಗೌಡ ಮತಯಾಚನೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ನನ್ನ ಕೊನೆ ಉಸಿರು ಎಳೆಯುವ ಮುನ್ನ ಮೇಕೆದಾಟು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಒಪ್ಪಿಗೆ ಕೊಡಿಸುತ್ತೇನೆ’ ಎಂದು ಮಾಜಿ ಪ್ರಧಾನಿ ಹೆಚ್. ಡಿ.ದೇವೇಗೌಡ ಘೋಷಣೆ ಮಾಡಿದರು.

ತಾಲ್ಲೂಕಿನ ಹೊಡಿಕೆಹೊಸ-ಹಳ್ಳಿಯಲ್ಲಿ ಗುರುವಾರ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಮತಯಾಚಿಸಿ ಮಾತನಾಡಿದರು.

‘ಮೇಕೆದಾಟು ಯೋಜನೆ ಆಗುತ್ತೆ ಎಂದರೆ ಅದು ಮೋದಿ ಅವರಿಂದ ಮಾತ್ರ ಸಾಧ್ಯ. ಇದರಲ್ಲಿ ಎರಡು ಮಾತಿಲ್ಲ. ಆದರೆ, ತಮಿಳುನಾಡಿನವರು ನಮ್ಮ ಕುತ್ತಿಗೆ ಹಿಡಿದಿದ್ದಾರೆ. ನಾನು ಅವರಿಗೆ ಮನವಿ ಮಾಡುತ್ತೇನೆ. ವಾಸ್ತವ ಸ್ಥಿತಿ ಮನವರಿಕೆ ಮಾಡಿ ಕೊಡುತ್ತೇನೆ. ಈಗಾಗಲೇ ಹಲವು ಸಲ ಅವರು ನನ್ನ ಮನವಿ ಆಲಿಸಿದ್ದಾರೆ’ ಎಂದರು.



ಚನ್ನಪಟ್ಟಣ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಪರ ಗುರುವಾರ ಪ್ರಚಾರ ನಡೆಸಿದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್. ಡಿ.ದೇವೇಗೌಡ ಅವರು ಕಾರ್ಯಕರ್ತರಿಗೆ ನಮಸ್ಕರಿಸಿದರು

ಜೆಡಿಎಸ್ ಮತ್ತು ಬಿಜೆಪಿ ನಾಯಕರು ಪ್ರಚಾರ ಸಭೆಯುದ್ದಕ್ಕೂ ರಾಜ್ಯ ಸರ್ಕಾರ, ಯೋಗೇಶ್ವರ್ ಹಾಗೂ ಡಿ.ಕೆ. ಸಹೋದರರನ್ನು ತರಾಟೆಗೆ ತೆಗೆದುಕೊಂಡರು. ಪ್ರತಿಯಾಗಿ ಕಾಂಗ್ರೆಸ್‌ನವರು ಸಹ ಪಟ್ಟಣ ಪ್ರದೇಶದಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಜೆಡಿಎಸ್ ಹಣದ ಹೊಳೆ ಕೆಲಸ ಮಾಡಲ್ಲ: ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರ ಪುತ್ರ ನಿಖಿಲ್ ಮಂಡ್ಯ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆಗ ಜಿಲ್ಲೆಯಲ್ಲಿ ಅವರ ಪಕ್ಷದ 7 ಶಾಸಕರಿದ್ದರು. ಆಗಲೂ ಅವರು ಹಣದ ಹೊಳೆ ಹರಿಸಿ, ಅಧಿಕಾರದ ಪ್ರಭಾವ ಬೀರಿದರೂ ಮಗನನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗಲಿಲ್ಲ’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಚಾರ ಸಭೆಯಲ್ಲಿ ವ್ಯಂಗ್ಯವಾಡಿದರು.

‘ಸರ್ಕಾರ ಕಿತ್ತೊಗೆಯುವುದೇ ಎಚ್‌ಡಿಕೆ ಗುರಿ: ‘ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಅಭಿವೃದ್ಧಿ ಬದಲು ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಕಿತ್ತೊಗೆಯುವುದೇ ಗುರಿಯಾಗಿದೆ’ ಎಂದು ಸಚಿವ ಕೃಷ್ಣ ಬೈರೇಗೌಡ ವಾಗ್ದಾಳಿ ನಡೆಸಿದರು.

ಕೇಂದ್ರ ಸಚಿವರಾಗಿರುವ ಎಚ್. ಡಿ. ಕುಮಾರಸ್ವಾಮಿ ಅವರು ಒಂದೇ ದಿನದಲ್ಲಿ ಮೇಕೆದಾಟು ಅಣೆಕಟ್ಟೆ ಯೋಜನೆಗೆ ಅನುಮತಿ ಕೊಡಿಸುವೆ ಎಂದಿದ್ದರು. ಕೇಂದ್ರ ಸರ್ಕಾರ ಅಸ್ತಿತ್ವಕ್ಕೆ ಬಂದು ಆರು ತಿಂಗಳಾದರೂ ಯಾಕೆ ಇನ್ನೂ ಅನುಮತಿ ಕೊಡಿಸಿಲ್ಲ’ ಎಂದು ಪ್ರಶ್ನಿಸಿದರು.

‘ಸುಳ್ಳು ಹೇಳಿದ ಮೋದಿ ಕ್ಷಮೆ ಯಾಚಿಸಲಿ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕದ ಗ್ಯಾರಂಟಿ ಯೋಜನೆಗಳ ಕುರಿತು ಮಹಾರಾಷ್ಟ್ರದ ಬಿಜೆಪಿ ಘಟಕ ನೀಡಿದ ‘ವಾದಾ ಕಿಯಾ, ದೋಖಾ ದಿಯಾ (ಮಾತು ಕೊಟ್ಟರು, ಮೋಸ ಮಾಡಿದರು) ಎಂಬ ಜಾಹೀರಾತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

‘ನಾವು ಮಾತು ಕೊಟ್ಟಿದ್ದೇವೆ, ಈಡೇರಿಸಿದ್ದೇವೆ (ವಾದಾ ದಿಯಾ ಪೂರಾ ಕಿಯಾ)’ ಎಂದ ಅವರು,‘ಸುಳ್ಳು ಹೇಳಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಕ್ಷಮೆ ಯಾಚಿಸಬೇಕು’ ಎಂದು ಆಗ್ರಹಿಸಿದರು.

ಸಂಡೂರು ಕ್ಷೇತ್ರದ ಹಲವೆಡೆ ದಿನವಿಡೀ ಪ್ರಚಾರ ಸಭೆ ನಡೆಸಿದ ಸಿದ್ದರಾಮಯ್ಯ ಅವರು ಗ್ಯಾರಂಟಿ ಕಾರ್ಯಕ್ರಮಗಳನ್ನು ಸಮರ್ಥಿಸಿದರು.

‘ಮಹಾರಾಷ್ಟ್ರ ಬಿಜೆಪಿ ಸುಳ್ಳು ಜಾಹೀರಾತು ನೀಡಿದೆ. ಕರ್ನಾಟಕದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಭರವಸೆ ನೀಡಲಾಗಿತ್ತು. ಭರವಸೆ ಈಡೇರಿಸದೇ, ಯೋಜನೆಯನ್ನೇ ಇನ್ನೂ ಆರಂಭಿಸದೆ ವಂಚಿಸಿದೆ ಎಂಬರ್ಥದ ಪರಮ ಸುಳ್ಳಿನ ಜಾಹಿರಾತುಗಳನ್ನು ಪುಟಗಟ್ಟಲೇ ನೀಡಲಾಗಿದೆ’ ಎಂದು ಆರೋಪಿಸಿದರು.

‘ಪ್ರಧಾನಿ ನರೇಂದ್ರ ಮೋದಿಯವರೇ, ಇದು ನಿಮ್ಮ ಸುಳ್ಳಿನಿಂದಲೇ ಪ್ರೇರಣೆ ಪಡೆದು ಹೇಳಿರುವ ಸುಳ್ಳು. ದಯವಿಟ್ಟು ನಮ್ಮ ಗ್ಯಾರಂಟಿ ಯೋಜನೆ ಬಗ್ಗೆ ಮಹಾರಾಷ್ಟ್ರ ಬಿಜೆಪಿ ಘಟಕ ಹೇಳಿರುವ ಸುಳ್ಳಿಗೆ ದೇಶದ ಜನರ ಕ್ಷಮೆ ಯಾಚಿಸಿ. ಸತ್ಯಸಂಗತಿಯನ್ನು ಸಾರ್ವಜನಿಕರಿಗೆ ತಿಳಿಸಬೇಕು’ ಎಂದು ಅವರು ಆಗ್ರಹಿಸಿದರು.



ಸಂಡೂರು ತಾಲ್ಲೂಕಿನ ಬೊಮ್ಮಘಟ್ಟದಲ್ಲಿ ಗುರುವಾರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಈ ವೇಳೆ ಕಾಂಗ್ರೆಸ್ ಅಭ್ಯರ್ಥಿ ಇ. ಅನ್ನಪೂರ್ಣ, ಸಂಸದ ಇ.ತುಕಾರಾಂ ಇದ್ದರು

ಮೋದಿ ಹೇಳಿದ್ದೇನು ? ಮಾಡಿದ್ದೇನು?: ‘ವಿದೇಶದಲ್ಲಿರುವ ಕಪ್ಪುಹಣ ತಂದು ಎಲ್ಲರ ಖಾತೆಗೆ ₹15 ಲಕ್ಷ ಕೊಡುವುದಾಗಿ ಮೋದಿ ಹೇಳಿದ್ದರು, ಆದರೆ ಕೊಡಲಿಲ್ಲ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು, ಮಾಡಲಿಲ್ಲ. ಎಲ್ರೀ ಸ್ವಾಮಿ ನಿಮ್ಮ ಅಚ್ಚೆ ದಿನ್? ರೈತರ ಆದಾಯ ದುಪ್ಪಟ್ಟು ಮಾಡುವುದಾಗಿ ಹೇಳಿದ್ದರು, ಮಾಡಿದರಾ? ಮೋದಿ ಪ್ರಧಾನಿ ಆಗುವ ಮುನ್ನ ದೇಶದ ಸಾಲ ₹54 ಲಕ್ಷ ಕೋಟಿ ಇತ್ತು . ಈಗ ₹185 ಲಕ್ಷ ಕೋಟಿಗೆ ಏರಿದೆ. ಇದೇನಾ ಅಚ್ಚೇ ದಿನ’ ಎಂದು ಪ್ರಶ್ನೆ ಮಾಡಿದರು.

ನನ್ನ ಮಗಳು: ಅನ್ನಪೂರ್ಣಮ್ಮ ನನ್ನ ಆತ್ಮೀಯ ಸ್ನೇಹಿತ ರುದ್ರಪ್ಪ ಅವರ ಮಗಳು. ಅವರು ಮೈಸೂರಿನಲ್ಲಿ ವ್ಯಾಸಂಗ ಮಾಡಿದ್ದರು. ಹೀಗಾಗಿ ನನಗೆ ಪರಿಚಿತರು. ಅದೇ ಕಾರಣಕ್ಕೆ ಅನ್ನಪೂರ್ಣ ಅವರನ್ನು ತುಕಾರಾಂ ‘ನಿಮ್ಮ ಮಗಳು’ ಎಂದು ಹೇಳುತ್ತಿರುತ್ತಾರೆ. ಆಕೆಗೆ ಮತ ನೀಡಿ ಗೆಲ್ಲಿಸಿದರೆ, ನನ್ನನ್ನು ಗೆಲ್ಲಿಸಿದಂತೆ ಎಂದು ಹೇಳಿದರು.

ಜನರಿಗೆ ನೆರವಾಗದ ಬಿಜೆಪಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಸಾಮಾನ್ಯ ಜನರ ಬದುಕಿಗೆ ಬಿಜೆಪಿ ಯಾವುದೇ ಸಹಾಯ ಮಾಡಿಲ್ಲ. ಮುಖ್ಯಮಂತ್ರಿ-ಯಾಗಿದ್ದ ಬಸವರಾಜ ಬೊಮ್ಮಾಯಿ, ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ ಎಂದು ಹೇಳಿಕೊಳ್ಳಲು ಒಂದೇ ಒಂದು ಸಾಕ್ಷಿ ಸಹ ಇಲ್ಲ. ಇದ್ದರೆ ತಿಳಿಸಲಿ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸವಾಲು ಹಾಕಿದರು.

ಕ್ಷೇತ್ರದಲ್ಲಿರುವ ದುಂಡಶಿ ಗ್ರಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಬಾರಿ ಯಾಸೀರ ಅಹ್ಮದ್ ಖಾನ್ ಪಠಾಣ ಅವರನ್ನು ಗೆಲ್ಲಿಸಿ ವಿಧಾನಸೌಧಕ್ಕೆ ಕಳುಹಿಸಿ. ಇಡೀ ಸರ್ಕಾರವೇ ನಿಮ್ಮ ಜೊತೆಗಿರುತ್ತದೆ’ ಎಂದರು.

‘ಮಹದಾಯಿ ಯೋಜನೆಗೆ ಅನುಮತಿ ಸಿಕ್ಕಿತೆಂದು ಬೊಮ್ಮಾಯಿ ಸಂಭ್ರಮಿಸಿದ್ದರು. ಆದರೆ, ಜಾರಿಗೆ ತರಲಿಲ್ಲ. ನಮ್ಮ ಸರ್ಕಾರ, ಟೆಂಡರ್ ಕರೆದಿದೆ. ಈಗ, ಕೇಂದ್ರ ಪರಿಸರ ಇಲಾಖೆಯವರು ಅನುಮತಿ ಕೊಡುತ್ತಿಲ್ಲ. ದುಂಡಶಿಯಲ್ಲಿ ಉಗಮವಾಗುವ ಬೆಣ್ಣೆ ಹಳ್ಳದ ಅಭಿವೃದ್ಧಿಗೆ ₹ 200 ಕೋಟಿ ಕೊಟ್ಟಿದ್ದೇವೆ. ಮುಖ್ಯಮಂತ್ರಿಯಾಗಿದ್ದ ಬೊಮ್ಮಾಯಿ ಕೊಟ್ಟಿದ್ದರಾ’ ಎಂದು ಪ್ರಶ್ನಿಸಿದರು.


ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಭರವಸೆ

‘ಮಹಾರಾಷ್ಟ್ರದ ಎಲ್ಲ ಜಿಲ್ಲೆಗಳಲ್ಲಿ ಶಿವಾಜಿ ದೇಗುಲ’

ಪ್ರಜಾವಾಣಿ ವಾರ್ತೆ

ಮುಂಬೈ: ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ಮಹಾರಾಷ್ಟ್ರದ ಎಲ್ಲ ಜಿಲ್ಲೆಗಳಲ್ಲಿ ಮರಾಠ ಯೋಧ ಛತ್ರಪತಿ ಶಿವಾಜಿ ಮಹಾರಾಜರ ದೇವಾಲಯಗಳನ್ನು ನಿರ್ಮಿಸುವುದಾಗಿ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಭರವಸೆ ನೀಡಿದ್ದಾರೆ. ಇದಕ್ಕೆ, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣ ತೀವ್ರ ಪ್ರತಿಕ್ರಿಯೆ ನೀಡಿದೆ.

ಶಿವಾಜಿ ಪಾರ್ಕ್‌ನಲ್ಲಿ ನಡೆದ ದಸರಾ ರ‍್ಯಾಲಿಯಲ್ಲಿ ಮಾತನಾಡಿದ ಉದ್ಧವ್ ಅವರು, ಮಹಾರಾಷ್ಟ್ರದ ಪ್ರತಿ ಜಿಲ್ಲೆಗಳಲ್ಲಿ ಮತ್ತು ದೇಶದ ಪ್ರತಿ ರಾಜ್ಯಗಳಲ್ಲಿ ಶಿವಾಜಿ ಮಹಾರಾಜರ ದೇವಾಲಯಗಳನ್ನು ನಿರ್ಮಿಸುತ್ತೇವೆ ಎಂದು ಹೇಳಿದರು. ಈ ದೇವಾಲಯಗಳು ಶಿವಾಜಿ ಅವರ ಜೀವನ ಚರಿತ್ರೆಯನ್ನು ಒಳಗೊಂಡಿರುತ್ತದೆ. ಅದರಿಂದ ಜನರು ಸ್ಫೂರ್ತಿ ಪಡೆಯಬಹುದು ಎಂದು ತಿಳಿಸಿದರು. ಠಾಕ್ರೆ ಅವರು ತಮ್ಮ ಚುನಾವಣಾ ರ‍್ಯಾಲಿಗಳಲ್ಲಿ ಈ ಕುರಿತು ಪದೇ ಪದೇ ಪ್ರಸ್ತಾಪಿಸುತ್ತಿದ್ದಾರೆ.



ಪ್ರಣಾಳಿಕೆ ಬಿಡುಗಡೆಗೊಳಿಸಿದ ಉದ್ಧವ್ ಠಾಕ್ರೆ

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಮಗ, ಸಂಸದ ಡಾ. ಶ್ರೀಕಾಂತ್ ಶಿಂದೆ ಅವರು ಠಾಕ್ರೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಶಿಂದೆ ಬಣದ ವಾಗ್ದಾಳಿ: ‘ಹಿಂದೂ ಧರ್ಮ ಮತ್ತು ಬಾಳಾಸಾಹೇಬ್ ಠಾಕ್ರೆ ಅವರ ಆದರ್ಶಗಳಿಂದ ದೂರವಿದ್ದವರು ಈಗ ಛತ್ರಪತಿ ಶಿವಾಜಿ ಅವರಿಗೆ ದೇವಾಲಯಗಳನ್ನು ನಿರ್ಮಿಸಲು ಮುಂದಾಗಿದ್ದಾರೆ’ ಎಂದು ಸಂಸದ ಡಾ. ಶ್ರೀಕಾಂತ್ ಶಿಂದೆ ಟೀಕಿಸಿದ್ದಾರೆ.

ಶಿವಸೇನಾ (ಯಬಿಟ) ಪ್ರಣಾಳಿಕೆಯ ಅಂಶಗಳು

ಮುಂಬೈ (ಪಿಟಿಐ): ವಿದ್ಯಾರ್ಥಿನಿಯರಿಗೆ ಸಿಗುತ್ತಿರುವ ಉಚಿತ ಶಿಕ್ಷಣ ಎಲ್ಲ ವಿದ್ಯಾರ್ಥಿಗಳಿಗೂ ವಿಸ್ತರಣೆ, ಅಗತ್ಯ ವಸ್ತುಗಳ ಬೆಲೆ ಸ್ಥಿರೀಕರಣ, ಧಾರಾವಿ ಪುನರಾಭಿವೃದ್ಧಿ ಯೋಜನೆ ರದ್ದು ಸೇರಿದಂತೆ ಹಲವು ಭರವಸೆಗಳನ್ನು ಒಳಗೊಂಡ ಚುನಾವಣಾ ಪ್ರಣಾಳಿಕೆಯನ್ನು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಗುರುವಾರ ಬಿಡುಗಡೆ ಮಾಡಿದೆ.

ಠಾಕ್ರೆ ಅವರು ಮುಂಬೈನ ತಮ್ಮ ನಿವಾಸ ‘ಮಾತೋಶ್ರೀ’ಯಲ್ಲಿ ಪ್ರಣಾಳಿಕೆ-ಯನ್ನು ಬಿಡುಗಡೆ ಮಾಡಿದರು. ವಿಧಾನಸಭಾ ಚುನಾವಣೆಯಲ್ಲಿ ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿ ನೀಡಿರುವ ಬಹುತೇಕ ಭರವಸೆಗಳನ್ನೂ ಪ್ರಣಾಳಿಕೆ ಒಳಗೊಂಡಿದೆ.

ಮುಖ್ಯಾಂಶಗಳು:

- ನಗರ, ಅರೆ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಕೈಗೆಟುವ ದರಕ್ಕೆ ಮನೆಗಳ ನಿರ್ಮಾಣ
- ಹಳೆ ಪಿಂಚಣಿ ಯೋಜನೆ ಜಾರಿ ಮತ್ತು ಮೀಸಲಾತಿಗಿರುವ ಶೇ 50ರ ಮಿತಿ ತೆರವು– ಪ್ರತಿ ಜಿಲ್ಲೆಯಲ್ಲಿ ಮೂರು ತಿಂಗಳಿಗೊಮ್ಮೆ ಉದ್ಯೋಗ ಮೇಳ
- ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ
- ರಾಜ್ಯ ಪೊಲೀಸ್ ಪಡೆಗೆ 18,000 ಮಹಿಳೆಯರ ನೇಮಕ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸವಾಲು

ದಮ್ಮಿದ್ದರೆ ವಕ್ಫ್ ಮಂಡಳಿ ರದ್ದುಪಡಿಸಿ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಸರ್ಕಾರಿ ಶಾಲೆ, ದೇಗುಲ ಮತ್ತು ರೈತರ ಜಮೀನುಗಳ ಪಹಣಿಗಳಲ್ಲಿ ನಮೂದಾಗಿರುವ ವಕ್ಫ್ ಹೆಸರು ತೆಗೆದರೆ ಸಾಲದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಾಕತ್ತಿದ್ದರೆ ವಕ್ಫ್ ಮಂಡಳಿಯನ್ನು ರದ್ದುಪಡಿಸಲಿ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸವಾಲು ಹಾಕಿದರು.

ತಾಲ್ಲೂಕಿನ ಮಹದೇವಪುರದ ಚಿಕ್ಕಮ್ಮ- ದೊಡ್ಡಮ್ಮ ದೇವಾಲಯ ಮತ್ತು ಚಂದಗಾಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗುರುವಾರ ಭೇಟಿ ನೀಡಿದ್ದ ವೇಳೆ ಅವರು ಮಾತನಾಡಿದರು.

'ಮುಜರಾಯಿ ಆಸ್ತಿ ಸರ್ಕಾರದ್ದು ಎಂದಾದರೆ ವಕ್ಫ್ ಮಂಡಳಿ ಆಸ್ತಿಯೂ ಏಕೆ ಸರ್ಕಾರದ್ದಾಗಬಾರದು' ಎಂದು ಪ್ರಶ್ನಿಸಿದರು.

'ವಕ್ಫ್ ಬೋರ್ಡ್ ರಾಜ್ಯವನ್ನು ಕ್ಯಾನ್ಸರ್ ರೀತಿ ಸರ್ವನಾಶ ಮಾಡಲು ಹೊರಟಿದೆ. ಇದನ್ನು ಸರ್ಜರಿ ಮಾಡದಿದ್ದರೆ ರೈತರ ಜಮೀನು, ದೇವಸ್ಥಾನ, ಶಾಲೆಗಳ ಜಾಗ ಉಳಿಯುವುದಿಲ್ಲ. ಸ್ವಾತಂತ್ರ್ಯಕ್ಕಾಗಿ ನಡೆದಂತೆ ದೊಡ್ಡ ಚಳವಳಿ ಮಾಡಬೇಕಿದೆ' ಎಂದರು.

'ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಮಾಡಿದ ತಪ್ಪಿನಿಂದ ಸಾವಿರಾರು ಎಕರೆ ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ವಕ್ಫ್ ಮಂಡಳಿಗೆ ಸೇರಿದೆ. ಕಾಂಗ್ರೆಸ್‌ನ ದೊಡ್ಡ ನಾಯಕರೇ ವಕ್ಫ್ ಆಸ್ತಿ ಕಬಳಿಸಿದ್ದಾರೆ. ಅಂಥವರನ್ನು ಜೈಲಿಗೆ ಕಳಿಸಬೇಕು. ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಟಿಪ್ಪು ಮಿದುಳು ಹೊಂದಿರುವ ಸಿದ್ದರಾಮಯ್ಯ ಮುಸ್ಲಿಮರ ಚಾಂಪಿಯನ್ ಆಗಲು ಹೊರಟಿದ್ದಾರೆ. ಅವರ ತುಷ್ಟೀಕರಣ ನೀತಿಯಿಂದ ಹಿಂದೂಗಳು ತೊಂದರೆ ಅನುಭವಿಸುತ್ತಿದ್ದಾರೆ. ಸಚಿವ ಜಮೀರ್ ಅಹಮದ್‌ಖಾನ್ ಮಾಡಬಾರದ್ದನ್ನು ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ಮೈಸೂರು-ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, 'ವಕ್ಫ್ ಕಾಯ್ದೆ ತಿದ್ದಪಡಿ ಆಗಬೇಕಾದರೆ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಗಳನ್ನು ವಕ್ಫ್ ಮಂಡಳಿಗೆ ಸೇರಿಸಿರುವ ಕ್ರಮದ ವಿರುದ್ಧ ಪ್ರಧಾನಿಗೆ ಪತ್ರ ಬರೆಯಬೇಕು. ವಾಟ್ಸ್‌ಆ್ಯಪ್ ಮತ್ತು ಇ-ಮೇಲ್ ಮೂಲಕವೂ ದೂರು ನೀಡಬೇಕು' ಎಂದರು.

'ಪಾಲ್ ಭೇಟಿ ನಿಯಮಗಳ ಉಲ್ಲಂಘನೆ'

ಬೆಂಗಳೂರು: 'ವಕ್ಫ್ ಮಸೂದೆಯ ಪರಿಶೀಲನೆಗೆ ರಚಿಸಿರುವ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರ ಹುಬ್ಬಳ್ಳಿ ಭೇಟಿ ನಿಯಮಾವಳಿಗಳ ಉಲ್ಲಂಘನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ವಕ್ಫ್ ತಿದ್ದುಪಡಿ ವಿಚಾರವಾಗಿ ಸಮಿತಿ ಸದಸ್ಯರು ಅಕ್ಷೇಪ ಎತ್ತಿದ್ದಾರೆ. ಹೀಗಿರುವಾಗ ಅವರೊಬ್ಬರೇ ಭೇಟಿ ನೀಡಿರುವುದು ಸರಿಯಲ್ಲ' ಎಂದರು. 'ಪಾಲ್ ಅವರ ಭೇಟಿ ರಾಜಕೀಯ ಪ್ರೇರಿತ' ಎಂದೂ ಹೇಳಿದರು.

ದೂರು ನೀಡಿದರೆ ತನಿಖೆ: 'ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಪದ ವಿಚಾರವಾಗಿ ದೂರು ನೀಡಿದರೆ ತನಿಖೆ ನಡೆಯಲಿದೆ' ಎಂದು ಪರಮೇಶ್ವರ ಹೇಳಿದರು.

ಜಮೀರ್‌ಗೆ ಥ್ಯಾಂಕ್ಸ್: ಛಲವಾದಿ ನಾರಾಯಣಸ್ವಾಮಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ನೂರಾರು ವರ್ಷಗಳ ಹಿಂದಿನ ಆಸ್ತಿಯನ್ನು ವಕ್ಫ್ ಆಸ್ತಿಯಾಗಿ ಮಾಡಲು ಹೊರಟಿದ್ದ ಕಾಂಗ್ರೆಸ್ ಸರ್ಕಾರದ ಒಳಸಂಚನ್ನು ಸಚಿವ ಜಮೀರ್ ಅಹ್ಮದ್ ಖಾನ್ ಅವರು ಬಯಲು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಒಂದು ಥ್ಯಾಂಕ್ಸ್' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ನಾರಾಯಣಸ್ವಾಮಿ ಅವರು, 'ಜನರ ಆಸ್ತಿಗಳನ್ನು ಒಂದೊಂದಾಗಿ ತನ್ನ ಆಸ್ತಿಯನ್ನಾಗಿ ಮಾಡಲು ವಕ್ಫ್ ಹೊರಟಿತ್ತು. ಮುಂದೊಂದು ದಿನ ದೊಡ್ಡ ಸಮಸ್ಯೆಯಲ್ಲಿ ಸಿಲುಕುತ್ತಿದ್ದ ರಾಜ್ಯದ ಜನರನ್ನು ಇವತ್ತು ಜಮೀರ್ ನೋಟಿಸ್ ಕೊಡಿಸುವ ಮೂಲಕ ಎಚ್ಚರಿಸಿದ್ದಾರೆ' ಎಂದರು.

ಪವಿತ್ರಾ, ದರ್ಶನ್ ಜಾಮೀನು ಅರ್ಜಿ ವಿಚಾರಣೆ 21ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಅವರ ನಿಯಮಿತ ಜಾಮೀನು ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಇದೇ 21ಕ್ಕೆ ನಿಗದಿಪಡಿಸಿದೆ.

ಪ್ರಕರಣದ ಮೊದಲ ಆರೋಪಿ ಪವಿತ್ರಾ ಗೌಡ, 7ನೇ ಆರೋಪಿ ಅನುಕುಮಾರ್ ಅಲಿಯಾಸ್ ಅನು, 11ನೇ ಆರೋಪಿ ಆರ್.ನಾಗರಾಜು, 12ನೇ ಆರೋಪಿ ಎಂ. ಲಕ್ಷ್ಮಣ್ ಪ್ರತ್ಯೇಕವಾಗಿ ಸಲ್ಲಿಸಿದ್ದ ಜಾಮೀನು ಅರ್ಜಿಗಳು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ನಿಗದಿಯಾಗಿದ್ದವು.

ಬೆಳಿಗ್ಗೆ ಕೋರ್ಟ್ ಕಲಾಪ ಆರಂಭವಾಗುತ್ತಿದ್ದಂತೆಯೇ, ಎಂ. ಲಕ್ಷ್ಮಣ್ ಪರ ವಕೀಲ ಸುಯೋಗ ಹೇರಳೆ ಮತ್ತು ಆರ್. ನಾಗರಾಜು ಪರ ಜಿ. ಲಕ್ಷ್ಮಿಕಾಂತ್, 'ಪ್ರಕರಣಕ್ಕೆ ಸಂಬಂಧಿಸಿದ ಏಳು ಸಂಪುಟಗಳ ಸಂಪೂರ್ಣ ದೋಷಾರೋಪ ಪಟ್ಟಿಯನ್ನು ಕೋರ್ಟ್‌ಗೆ ಇವತ್ತಷ್ಟೇ ಸಲ್ಲಿಸಿದ್ದೇವೆ. ಆದ್ದರಿಂದ, ಒಂದಷ್ಟು ಸಮಯಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಅಂತೆಯೇ, ಬೆಳಗಿನ ಕಲಾಪದ ಅಂತ್ಯಕ್ಕೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಹಾಜರಾಗಿ, 'ಈ ಎಲ್ಲಾ ಅರ್ಜಿಗಳನ್ನೂ ಒಂದೇ ದಿನ ವಿಚಾರಣೆಗೆ ಕೈಗೆತ್ತಿಕೊಂಡರೆ ಕೋರ್ಟ್‌ನ ಸಮಯ ಪರಿಪಾಲನೆಗೂ ಅನುಕೂಲವಾಗುತ್ತದೆ. ಆದ್ದರಿಂದ, ಇವುಗಳ ಜೊತೆಗೇ ಮೊದಲ ಆರೋಪಿ ಪವಿತ್ರಾ ಗೌಡ ಮತ್ತು ದರ್ಶನ್ ಅವರ ನಿಯಮಿತ ಜಾಮೀನು ಅರ್ಜಿಗಳನ್ನು ಒಟ್ಟಿಗೇ ಒಂದೇ ದಿನ ವಿಚಾರಣೆಗೆ ನಿಗದಿಪಡಿಸಬೇಕು' ಎಂದು ಮನವಿ ಮಾಡಿದರು. ಇದಕ್ಕೆ ಸಮ್ಮತಿ ವ್ಯಕ್ತಪಡಿಸಿದ ನ್ಯಾಯಪೀಠ ಎಲ್ಲ ಅರ್ಜಿಗಳ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು.

ಪವಿತ್ರಾ ಗೌಡ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್ ಮತ್ತು ಅನುಕುಮಾರ್ ಪರವಾಗಿ ಹೈಕೋರ್ಟ್ ವಕೀಲ ರಂಗನಾಥ ರೆಡ್ಡಿ ಹಾಜರಾಗಿದ್ದರು.

'...ತೊಂದರೆ ಆಗದಂತೆ ಕಾಯ್ದೆಗೆ ತಿದ್ದುಪಡಿ'

ಒಂದನೇ ಪುಟದಿಂದ...

ಭರವಸೆ ಸಿಕ್ಕ ಹಿನ್ನೆಲೆಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಅನಿರ್ದಿಷ್ಟಾವಧಿ ಧರಣಿ ಅಂತ್ಯಗೊಳಿಸಿದರು.

ಇದಕ್ಕೂ ಮುನ್ನ ಜಗದಂಬಿಕಾ ಪಾಲ್ ಅವರು ಹುಬ್ಬಳ್ಳಿಯಲ್ಲಿ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ರೈತರು, ಬಿಜೆಪಿ ಮುಖಂಡರು ಮತ್ತು ವಿವಿಧ ಸಂಘಟನೆಗಳ ಪ್ರತಿನಿಧಿಗಳಿಂದ 75ಕ್ಕೂ ಹೆಚ್ಚು ಅಹವಾಲುಗಳನ್ನು ಆಲಿಸಿದರು. ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ರೈತರ ಸಂಕಷ್ಟ ಆಲಿಸಲು ಬಿಜೆಪಿ ರಚಿಸಿದ್ದ ಸತ್ಯಶೋಧನಾ ಸಮಿತಿಯ ಅಧ್ಯಕ್ಷ ಗೋವಿಂದ ಕಾರಜೋಳ ತಮ್ಮ ವರದಿಯ ಪ್ರತಿಯನ್ನು ಸಮಿತಿಗೆ ನೀಡಿದರು.

ಈ ಸಂದರ್ಭದಲ್ಲಿ ಜಗದಂಬಿಕಾ ಪಾಲ್ ಮಾತನಾಡಿ, 'ಕರ್ನಾಟಕದಲ್ಲಿ ರೈತರ ಜಮೀನು, ದೇವಸ್ಥಾನ, ಮಠಗಳ ಜಮೀನು ತನ್ನದೆಂದು ವಕ್ಫ್ ಮಂಡಳಿ ಹೇಳಿಕೊಳ್ಳುತ್ತಿದೆ. ಆರ್‌ಟಿಸಿ ಪಹಣಿ ದಾಖಲೆ ಪತ್ರಗಳಲ್ಲಿಯೂ ವಕ್ಫ್ ಆಸ್ತಿ ಎಂದು ನಮೂದಿಸುತ್ತಿದೆ. ಅಧಿಕಾರಿಗಳ ಸಹಕಾರ ಇಲ್ಲದೇ ಇದಾಗಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

'ವಕ್ಫ್ ಮಂಡಳಿ ನೀಡಿದ ನೋಟಿಸ್ ಹಿಂಪಡೆಯಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಆದರೆ, ದಾಖಲೆಗಳಲ್ಲಿ ಆದ ತಿದ್ದುಪಡಿ ಸರಿಪಡಿಸಲು ಏನು ಮಾಡುತ್ತಿದೆ? ಇದಕ್ಕೆ ಯಾರು ಜವಾಬ್ದಾರಿ? ಬೀದರ್, ವಿಜಯಪುರ, ಗುಲ್ಬರ್ಗ ಸೇರಿದಂತೆ ವಿವಿಧೆಡೆಯಿಂದ ಇಂತಹ ಹಲವು ದೂರುಗಳು ಕೇಳಿಬಂದಿವೆ' ಎಂದರು.



ವಿಜಯಪುರಕ್ಕೆ ಗುರುವಾರ ಭೇಟಿ ನೀಡಿದ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್ ಮತ್ತು ಸದಸ್ಯ ತೇಜಸ್ವಿ ಸೂರ್ಯ ಅವರಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ರಮೇಶ ಜಿಗಜಿಣಗಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಮಾಜಿ ಸಚಿವೆ ಶಶಿಕಲಾ ಜೊಲ್ಲೆ, ಶಾಸಕ ರಮೇಶ ಜಾರಕಿಹೊಳಿ, ಕೊಲ್ಹಾಪುರ ಕನೇರಿಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಅವರು ವಕ್ಫ್‌ಗೆ ಸಂಬಂಧಿಸಿದ ಅಹವಾಲು ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ನನ್ನನ್ನು ಪ್ರಶ್ನಿಸಲು ಕಾಂಗ್ರೆಸ್‌ಗೆ ಇಲ್ಲ ಅಧಿಕಾರ: ಪಾಲ್

'ನಾನು ಜೆಪಿಸಿ ಅಧ್ಯಕ್ಷ. ವಕ್ಫ್‌ನಿಂದ ರೈತರಿಗೆ ಆದ ತೊಂದರೆ ಆಲಿಸಲು ಇಲ್ಲಿ ಬಂದಿದ್ದೇನೆ. ಜೆಪಿಸಿ ದೇಶದ ಯಾವುದೇ ರಾಜ್ಯಕ್ಕೆ ಬೇಕಾದರೂ ಭೇಟಿ ನೀಡಿ ಕಾಯ್ದೆಗೆ ಪೂರಕ ಅಭಿಪ್ರಾಯ ಸಂಗ್ರಹಿಸಬಹುದು, ತೊಂದರೆಗೆ ಒಳಗಾದವರ ಅಹವಾಲು ಆಲಿಸಬಹುದು. ಇದನ್ನು ಪ್ರಶ್ನಿಸುವ ಅಧಿಕಾರ ಕಾಂಗ್ರೆಸ್‌ಗೆ ಇಲ್ಲ' ಎಂದು ಜೆಪಿಸಿ ಅಧ್ಯಕ್ಷ ಜಗದಂಬಿಕಾ ಪಾಲ್ ಹೇಳಿದರು.

ಜೆಪಿಸಿ ಭೇಟಿಗೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ವಿಜಯಪುರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, 'ಕರ್ನಾಟಕಕ್ಕೆ ನಾನು ಭೇಟಿ ನೀಡಿರುವುದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ. ನನ್ನನ್ನು ವಿರೋಧಿಸುವ ಬದಲು ರೈತರಿಗೆ ಯಾಕೆ ನೋಟಿಸ್ ನೀಡಲಾಗಿದೆ ಎಂಬುದನ್ನು ರಾಜ್ಯ ಸರ್ಕಾರ ಮೊದಲು ಉತ್ತರಿಸಲಿ' ಎಂದರು.

'ಜೆಪಿಸಿಯನ್ನು ಸ್ಪೀಕರ್ ರಚಿಸಿದ್ದಾರೆ. ಬಿಜೆಪಿ ಅಲ್ಲದೇ ಸಮಾಜವಾದಿ ಪಕ್ಷ, ಡಿಎಂಕೆ, ಕಾಂಗ್ರೆಸ್ ಸೇರಿ ವಿವಿಧ ಪಕ್ಷಗಳ ಸದಸ್ಯರು ಇದರಲ್ಲಿ ಇದ್ದಾರೆ. ಸಭೆಗಳಲ್ಲಿ ಮುಸ್ಲಿಮರು ಅಷ್ಟೇ ಅಲ್ಲ, ಎಲ್ಲರೂ ಮನವಿ ಸಲ್ಲಿಸಿದ್ದಾರೆ' ಎಂದರು.

'15 ಸಾವಿರ ಎಕರೆಯಷ್ಟು ದೊಡ್ಡ ಪ್ರಮಾಣದಲ್ಲಿ ಆಸ್ತಿ ಹೇಗೆ ವಕ್ಫ್‌ಗೆ ಸೇರುತ್ತದೆ? ದೇವಾಲಯ ಇರಲಿ, ಮಠಗಳ ಆಸ್ತಿ ಏನಾಗಬಹುದು. 1920, 1930ರಿಂದ ವ್ಯವಸಾಯ ಮಾಡುತ್ತಿದ್ದ ಜಮೀನು ಹೇಗೆ ವಕ್ಫ್ ಆಸ್ತಿ ಆಗಿದೆ? ಇದು ಆತಂಕದ ವಿಷಯ. ಇದನ್ನು ಜೆಪಿಸಿ ಖಂಡಿತವಾಗಿ ಪರಿಶೀಲಿಸಲಿದೆ. ವರದಿಯಲ್ಲಿ ಪ್ರಸ್ತಾಪಿಸುತ್ತೇನೆ' ಎಂದರು.

ಕೇಂದ್ರ ಸಚಿವ ವಿ. ಸೋಮಣ್ಣ, ಸಂಸದರಾದ ಗೋವಿಂದ ಕಾರಜೋಳ, ಬಸವರಾಜ ಬೊಮ್ಮಾಯಿ, ಶಾಸಕರಾದ ಅರವಿಂದ ಬೆಲ್ಲದ, ಶಾಸಕ ಮಹೇಶ ಟೆಂಗಿನಕಾಯಿ, ಮಾಜಿ ಸಂಸದ ಪ್ರತಾಪ್ ಸಿಂಹ ಇದ್ದರು.

> ಜೆಪಿಸಿ ಹಿಂದೆಂದಾದರೂ ಬಂದಿತ್ತಾ? ಅವರು ಬಂದಿರುವುದು ರಾಜಕೀಯ ಕಾರಣಕ್ಕೆ. ವಕ್ಫ್ ವಿಚಾರದಲ್ಲಿ ನಾನು ಈಗಾಗಲೇ ನೋಟಿಸ್ ಹಿಂಪಡೆಯಿರಿ ಎಂದಿದ್ದೇನೆ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ರಾಜಕಾರಣಕ್ಕೆ ಬಂದ ಜೆಪಿಸಿ'

ಹುಬ್ಬಳ್ಳಿ: 'ಹುಬ್ಬಳ್ಳಿ ಹಾಗೂ ವಿಜಯಪುರಕ್ಕೆ ಬಂದಿರುವ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಸಮಿತಿಯೇ ಅಲ್ಲ. ಬಿಜೆಪಿ ಸದಸ್ಯರು ಇಲ್ಲಿ ರಾಜಕೀಯ ಮಾಡಲು ಬಂದಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಜೆಪಿಸಿ ಸಭೆ ಎಂಬುದು ನಾಟಕ. ಜೆಪಿಸಿ ಬರುವುದಕ್ಕೆ ಮಾರ್ಗಸೂಚಿ ಇದೆ. ಜೆಪಿಸಿ ಸದಸ್ಯರು ಬರುವ ಮೊದಲು ಮುಂಚೆ ರಾಜ್ಯ ಸರ್ಕಾರಕ್ಕೆ, ಅಧಿಕಾರಿಗಳಿಗೆ ತಿಳಿಸಬೇಕು. ಎಲ್ಲ ಸದಸ್ಯರು ಬರಬೇಕು. ಇಲ್ಲಿ ಅಧ್ಯಕ್ಷರೊಬ್ಬರು ಬಂದಿದ್ದಾರೆ. ಅವರು ತಮ್ಮ ಪಕ್ಷದ ಕೆಲಸಕ್ಕೆ ಬಂದಿದ್ದಾರೆ. ಅಧ್ಯಕ್ಷರ ಜೊತೆ ಬಂದಿರುವ ಬಸವರಾಜ ಬೊಮ್ಮಾಯಿ, ವಿ.ಸೋಮಣ್ಣ ಅವರೇನು ಸಮಿತಿ ಸದಸ್ಯರೇ' ಎಂದು ಪ್ರಶ್ನಿಸಿದರು.

ಸರ್.ಎಂ.ವಿ ಸ್ಮರಿಸುವ ಜಾಗಕ್ಕೂ 'ವಕ್ಫ್' ಮುದ್ರೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಅವರ ಬಾಲ್ಯ ಸ್ಮರಿಸುವಾಗ ಬರುವ ನಗರದ ಕಂದವಾರ ಸರ್ಕಾರಿ ಪ್ರಾಥಮಿಕ ಶಾಲೆ ಪಹಣಿಯಲ್ಲಿ ನಮೂದಾಗಿರುವ 'ವಕ್ಫ್' ಹೆಸರು ಮತ್ತೆ ಚರ್ಚೆಗೆ ಕಾರಣವಾಗಿದೆ.

ಕಂದವಾರ ಗ್ರಾಮದ ಸರ್ವೆ ನಂ1ರಲ್ಲಿ 19ಗುಂಟೆ ಜಮೀನಿದೆ. ಹಲವು ದಶಕಗಳಿಂದ ಈ ಜಮೀನಿನ ಪಹಣಿಯಲ್ಲಿ 'ಶಾಲೆ' ಎಂದೇ ಬರುತ್ತಿತ್ತು. 2014-15 ನಂತರ 'ದಾವೂದ್ ಷಾ ವಲ್ಲೀ ದರ್ಗಾ ಸುನ್ನಿ ವಕ್ಫ್ ಆಸ್ತಿ' ಎಂದು ನಮೂದಾಗಿದೆ. ಈಗಲೂ ಪಹಣಿಯಲ್ಲಿ ಇದೇ ಹೆಸರು ಬರುತ್ತಿದೆ.

ವಿಶ್ವೇಶ್ವರಯ್ಯ ಅವರು ಬಾಲ್ಯದಲ್ಲಿ ಮುದ್ದೇನಹಳ್ಳಿಯಿಂದ ಚಿಕ್ಕಬಳ್ಳಾಪುರಕ್ಕೆ ಪ್ರಾಥಮಿಕ ಶಿಕ್ಷಣಕ್ಕೆ ಬರುವಾಗ ಈ ಸ್ಥಳದಲ್ಲಿ ಕೆಲ ಸಮಯ ವಿಶ್ರಾಂತಿ ಪಡೆಯುತ್ತಿದ್ದರು ಎನ್ನಲಾಗುತ್ತಿದೆ. ಆ ಕಾರಣದಿಂದ ಶಾಲೆ ಆವರಣದಲ್ಲಿ 'ವಿಶ್ವೇಶ್ವರಯ್ಯ ತಂಗುದಾಣ' ಹೆಸರಿನ ಕೊಠಡಿಯೂ ಇದೆ.

'ಕಂದವಾರದ ಸರ್ವೆ ನಂ 200ರಲ್ಲಿ ದರ್ಗಾಕ್ಕೆ ಸೇರಿದ 15x19 ಜಾಗವಿದೆ. ಇದು ವಕ್ಫ್ ಜಾಗ. ಇದಕ್ಕೆ ಹೊಂದಿಕೊಂಡಿರುವ ಸರ್ವೆ ನಂ 1ರಲ್ಲಿ ಶಾಲೆ ಹೆಸರಿನಲ್ಲಿದ್ದ 19 ಗುಂಟೆ ಜಾಗ ವಕ್ಫ್ ಆಸ್ತಿ ಎಂದು ನಮೂದಾಗಿದೆ. ಈ ಬಗ್ಗೆ ಗ್ರಾಮಸ್ಥ ರಾಮಸ್ವಾಮಿ ಮತ್ತಿತರರು ಹೋರಾಟ ನಡೆಸಿದ್ದರು. 2022-23ರಲ್ಲಿ ನ್ಯಾಯಾಧೀಶರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಆಗ ವಕ್ಫ್ ಬೋರ್ಡ್‌ನವರನ್ನು ಕರೆಸಿದ್ದರು. ಆಗ ವಕ್ಫ್ ಬೋರ್ಡ್‌ನವರು, 'ತಪ್ಪಾಗಿದೆ. ನಮ್ಮದು 15x19 ಜಾಗ' ಎಂದು ಹೇಳಿದ್ದರು. ಆದರೆ, ಇಂದಿಗೂ ಶಾಲೆ ಪಹಣಿಯಲ್ಲಿರುವ 'ವಕ್ಫ್' ಹೆಸರು ತೆರವಾಗಿಲ್ಲ ಎಂದು ಶಾಲೆಯ ಈ ಹಿಂದಿನ ಮುಖ್ಯ ಶಿಕ್ಷಕ ಕೆ.ಜಿ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಜೆಪಿಸಿ ಪ್ರವಾಸ ಬಹಿಷ್ಕರಿಸಲು ಸಮಿತಿ ಸದಸ್ಯರ ನಿರ್ಧಾರ

ನವದೆಹಲಿ(ಪಿಟಿಐ): ವಕ್ಫ್ ಕಾಯ್ದೆಗೆ ಉದ್ದೇಶಿತ ತಿದ್ದುಪಡಿ ಸಂಬಂಧಿಸಿ ವಿವಿಧ ಭಾಗೀದಾರರ ಅಭಿಪ್ರಾಯಗಳನ್ನು ಸಂಗ್ರಹಿಸುವ ಸಲುವಾಗಿ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆ ಕುರಿತ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಇದೇ ಶನಿವಾರದಿಂದ ಆರಂಭಿಸಲಿರುವ ಪ್ರವಾಸವನ್ನು ಬಹಿಷ್ಕರಿಸಲು ಸಮಿತಿಯಲ್ಲಿನ ವಿಪಕ್ಷಗಳ ಸದಸ್ಯರು ನಿರ್ಧರಿಸಿದ್ದಾರೆ.

'ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರು ಮನಸ್ಸಿಗೆ ತೋಚಿದಂತೆ ಹಾಗೂ ಒತ್ತಡಕ್ಕೆ ಮಣಿದವರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ, ಸಮಿತಿ ಕೈಗೊಂಡಿರುವ ಐದು ದಿನಗಳ ಪ್ರವಾಸ ಹಾಗೂ ಸಭೆಗಳನ್ನು ಬಹಿಷ್ಕರಿಸಲು ಜೆಪಿಸಿಯ ವಿಪಕ್ಷಗಳ ಎಲ್ಲ ಸದಸ್ಯರು ನಿರ್ಧರಿಸಿದ್ದೇವೆ' ಎಂದು ಟಿಎಂಸಿ ಸಂಸದರಾದ ಕಲ್ಯಾಣ್ ಬ್ಯಾನರ್ಜಿ ಹಾಗೂ ನದಿಮುಲ್ ಹಕ್ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಕಲ್ಯಾಣ್ ಬ್ಯಾನರ್ಜಿ

'ಜಗದಂಬಿಕಾ ಪಾಲ್ ಅವರು ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ತೀರ ಸ್ಥಳೀಯವಾದ ವಿಷಯವೊಂದರ ಪರಿಶೀಲನೆಗಾಗಿ ಕರ್ನಾಟಕಕ್ಕೆ ಭೇಟಿ ನೀಡಿದ್ದಾರೆ' ಎಂದು ಟೀಕಿಸಿದರು.

ಸಮಿತಿಯು ಶನಿವಾರ ಗುವಾಹಟಿಯಿಂದ ಪ್ರವಾಸ ಆರಂಭಿಸಲಿದೆ. ಈ ವೇಳೆ, ಅಸ್ಸಾಂ, ಮೇಘಾಲಯ, ಮಣಿಪುರ ಹಾಗೂ ತ್ರಿಪುರಾ ರಾಜ್ಯಗಳ ಅಲ್ಪಸಂಖ್ಯಾತರ ಆಯೋಗ, ಕಾನೂನು ಇಲಾಖೆ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಲಿದೆ.

ನ.11ರಂದು ಭುವನೇಶ್ವರ, 12ರಂದು ಪಶ್ಚಿಮ ಬಂಗಾಳ, 13ರಂದು ಬಿಹಾರ ಹಾಗೂ 14ರಂದು ಲಖನೌಗೆ ಭೇಟಿ ನೀಡಲಿದೆ.

ಸೀಟ್ ಬ್ಲಾಕಿಂಗ್: ಕಾಲೇಜುಗಳಿಗೆ ನೋಟಿಸ್

ಒಂದನೇ ಪುಟದಿಂದ...

'ತಮ್ಮ ಫೋನ್ ಸಂಖ್ಯೆ, ಲಾಗಿನ್ ಐಡಿ-ಪಾಸ್‌ವರ್ಡ್‌ಗಳನ್ನು ದುರುಪಯೋಗ ಮಾಡಿಕೊಂಡಿರುವ ಸಾಧ್ಯತೆ ಇದೆ ಎಂದು ವಿದ್ಯಾರ್ಥಿಗಳು ನೀಡಿದ ಉತ್ತರವನ್ನು ಮರುಪರಿಶೀಲನೆ ಮಾಡಿದೆವು. ಅವರ ಹೇಳಿಕೆಗಳಲ್ಲಿ ಸತ್ಯಾಂಶವಿದೆ ಎನ್ನುವುದು ಮನವರಿಕೆಯಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದರು. ಕಾಲೇಜು ಆಡಳಿತ ಮಂಡಳಿಗಳು, ಇಂಟಿಗ್ರೇಟೆಡ್ ಕೋಚಿಂಗ್ ಸೆಂಟರ್‌ಗಳ ಮುಖ್ಯಸ್ಥರನ್ನು ವಿಚಾರಣೆಗೆ ಒಳಪಡಿಸುವ ಉದ್ದೇಶದಿಂದ ಉನ್ನತ ತನಿಖೆ ನಡೆಸುವಂತೆ ಕೋರಿ ಉನ್ನತ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಲು ಕೆಇಎ ನಿರ್ಧರಿಸಿದೆ.

ಯುಯುಸಿಎಂಎಸ್: 'ಅಂಕೆ'ಗೆ ಸಿಗದ ಅಂಕ

ಒಂದನೇ ಪುಟದಿಂದ...

ಪರೀಕ್ಷಾ ವಿಭಾಗದ ಮುಂದೆ ಅಂಕಪಟ್ಟಿ ತಿದ್ದುಪಡಿಗೆ ನಿಂತವರ ಸರದಿ ಸಾಲು ಬೆಳೆಯುತ್ತಲೇ ಇದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ತಿದ್ದುಪಡಿ ಸಾಧ್ಯವಾಗದೇ ಹೈರಾಣಾಗುತ್ತಿದ್ದಾರೆ.

ಉನ್ನತ ಶಿಕ್ಷಣ, ಉದ್ಯೋಗಕ್ಕೂ ಅಡ್ಡಿ: ಪದವಿ ಪೂರೈಸಿ ಎಂ.ಎ, ಎಂ.ಕಾಂ, ಎಂ.ಎಸ್‌ಸಿ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿದ, ಎಂ.ಬಿ.ಎ, ಎಂ.ಸಿ.ಎ ಮೊದಲಾದ ಕೋರ್ಸ್‌ಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆದಿದ್ದ ಹಲವು ವಿದ್ಯಾರ್ಥಿಗಳಿಗೆ ಅಂಕಗಳ ದೋಷದ ಕಾರಣ ಸೀಟು ಪಡೆಯಲು ಸಾಧ್ಯವಾಗಿಲ್ಲ. ಉದ್ಯೋಗಕ್ಕೆ ಅರ್ಜಿ ಸಲ್ಲಿಸಲೂ ಹಲವು ಸಮಸ್ಯೆ ಎದುರಿಸುತ್ತಿದ್ದಾರೆ.

'ಶಿವಮೊಗ್ಗದ ಬಾಪೂಜಿ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಮ್ಮ ಮಗಳು ಈ ಬಾರಿ ಬಿ.ಸಿ.ಎ ಮುಗಿಸಿದ್ದಾಳೆ. ಸ್ನಾತಕೋತ್ತರ ಕೋರ್ಸ್‌ಗೆ ಪ್ರವೇಶ ಪಡೆಯಲು ಡಿಜಿಟಲ್ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಂಡಾಗ ಮೂರನೇ ಸೆಮಿಸ್ಟರ್ ಅಂಕಪಟ್ಟಿಯೇ ಮಾಯವಾಗಿದೆ. ಈ ಕುರಿತು ಕಾಲೇಜಿನ ಪ್ರಾಂಶುಪಾಲರು ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವರಿಗೆ ಪತ್ರ ಕೊಟ್ಟಿದ್ದಾರೆ. ದೂರದ ಊರಿನಿಂದ ಕಾಲೇಜು ಹಾಗೂ ವಿಶ್ವವಿದ್ಯಾಲಯಕ್ಕೆ ಅಲೆದು ಸಾಕಾಗಿದೆ. ಒಂದು ತಿಂಗಳಾದರೂ ಸಮಸ್ಯೆ ಬಗೆಹರಿದಿಲ್ಲ' ಎನ್ನುತ್ತಾರೆ ಪೋಷಕ ಭಾಗಜ್ಜಿ ಮಂಜಪ್ಪ.

'ನಿಯಮದ ಪ್ರಕಾರ ಬೇಡಿಕೆ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಭೌತಿಕ ಅಂಕಪಟ್ಟಿ ನೀಡುವುದು ಕಡ್ಡಾಯ. ಆದರೆ, ಬಹುತೇಕ ವಿಶ್ವವಿದ್ಯಾಲಯಗಳು ನೀಡುತ್ತಿಲ್ಲ. ಹಲವು ಕಂಪನಿಗಳು ಉದ್ಯೋಗ ನೀಡುವಾಗ ಡಿಜಿಟಲ್ ಅಂಕಪಟ್ಟಿ ನಿರಾಕರಿಸುತ್ತಿವೆ. ಇದರಿಂದ ಉದ್ಯೋಗಕ್ಕೂ ಅಡ್ಡಿಯಾಗಿದೆ' ಎನ್ನುತ್ತಾರೆ ಪದವೀಧರ ವಿದ್ಯಾರ್ಥಿ ಅನಿಲ್‌ಕುಮಾರ್.

ತಾಂತ್ರಿಕ ದೋಷ, ಪರದಾಟ: ಹಲವು ವಿಶ್ವವಿದ್ಯಾಲಯಗಳು 2024-25ನೇ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿವೆ. ಯುಯುಸಿಎಂಎಸ್ ತಂತ್ರಾಂಶದಲ್ಲಿ ದೋಷಗಳು ಕಾಣಿಸಿಕೊಂಡ ಕಾರಣ ಮತ್ತೊಂದು ಸುತ್ತೋಲೆ ಹೊರಡಿಸಿ, ಭೌತಿಕವಾಗಿ ಅರ್ಜಿ ಸಲ್ಲಿಸಲು ಸೂಚಿಸಿವೆ.

ಬಳ್ಳಾರಿ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಕೆಲ ಕಾಲೇಜುಗಳಲ್ಲಿ ಪ್ರಥಮ ಸೆಮಿಸ್ಟರ್ ಫಲಿತಾಂಶ ಎರಡು ವರ್ಷವಾದರೂ ಪ್ರಕಟಗೊಂಡಿಲ್ಲ, ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮೂಲ ಅಂಕಪಟ್ಟಿಯೇ ಸಿಕ್ಕಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಅಧ್ಯಯನಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ.

ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಡಿಜಿಲಾಕರ್‌ನಿಂದ ಅಂಕಪಟ್ಟಿ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳುವಾಗ ತೊಂದರೆ ಎದುರಿಸುತ್ತಿದ್ದು, ಸಮಸ್ಯೆ ಬಗೆಹರಿಸಲು ಕ್ರಮ ವಹಿಸುವಂತೆ ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಎಚ್.ದೇವೇಂದ್ರಪ್ಪ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಏನಿದು ಯುಯುಸಿಎಂಎಸ್?

ಪ್ರವೇಶ, ವೇಳಾಪಟ್ಟಿ, ಪರೀಕ್ಷೆ ಸೇರಿದಂತೆ ರಾಜ್ಯದ ಎಲ್ಲ ಸರ್ಕಾರಿ ವಿಶ್ವವಿದ್ಯಾಲಯ ಹಾಗೂ ಪದವಿ ಕಾಲೇಜುಗಳಲ್ಲಿ ಏಕೀಕೃತ ವ್ಯವಸ್ಥೆ ಜಾರಿಗೆ ತರಲು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯ ತಂತ್ರಾಂಶ ರೂಪಿಸಲಾಗಿದೆ. ಮುಂಬೈ ಮೂಲದ ಕಂಪನಿ ಈ ಸಾಫ್ಟ್‌ವೇರ್ ನಿರ್ವಹಣೆ ಮಾಡುತ್ತಿದೆ.

ಶೈಕ್ಷಣಿಕ ಪ್ರವೇಶ, ಪರೀಕ್ಷಾ ಘಟಕಗಳು, ಹಣಕಾಸು ಯೋಜನೆ ಮತ್ತು ಉಸ್ತುವಾರಿ, ಮಾನ್ಯತೆ, ಮಾನವ ಸಂಪನ್ಮೂಲ ಹಾಗೂ ವಿದ್ಯಾರ್ಥಿಗಳಿಗೆ ನೆರವು ನೀಡುವ ವಿದ್ಯಾರ್ಥಿ ಬೆಂಬಲಿತ ಏಳು ಘಟಕಗಳನ್ನು ಈ ವ್ಯವಸ್ಥೆ ಒಳಗೊಂಡಿದೆ.

ವಿದ್ಯಾರ್ಥಿಗಳ ಹಾಜರಾತಿ, ಪ್ರವೇಶ, ಗಳಿಸಿದ ಅಂಕಗಳನ್ನು ಈ ತಂತ್ರಾಂಶಕ್ಕೆ ಅಪ್‌ಲೋಡ್ ಮಾಡಲಾಗುತ್ತದೆ. ಸರ್ಕಾರಿ ವಿಶ್ವವಿದ್ಯಾಲಯದ ಎಲ್ಲ ಆದಾಯ, ವೆಚ್ಚಗಳ ಲೆಕ್ಕ, ವಿದ್ಯಾರ್ಥಿಗಳ ಹಾಸ್ಟೆಲ್ ಸೀಟು, ವಿದ್ಯಾರ್ಥಿವೇತನ, ಸಾಂಸ್ಕೃತಿಕ ಚಟುವಟಿಕೆಗಳ ಮಾಹಿತಿಯನ್ನು ಪಡೆದುಕೊಳ್ಳಬಹುದು. ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಅಂಕಗಳ ಪರಿಶೀಲನೆಯೂ ಇದೇ ವ್ಯವಸ್ಥೆ ಮೂಲಕ ನಡೆಸಲಾಗುತ್ತದೆ. ವಿದ್ಯಾರ್ಥಿಗಳು, ಅಧ್ಯಾಪಕರು, ಪ್ರಾಂಶುಪಾಲರು, ವಿಶ್ವವಿದ್ಯಾಲಯದ ಅಧಿಕಾರಿಗಳು ತಮ್ಮ ಲಾಗಿನ್ ಮೂಲಕ ಈ ವ್ಯವಸ್ಥೆಗೆ ಪ್ರವೇಶ ಪಡೆಯಬಹುದು.

ಅಂಕಪಟ್ಟಿಗೇ ಕನ್ನ

ಯುಯುಸಿಎಂಎಸ್‌ಗೆ ಅಪ್‌ಲೋಡ್ ಮಾಡಿದ್ದ ಡಿಜಿಟಲ್ ಅಂಕಪಟ್ಟಿಯಲ್ಲಿನ ಅಂಕಗಳು ದಿಢೀರ್ ಏರುಪೇರಾಗುತ್ತಿರುವ ಪ್ರಕರಣದ ತನಿಖೆ ನಡೆಸಲು ಕೋರಿ ಕೆಲ ವಿಶ್ವವಿದ್ಯಾಲಯಗಳು ಪೊಲೀಸ್ ಠಾಣೆಯ ಮೆಟ್ಟಲೇರಿವೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಯುಯುಸಿಎಂಎಸ್ ತಂತ್ರಾಂಶದ ವೆಬ್‌ಸೈಟ್ ಹ್ಯಾಕ್ ಮಾಡಲಾಗಿದೆ. ಅನುತ್ತೀರ್ಣರಾದ ಕೆಲ ವಿದ್ಯಾರ್ಥಿಗಳ ಅಂಕಗಳಲ್ಲಿ ಹೆಚ್ಚಳವಾಗಿ ತೇರ್ಗಡೆಯಾಗಿದ್ದಾರೆ ಎಂದು ಪರೀಕ್ಷಾಂಗ ಕುಲಸಚಿವ ಕೆ. ತಿಪ್ಪೇಸ್ವಾಮಿ ಕೋಲಾರದ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆಯಲ್ಲಿ (ಸೆನ್) ದೂರು ದಾಖಲಿಸಿದ್ದರು. ತನಿಖೆ ನಡೆಸಿದ ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಕೆಲ ವಿಶ್ವವಿದ್ಯಾಲಯಗಳಲ್ಲಿ ವಂಚಕರ ಗುಂಪುಗಳು ವಿದ್ಯಾರ್ಥಿಗಳಿಂದ ಹಣ ಪಡೆದು ವೆಬ್‌ಸೈಟ್‌ಗೆ ಲಾಗಿನ್ ಆಗಿ ಅಂಕ ಬದಲಾವಣೆ ಹಾಗೂ ಅನುತ್ತೀರ್ಣರಾದವರನ್ನು ತೇರ್ಗಡೆ ಮಾಡಿಸುತ್ತಿರುವುದು ಪತ್ತೆಯಾಗಿವೆ. ಎಂ.ಬಿ.ಎ ಹಾಗೂ ಎಂ.ಸಿ.ಎ ಅಂಕಪಟ್ಟಿಗಳೇ ಅಧಿಕ ಸಂಖ್ಯೆಯಲ್ಲಿ ತಿದ್ದುಪಡಿಗೆ ಒಳಗಾಗಿವೆ.



ಸುಭಾಷಿತ

ಸೋಲದೆ ಗೆದ್ದರೆ ಮಂದಹಾಸ, ಸೋತು ಗೆದ್ದರೆ ಇತಿಹಾಸ.
–ಎ.ಪಿ.ಜೆ. ಅಬ್ದುಲ್ ಕಲಾಂ

ಡೊನಾಲ್ಡ್ ಟ್ರಂಪ್ ಕೈಗೆ ಧ್ರುವೀಕೃತ ಅಮೆರಿಕದ ಚುಕ್ಕಾಣಿ

ಅಮೆರಿಕದ ಮುಂದಿನ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಆಯ್ಕೆಯಾಗಿದ್ದಾರೆ. ಅವರ ರಿಪಬ್ಲಿಕನ್ ಪಕ್ಷವು ಸೆನೆಟ್ ಮತ್ತು ಜನಪ್ರತಿನಿಧಿ ಸಭೆ ಎರಡರಲ್ಲೂ ಪ್ರಾಬಲ್ಯ ಸಾಧಿಸುವುದು ಕೂಡ ನಿಚ್ಚಳವಾಗಿದೆ. ಆದರೆ, ಫಲಿತಾಂಶವನ್ನು ಅಧಿಕೃತವಾಗಿ ಇನ್ನಷ್ಟೇ ಘೋಷಿಸಬೇಕಿದೆ. ಅಧ್ಯಕ್ಷೀಯ ಚುನಾವಣೆಯ ಸ್ಪರ್ಧೆಯು ಅತ್ಯಂತ ನಿಕಟವಾಗಿರಲಿದೆ ಎಂದು ಸಮೀಕ್ಷೆಗಳು ಹೇಳಿದ್ದವು. ಆದರೆ, ಸಮೀಕ್ಷೆಗಳ ಅಂದಾಜನ್ನು ಸಮರ್ಥಿಸುವಂತಹ ಫಲಿತಾಂಶ ಬಂದಿಲ್ಲ. ಅಮೆರಿಕವು ರಾಜಕೀಯವಾಗಿ, ಸೇನಾ ಬಲದಲ್ಲಿ ಮತ್ತು ಆರ್ಥಿಕವಾಗಿ ಬಹುದೊಡ್ಡ ಶಕ್ತಿ. ಟ್ರಂಪ್ ಗೆಲುವು ಜಗತ್ತಿನಲ್ಲಿ ಇನ್ನಷ್ಟು ಒಡಕಿಗೆ ಕಾರಣವಾಗಬಹುದು ಎಂಬ ಆತಂಕ ಕೆಲವು ದೇಶಗಳಿಗೆ ಇದೆ; ಜೊತೆಗೆ ಮಹತ್ವದ ಪ್ರದೇಶಗಳಲ್ಲಿ ಅಂತರರಾಷ್ಟ್ರೀಯ ಸಂಬಂಧಗಳು ಬದಲಾಗಬಹುದು ಎಂಬ ಕಳವಳವೂ ಇದೆ. ಹೀಗಾಗಿ, ಇಡೀ ಜಗತ್ತು ಚುನಾವಣೆಯನ್ನು ಕೌತುಕದಿಂದ ನೋಡಿತ್ತು. ಅಮೆರಿಕ ಮತ್ತು ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಮರಳಿ ಕಟ್ಟುವುದಾಗಿ ಟ್ರಂಪ್ ಭರವಸೆ ಕೊಟ್ಟಿದ್ದರು. ಅಮೆರಿಕದ ಬಗೆಗಿನ ಅವರ ಯೋಚನೆ ಅಲ್ಲಿನ ಮತದಾರರಿಗೆ ಹಿಡಿಸಿದೆ ಎಂಬುದನ್ನು ಫಲಿತಾಂಶವು ಸಾರಿ ಹೇಳಿದೆ.

ಅತಿರೇಕದ ಆಲೋಚನಾ ಕ್ರಮ ಮತ್ತು ವಾಚಾಳಿತನಕ್ಕೆ ಹೆಸರಾದ ಟ್ರಂಪ್ ಅವರು, ಹೆಚ್ಚು ಸಂಘಟನಾತ್ಮಕ ವ್ಯವಸ್ಥೆಯನ್ನು ಹೊಂದಿದ್ದರು. 2017ರಲ್ಲಿ ಅವರು ಅಧ್ಯಕ್ಷರಾಗಿ ಆಯ್ಕೆಯಾದಾಗಿನಿಂದಲೇ ತಮ್ಮ ಅತಿರೇಕದ ವಾದವನ್ನು ಜನರ ಮುಂದಿಟ್ಟು ಅದನ್ನು ಪೋಷಿಸಿಕೊಂಡು ಬಂದಿದ್ದಾರೆ. ಟ್ರಂಪ್ ಗೆಲುವು ಅಮೆರಿಕವು ಬಲಪಂಥೀಯ ಸಿದ್ಧಾಂತ ದೆಡೆಗೆ ಇನ್ನಷ್ಟು ವಾಲಿರುವುದನ್ನು ತೋರಿಸಿದೆ. ಈ ಸಿದ್ಧಾಂತವನ್ನು ಇನ್ನೂ ಹೆಚ್ಚು ಜನರ ಹತ್ತಿರ ಒಯ್ಯುವುದಕ್ಕೆ ಟ್ರಂಪ್ ಅವರ ಆಕ್ರಮಣಕಾರಿ ವ್ಯಕ್ತಿತ್ವವು ಪೂರಕವಾಗಿದೆ. ಕ್ರೈಸ್ತ ಧರ್ಮದ ಬಲಪಂಥೀಯವಾದಿಗಳು, ದೊಡ್ಡ ಉದ್ಯಮ ಸಂಸ್ಥೆಗಳು, ಆರ್ಥಿಕ ವಿಚಾರಗಳಲ್ಲಿ ರಕ್ಷಣಾತ್ಮಕ ನಿಲುವು ಹೊಂದಿರುವವರು, ಬಿಳಿಯರೇ ಶ್ರೇಷ್ಠ ಎಂದು ವಾದಿಸುವವರು, ಅಮೆರಿಕದಲ್ಲಿ ತಯಾರಿಕೆ ಕುಸಿತದಿಂದಾಗಿ ಹಿನ್ನಡೆಗೊಳಗಾದ ನೌಕರ ವರ್ಗದ ಬೆಂಬಲ ಅವರಿಗೆ ಇದೆ. ಚೀನಾ ವಿರೋಧ ಮತ್ತು ರಾಷ್ಟ್ರೀಯ ಸುರಕ್ಷತೆಗೆ ಹೆಚ್ಚು ಒತ್ತು ಕೊಡಬೇಕು ಎಂಬ ವಾತಾವರಣವೂ ಅವರಿಗೆ ಪೂರಕವಾಗಿ ಒದಗಿಬಂದಿದೆ. ವಿಭಜನಕಾರಿ, ಸಹಮತವನ್ನು ತಿರಸ್ಕರಿಸುವ ಹಾಗೂ ಕಾನೂನುಪಾಲನೆ ಕುರಿತು ಅಸಡ್ಡೆ ಇರುವ ಟ್ರಂಪ್ ಅವರ ವ್ಯಕ್ತಿತ್ವವು ಅಮೆರಿಕನ್ನರಿಗೆ ಒಪ್ಪಿತವಾಗಿದೆ. ಅವರ ನಡವಳಿಕೆಯಲ್ಲಿ ಇರುವ ಸಮಸ್ಯೆಗಳು ಹಾಗೂ ಇತರ ನಕಾರಾತ್ಮಕ ಅಂಶಗಳೂ ಅವರ ವಿರುದ್ಧ ಕೆಲಸ ಮಾಡಲಿಲ್ಲ.



ಟ್ರಂಪ್ ಗೆಲುವು ಜಗತ್ತನ್ನು ಕಾಡುತ್ತಿರುವ ಉಕ್ರೇನ್ ಯುದ್ಧ, ಇಸ್ರೇಲ್–ಹಮಾಸ್ ಸಂಘರ್ಷ ಮತ್ತು ಜಾಗತಿಕ ತಾಪಮಾನ ಏರಿಕೆ ವಿರುದ್ಧದ ಹೋರಾಟದ ಮೇಲೆ ಪರಿಣಾಮ ಉಂಟು ಮಾಡಬಹುದು

ಡೆಮಾಕ್ರಟಿಕ್ ಪಕ್ಷಕ್ಕೆ ಅನನುಕೂಲಕರ ಪರಿಸ್ಥಿತಿ ಆರಂಭದಿಂದಲೇ ಇತ್ತು; ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಸ್ಪರ್ಧೆಗೆ ವಿಳಂಬವಾಗಿ ಪ್ರವೇಶಿಸಿದರು. ಗರ್ಭಪಾತಕ್ಕೆ ಸಂಬಂಧಿಸಿದ ಕಾನೂನು ಮತ್ತು ಬಂದೂಕು ನಿಯಂತ್ರಣದ ಭರವಸೆ, ಜನರಲ್ಲಿ ಇದ್ದ ನಿರಂಕುಶಾಧಿಪತ್ಯದ ಭೀತಿಯಂತಹ ವಿಚಾರಗಳು ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರಿಗೆ ನೆರವಾಗಬಹುದು ಎಂದು ಭಾವಿಸಲಾಗಿತ್ತು. ಆದರೆ ಈ ಯಾವ ವಿಚಾರವೂ ಮತದಾರನ ಮೇಲೆ ಪ್ರಭಾವ ಬೀರಿಲ್ಲ. ಉದಾರವಾದಿ ಪ್ರಜಾಪ್ರಭುತ್ವ ಎಂದು ಅಮೆರಿಕ ಎಷ್ಟೇ ಹೇಳಿಕೊಂಡರೂ ದೇಶವು ಮಹಿಳೆಯೊಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಏರಿಸುವ ಮನಃಸ್ಥಿತಿಗೆ ಇನ್ನೂ ತಲುಪಿಲ್ಲ ಎಂಬಂತೆ ಕಾಣಿಸುತ್ತಿದೆ. ವಲಸಿಗರ ಎರಡನೇ ತಲೆಮಾರಿನವರಾದ, ಬಿಳಿಯರಲ್ಲದ ಮಹಿಳೆಯು ಅಧ್ಯಕ್ಷೆಯಾಗಿ ಆಯ್ಕೆಯಾಗುವುದು ಇನ್ನೂ ಕ್ಲಿಷ್ಟಕರ. ಟ್ರಂಪ್ ಅವರ ಗೆಲುವು ಅಮೆರಿಕದ ಆಂತರಿಕ ರಾಜಕಾರಣದಲ್ಲಿ ಪಲ್ಲಟ ಉಂಟುಮಾಡಲಿದೆ. ಜೊತೆಗೆ, ಜಗತ್ತನ್ನು ಈಗ ಕಾಡುತ್ತಿರುವ ಮೂರು ಪ್ರಮುಖ ವಿಷಯಗಳಾದ ಉಕ್ರೇನ್ ಯುದ್ಧ, ಇಸ್ರೇಲ್–ಹಮಾಸ್ ಸಂಘರ್ಷ ಮತ್ತು ಜಾಗತಿಕ ತಾಪಮಾನ ಏರಿಕೆ ವಿರುದ್ಧದ ಹೋರಾಟದ ಮೇಲೆಯೂ ಪರಿಣಾಮ ಉಂಟು ಮಾಡಬಹುದು. ಕಮಲಾ ಹ್ಯಾರಿಸ್ ಗೆಲ್ಲುವುದಕ್ಕಿಂತ ಟ್ರಂಪ್ ಗೆಲ್ಲುವುದೇ ಭಾರತಕ್ಕೆ ಒಳಿತು ಎಂಬ ಭಾವನೆ ಕೆಲವರಲ್ಲಿತ್ತು. ಆದರೆ, ಇದಕ್ಕೆ ಯಾವ ಖಚಿತತೆಯೂ ಇಲ್ಲ. ಭಾರತಕ್ಕೆ ಒಳಿತಾಗಲಿದೆ ಎಂದು ಹೇಳಲು ಪೂರಕವಾದ ನಿದರ್ಶನಗಳು ಟ್ರಂಪ್ ಅವರ ಈ ಹಿಂದಿನ ಅಧ್ಯಕ್ಷ ಅವಧಿಯಲ್ಲಿ ಕಾಣಸಿಗುವುದಿಲ್ಲ. ದೇಶಗಳ ನಡುವಣ ಸಂಬಂಧವು ಅವುಗಳ ಹಿತಾಸಕ್ತಿಗಳು ಮತ್ತು ನೀತಿಯ ಒತ್ತಡಗಳ ಮೇಲೆ ಅವಲಂಬಿತವೇ ವಿನಾ ನಾಯಕರ ನಡುವಣ ವೈಯಕ್ತಿಕ ಸಂಬಂಧದ ಮೇಲೆ ಅಲ್ಲ. ಟ್ರಂಪ್ ಅವರ ವ್ಯಕ್ತಿತ್ವ ಮತ್ತು ನಡವಳಿಕೆಯಲ್ಲಿನ ಅಸ್ಥಿರತೆಯನ್ನು ಊಹಿಸುವುದಕ್ಕೇ ಸಾಧ್ಯವಿಲ್ಲ.

ಹೊಸ ತಂತ್ರಗಳ ಮೂಲಕ ಸೈಬರ್ ಅಪರಾಧಗಳ ಪ್ರಮಾಣ ಹೆಚ್ಚುತ್ತಿದೆ

ಡಿಜಿಟಲ್ ಸುರಕ್ಷತೆ: ಹೊಸ ಯುಗದ ಅಗತ್ಯ



ವಿಶ್ಲೇಷಣೆ

ಎಂ.ಎ.ಸಲೀಂ

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ನಮ್ಮ ನಿತ್ಯದ ಬದುಕಿನ ಬಿಡಿಸಿಕೊಳ್ಳಲಾಗದ ನಂಟನಂತಾಗಿದೆ. ಇದೇ ಕಾರಣಕ್ಕಾಗಿ ಈ ಜಗತ್ತಿನಲ್ಲಿ ಎಲ್ಲರಿಗೂ ಮತ್ತು ಎಲ್ಲಕ್ಕೂ ಒಂದು ಅಂತರ್‌ಸಂಪರ್ಕ ರೂಪುಗೊಂಡಿದೆ. ತಂತ್ರಜ್ಞಾನವು ನಮ್ಮ ಬದುಕನ್ನು ಸರಳಗೊಳಿಸಿದೆ ನಿಜ. ಆದರೆ, ಸೈಬರ್ ಸುರಕ್ಷತೆಗೆ, ದತ್ತಾಂಶಗಳ ಖಾಸಗಿತನಕ್ಕೆ ತಂತ್ರಜ್ಞಾನವು ಸವಾಲಾಗಿಯೂ ಪರಿಣಮಿಸಿದೆ.

ಸೈಬರ್ ಅಪರಾಧಗಳು ಹಿಂದೆಲ್ಲಾ ವಿಜ್ಞಾನ ಕಥೆಗಳ ಅಥವಾ ಸಿನಿಮಾಗಳ ಕಥಾವಸ್ತುಗಳಾಗಿದ್ದವು. ಆದರೆ, ಈಗ ಅವು ನಿತ್ಯದ ಕಥಾನಕಗಳಾಗಿವೆ. ಮಾಹಿತಿ ತಂತ್ರಜ್ಞಾನದ ಬಳಕೆ ಅಧಿಕಗೊಂಡಿದ್ದರಿಂದ ಅಪಾಯವೂ ಅಧಿಕಗೊಂಡಿದೆ. ವ್ಯವಸ್ಥಿತವಾದ, ಆಧುನಿಕವಾದ ಹ್ಯಾಕಿಂಗ್ ಯತ್ನಗಳು ನಡೆಯುತ್ತಲೇ ಇವೆ. ಖಾಸಗಿ ಮಾಹಿತಿಗಳನ್ನು ಕದಿಯುವುದು, ವ್ಯಕ್ತಿಯ ಗುರುತನ್ನು ಕದ್ದು ತಪ್ಪು ಉದ್ದೇಶಗಳಿಗಾಗಿ ಬಳಕೆ ಮಾಡಿಕೊಳ್ಳುವುದು ಹಾಗೂ ಸಂಸ್ಥೆಗಳ ಅಥವಾ ವ್ಯಕ್ತಿಗಳ ಕಂಪ್ಯೂಟರ್ ವ್ಯವಸ್ಥೆಯನ್ನೇ ಹ್ಯಾಕ್ ಮಾಡಿ, ಕುತಂತ್ರಾಂಶಗಳನ್ನು ಅಳವಡಿಸುವುದು ಸರ್ವೇಸಾಮಾನ್ಯ ಎಂಬಂತಾಗಿದೆ.

ಭಾರತೀಯ ಸೈಬರ್ ಅಪರಾಧಗಳ ಸಮನ್ವಯ ಕೇಂದ್ರ ಇತ್ತೀಚೆಗೆ ಅಂಕಿ ಅಂಶವೊಂದನ್ನು ಬಿಡುಗಡೆ ಮಾಡಿದೆ. ಈ ಪ್ರಕಾರ, 2024ರ ಮೇ ತಿಂಗಳೊಂದರಲ್ಲಿಯೇ ಪ್ರತಿನಿತ್ಯ ಸುಮಾರು ಏಳು ಸಾವಿರ ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. 2021ರಿಂದ 2023ರ ನಡುವಿನ ಹೋಲಿಕೆಯಲ್ಲಿ, 2024ರಲ್ಲಿ ಸೈಬರ್ ಅಪರಾಧ ಪ್ರಕರಣಗಳ ಪ್ರಮಾಣವು ಶೇಕಡ 113.7ರಷ್ಟು ಏರಿಕೆಯಾಗಿದೆ. ಹೊಸ ಹೊಸ ತಂತ್ರಗಳ ಮೂಲಕ ಸೈಬರ್ ಅಪರಾಧಗಳ ಸ್ವರೂಪ ಹಾಗೂ ಪ್ರಮಾಣವು ಪ್ರತಿನಿತ್ಯವೂ ಅಧಿಕಗೊಳ್ಳುತ್ತಿದೆ. ಹಣಕಾಸಿನ ವಂಚನೆ, ಅಕ್ರಮ ಕೆಲಸಗಳಿಗೆ ಬೇರೊಬ್ಬರ ಪ್ರೊಫೈಲ್ ಬಳಕೆ, ಹ್ಯಾಕಿಂಗ್ ಹಾಗೂ ಸೈಬರ್ ಬೇಹುಗಾರಿಕೆ– ಇವು ಸೈಬರ್ ಅಪರಾಧಗಳ ಕೆಲವು ವಿಧಗಳು. ಹೂಡಿಕೆ ವಂಚನೆ ಹಾಗೂ ಡಿಜಿಟಲ್ ಅರೆಸ್ಟ್ ಈ ಪಟ್ಟಿಗೆ ಸೇರಿದ ಹೊಸ ಸ್ವರೂಪದ ಸೈಬರ್ ಅಪರಾಧಗಳಾಗಿವೆ. ಈ ಎರಡು ಸ್ವರೂಪದ ಅಪರಾಧಗಳು ಇತ್ತೀಚೆಗೆ ಹೆಚ್ಚು ಸುದ್ದಿಯಲ್ಲಿವೆ.

ಹೂಡಿಕೆ ವಂಚನೆಯ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಈಗ ದಾಖಲಾಗುತ್ತಿವೆ. ಹೂಡಿಕೆಯಲ್ಲಿ ಆಸಕ್ತಿ ಇರುವವರಿಗೆ ಆಮಿಷ ಒಡ್ಡಿ, ಖೊಟ್ಟಿ ಕಂಪನಿಗಳಲ್ಲಿ ಹಣ ಹೂಡುವಂತೆ ಮಾಡಲಾಗುತ್ತದೆ. ಸಾಮಾನ್ಯವಾಗಿ, ಸಾಮಾಜಿಕ ಜಾಲತಾಣಗಳ ಜಾಹೀರಾತಿನ ಮೂಲಕ ಜನರನ್ನು ಸೆಳೆಯಲಾಗುತ್ತದೆ. ಇಲ್ಲವೇ ಆನ್‌ಲೈನ್ ಹೂಡಿಕೆ ಕುರಿತ ಸಲಹೆ ಮತ್ತು ಸೇವೆ ಕಂಪನಿಗಳ ಹೆಸರಿನಲ್ಲಿ ಸಂಪರ್ಕಿಸಲಾಗುತ್ತದೆ. ‘ಈ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಅತಿ ಹೆಚ್ಚು ಲಾಭ ಬರುತ್ತದೆ. ರಾತ್ರೋರಾತ್ರಿ ಶ್ರೀಮಂತರಾಗಬಹುದು’ ಎಂಬಂಥ ಬರಹಗಳು, ವಿಡಿಯೊಗಳು ಮೋಸದ ಜಾಹೀರಾತುಗಳಲ್ಲಿರುತ್ತವೆ. ಜನರಿಗೆ ಆಮಿಷ ಒಡ್ಡುವುದಕ್ಕಾಗಿ ವ್ಯಕ್ತಿಯೊಬ್ಬರು ನಿರ್ದಿಷ್ಟ ಕಂಪನಿಯೊಂದರಲ್ಲಿ ಹೂಡಿಕೆ ಮಾಡಿ ಶ್ರೀಮಂತರಾದ ಕಥೆಗಳು, ಅವರ ಐಷಾರಾಮಿ ಜೀವನ ಶೈಲಿಯನ್ನು ಪ್ರದರ್ಶಿಸುವ ದೃಶ್ಯಗಳು ಇರುತ್ತವೆ.

ಡಿಜಿಟಲ್ ಅರೆಸ್ಟ್ ಪ್ರಕರಣಗಳಲ್ಲಿ, ಕೊರಿಯರ್ ಕಂಪನಿಯೊಂದರ ಪ್ರತಿನಿಧಿ ಎಂದು ಹೇಳಿಕೊಂಡು ಸಂತ್ರಸ್ತರಿಗೆ ವ್ಯಕ್ತಿಯೊಬ್ಬರು ಕರೆ ಮಾಡುತ್ತಾರೆ. ‘ಈ ಕೊರಿಯರ್‌ನಲ್ಲಿ ಅಕ್ರಮವಾದ ಅಥವಾ ಅನುಮಾನಾಸ್ಪದ ವಸ್ತುವೊಂದಿದೆ. ಇದರಲ್ಲಿ ನಿಮ್ಮ ಹೆಸರು ಹಾಗೂ ನಿಮ್ಮ ಮನೆಯ ವಿಳಾಸ ಇದೆ’ ಎಂದು ಹೇಳುತ್ತಾರೆ. ನಂತರ, ಸಿಬಿಐ ಅಥವಾ ಸಿಐಡಿಯಂಥ ತನಿಖಾ ಸಂಸ್ಥೆಗಳ ಉನ್ನತ ಅಧಿಕಾರಿ ಎಂದು ಹೇಳಿಕೊಂಡು ಮತ್ತೊಬ್ಬ ವ್ಯಕ್ತಿ ಕರೆ ಮಾಡುತ್ತಾರೆ. ‘ತನಿಖೆಗೆ ಸಹಕರಿಸದಿದ್ದರೆ ನಿಮ್ಮನ್ನು ಬಂಧಿಸಲಾಗುವುದು’ ಎಂದು ಬೆದರಿಸಲಾಗುತ್ತದೆ. ‘ದಂಡ’ ಅಥವಾ ‘ಭದ್ರತಾ ಠೇವಣಿ’ ಹೆಸರಿನಲ್ಲಿ ನಿರ್ದಿಷ್ಟ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುವಂತೆ ಒತ್ತಡ ಹೇರಲಾಗುತ್ತದೆ. ಇಡೀ ಪ್ರಕ್ರಿಯೆಯನ್ನು ವಿಡಿಯೊ ಕರೆಯಲ್ಲಿ ಇದ್ದುಕೊಂಡೇ ಮಾಡಲಾಗುತ್ತದೆ. ಸಂತ್ರಸ್ತರನ್ನು ತಮ್ಮ ನಿಯಂತ್ರಣದಲ್ಲಿ ಇರಿಸಿಕೊಳ್ಳಲು ವಂಚಕರು ಈ ವಿಧಾನ ಅನುಸರಿಸುತ್ತಾರೆ.

ಈ ಎಲ್ಲ ಸ್ವರೂಪದ ವಂಚನೆಗಳು ಆನ್‌ಲೈನ್ ಮೂಲಕವೇ ನಡೆಯುವುದರಿಂದ ವಂಚಕರಿಗೆ ಭೌಗೋಳಿಕ ಎಲ್ಲೆಗಳಿಲ್ಲ. ಬೇರೆ ಬೇರೆ ದೇಶಗಳಲ್ಲಿ ಕೂತು ಇಂಥ ವಂಚನೆಗಳನ್ನು ಎಸಗುವುದರಿಂದ ವಂಚಕರನ್ನು ಪತ್ತೆ ಮಾಡುವುದು ಅತ್ಯಂತ ಕಷ್ಟಕರವಾಗುತ್ತದೆ. ಸಾಮಾನ್ಯವಾಗಿ ವಿದ್ಯಾವಂತರು, ಉದ್ಯೋಗಸ್ಥರೇ ಸೈಬರ್ ಅಪರಾಧಗಳ ಸಂತ್ರಸ್ತರಾಗಿರುತ್ತಾರೆ. ಸಂತ್ರಸ್ತರ ವೈಯಕ್ತಿಕ ಮಾಹಿತಿಯು ವಂಚಕರಿಗೆ ದೊರೆಯುತ್ತಿರುವುದೇ ಡಿಜಿಟಲ್ ಅರೆಸ್ಟ್ ಅಥವಾ ಹೂಡಿಕೆ ವಂಚನೆ ಪ್ರಕರಣಗಳು ಏರಿಕೆಯಾಗಲು ಬಹುಮುಖ್ಯ ಕಾರಣ. ಬೆದರಿಕೆ ಏನು, ಅದರಿಂದ ಹೇಗೆ ರಕ್ಷಣೆ ಪಡೆದುಕೊಳ್ಳುವುದು, ಅದಕ್ಕಾಗಿ ಯಾವೆಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳಬೇಕಿದೆ. ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿ ಚಟುವಟಿಕೆ ನಡೆಸುವ ಅಭ್ಯಾಸ ಬೆಳೆಸಿಕೊಳ್ಳುವುದು ಕೂಡ ಮುಖ್ಯವಾಗುತ್ತದೆ.

ಭಾರತದಲ್ಲಿ ಸೈಬರ್ ಅಪರಾಧಗಳ ಕುರಿತು ದೂರು ನೀಡುವುದಕ್ಕೆ ವ್ಯವಸ್ಥೆ ಇದೆ. ಭಾರತೀಯ ಸೈಬರ್ ಅಪರಾಧ ದೂರು ಪೋರ್ಟಲ್‌ನಲ್ಲಿ (cybercrime.gov.in) ದಿನದ 24 ಗಂಟೆಯೂ ದೂರು ದಾಖಲಿಸಲು ಅವಕಾಶವಿದೆ. ಹೂಡಿಕೆ ವಂಚನೆಯಂಥ ಪ್ರಕರಣಗಳಲ್ಲಿ ತಕ್ಷಣದ ಪ್ರತಿಕ್ರಿಯೆಗಾಗಿ ರಾಷ್ಟ್ರೀಯ ಸೈಬರ್ ಅಪರಾಧಗಳ ಸಹಾಯವಾಣಿ ‘1930’ ಸಂಖ್ಯೆಗೆ ಕರೆ ಮಾಡಬಹುದಾಗಿದೆ. ವಂಚನೆಗೆ ಒಳಗಾಗಿದ್ದು ತಿಳಿದ ತಕ್ಷಣವೇ ಈ ಸಹಾಯವಾಣಿಗೆ ಕರೆ ಮಾಡಿದರೆ, ಹಣ ವರ್ಗಾವಣೆ ಆಗುವುದನ್ನು ಅಧಿಕಾರಿಗಳು ತಡೆಯುತ್ತಾರೆ.



ಸ್ಥಳೀಯ ಪೊಲೀಸ್ ಠಾಣೆ ಅಥವಾ ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿಯೂ ಸಾರ್ವಜನಿಕರು ದೂರು ದಾಖಲಿಸಬಹುದು. ದೂರು ದಾಖಲಿಸುವ ವೇಳೆ ಎಲ್ಲ ರೀತಿ ಸಾಕ್ಷ್ಯಗಳು ಮತ್ತು ದಾಖಲೆಗಳು ಇರಬೇಕಾಗುತ್ತದೆ. ಹೂಡಿಕೆ ವಂಚನೆಯಂಥ ಪ್ರಕರಣಗಳಲ್ಲಿ ವಂಚನೆಗೆ ಒಳಗಾಗಿದ್ದು ತಿಳಿದ ತಕ್ಷಣವೇ ದೂರು ದಾಖಲಿಸಿದರೆ, ವಂಚಕರನ್ನು ಪತ್ತೆ ಮಾಡುವುದು, ಕಳೆದುಕೊಂಡ ಹಣವನ್ನು ಮರಳಿ ಪಡೆಯುವುದು ಸುಲಭವಾಗುತ್ತದೆ.

ಸೈಬರ್ ಹಾಗೂ ದತ್ತಾಂಶ ಸುರಕ್ಷತೆಯನ್ನು ಖಾತರಿ ಮಾಡಿಕೊಳ್ಳಲು ಕೆಲವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವುಗಳು ಹೀಗಿವೆ:

ಶಕ್ತಿಯುತ, ವಿಶಿಷ್ಟ ಪಾಸ್‌ವರ್ಡ್‌ಗಳನ್ನು ಬಳಸಬೇಕಾಗುತ್ತದೆ. ಹುಟ್ಟಿದ ದಿನಾಂಕ, ಹೆಸರುಗಳು ಅಥವಾ ಸುಲಭವಾಗಿ ಊಹಿಸಬಹುದಾದ ಪಾಸ್‌ವರ್ಡ್‌ಗಳನ್ನು ಇಟ್ಟುಕೊಳ್ಳಬಾರದು. ಸಂಖ್ಯೆಗಳು, %, # ಅಥವಾ @ ಚಿಹ್ನೆಗಳನ್ನು ತಮ್ಮ ಪಾಸ್‌ವರ್ಡ್‌ಗಳಲ್ಲಿ ಬಳಸಿಕೊಳ್ಳಬೇಕು.


ಹಲವು ಸ್ತರಗಳಲ್ಲಿ ದೃಢೀಕರಣಗೊಳ್ಳುವ ‘ಮಲ್ಟಿ ಫ್ಯಾಕ್ಟರ್ ಅಥೆಂಟಿಕೇಷನ್’ (ಎಂಎಫ್‌ಎ) ಅನ್ನು ಸಕ್ರಿಯಗೊಳಿಸಿಕೊಳ್ಳಬೇಕು. ಜಾಲತಾಣಗಳಲ್ಲಿನ ಖಾತೆಗಳನ್ನು ಹಲವು ಹಂತಗಳಲ್ಲಿ ಭದ್ರತೆಗೆ ಒಳಪಡಿಸುವ ವ್ಯವಸ್ಥೆ ಇದಾಗಿದೆ. ಈ ವ್ಯವಸ್ಥೆಯನ್ನು ಸಕ್ರಿಯಗೊಳಿಸಿಕೊಳ್ಳುವುದು ಕೆಲವೇ ನಿಮಿಷಗಳ ಕೆಲಸ. ಪರಿಶೀಲಿಸಿ ಸ್ಪಷ್ಟಪಡಿಸಿಕೊಳ್ಳಲು (ವೆರಿಫಿಕೇಷನ್) ಒಟಿಪಿ ಸಂಖ್ಯೆಯೊಂದು ನಿಮ್ಮ ಮೊಬೈಲ್‌ಗೆ ಬರುತ್ತದೆ. ಮೊಬೈಲ್ ಅಥವಾ ಕಂಪ್ಯೂಟರ್‌ಗಳಲ್ಲಿನ ಸಾಫ್ಟ್‌ವೇರ್‌ಗಳು, ಆ್ಯಪ್‌ಗಳನ್ನು ನಿಗದಿತವಾಗಿ ಅಪ್‌ಡೇಟ್ ಮಾಡಿಕೊಳ್ಳಬೇಕು. ಹೀಗೆ ಅಪ್‌ಡೇಟ್ ಮಾಡಿಕೊಳ್ಳುವುದರಿಂದ ಸಾಫ್ಟ್‌ವೇರ್‌ನಲ್ಲಿರುವ ಬಗ್‌ಗಳು, ದೋಷಗಳು ನಿವಾರಣೆಯಾಗುತ್ತವೆ. ಆ ಮೂಲಕ ಭದ್ರತೆಯೂ ಹೆಚ್ಚುತ್ತದೆ.

ಅನುಮಾನಾಸ್ಪದವಾದ ಇ–ಮೇಲ್‌ಗಳು, ಲಿಂಕ್‌ಗಳು ಹಾಗೂ ಅಟ್ಯಾಚ್‌ಮೆಂಟ್‌ಗಳ ಬಗ್ಗೆ ಎಚ್ಚರ ವಹಿಸಿ. ನಿಮ್ಮನ್ನು ಸಿಲುಕಿಸಲು ಇವುಗಳಲ್ಲಿ ಕುತಂತ್ರಾಂಶಗಳನ್ನು ಅಳವಡಿಸಲಾಗಿರುತ್ತದೆ. ಇವು ನಿಮ್ಮ ವೈಯಕ್ತಿಕ ಮಾಹಿತಿ ಬಹಿರಂಗಪಡಿಸುತ್ತವೆ ಮತ್ತು ಸಾಫ್ಟ್‌ವೇರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಪ್ರೇರೇಪಿಸುತ್ತವೆ. ಈ ಮೂಲಕ ನಿಮ್ಮ ಖಾಸಗಿ ಮಾಹಿತಿ ಕದಿಯಲಾಗುತ್ತದೆ ಅಥವಾ ಬಳಸಿಕೊಳ್ಳಲಾಗುತ್ತದೆ. ಇದನ್ನು ತಡೆಯುವುದಕ್ಕಾಗಿ ಪರಿಣಾಮಕಾರಿ ಆ್ಯಂಟಿವೈರಸ್ ಸಾಫ್ಟ್‌ವೇರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.

ಹಣಕಾಸಿಗೆ ಸಂಬಂಧಿಸಿದ ಹಾಗೂ ಖಾಸಗಿ ದಾಖಲೆಗಳನ್ನು ಎನ್‌ಕ್ರಿಪ್ಟ್ ಮಾಡಿಟ್ಟುಕೊಳ್ಳಬೇಕು. ಹೀಗೆ ಮಾಡಿದರೆ, ನಿಮ್ಮನ್ನು ಬಿಟ್ಟು ಬೇರೆಯವರು ನಿಮ್ಮ ದಾಖಲೆಗಳನ್ನು ಬಳಸಲು ಸಾಧ್ಯವಿಲ್ಲ. ಸೈಬರ್ ದಾಳಿಯಂಥ ಸಂದರ್ಭದಲ್ಲಿ ದತ್ತಾಂಶಗಳು ನಾಶವಾಗಿಬಿಡುವ ಅಪಾಯ ಇರುತ್ತದೆ. ಆದ್ದರಿಂದ ನಿಯಮಿತವಾಗಿ ದತ್ತಾಂಶಗಳನ್ನು ಬ್ಯಾಕ್‌ಅಪ್ ಮಾಡಿಟ್ಟುಕೊಳ್ಳಬೇಕು. ಹೊಸ ಹೊಸ ಸ್ವರೂಪದ ಸೈಬರ್ ಅಪರಾಧಗಳ ಕುರಿತು ತಿಳಿದುಕೊಳ್ಳಬೇಕು. ಆಗ ವಂಚನೆಗೆ ಒಳಗಾಗುವುದರಿಂದ ತಪ್ಪಿಸಿಕೊಳ್ಳಬಹುದಾಗಿದೆ.

ಲೇಖಕ: ಪೊಲೀಸ್ ಮಹಾನಿರ್ದೇಶಕ
ಆರ್ಥಿಕ ಅಪರಾಧಗಳ ವಿಭಾಗ, ಸಿಐಡಿ

ಚುರುಮುರಿ



ಉಲ್ಟಾ ಪಲ್ಟಾ!

• ಬಿ.ಎನ್.ಮಲ್ಲೇಶ್

‘ಯಾಕೋ ಕಮಲ ಅನ್ನೋ ಹೆಸರಿಗೆ ಈ ವರ್ಷ ಏಳ್ಗೆ ಇಲ್ಲ ಕಣ್ರಲೆ’ ಎಂದ ಗುಡ್ಡೆ.

‘ಅದೆಂಗೆ ಹೇಳ್ತೀಯ?’ ಕೊಟ್ರೇಶಿ ಕೊಕ್ಕೆ.

‘ಮ್ಯಾಲೇ ಗೊತ್ತಾಗಲ್ವಾ? ಭಾರತದಲ್ಲಿ ಕಮಲ ಪಕ್ಷಕ್ಕೆ ಬಹುಮತ ಬರ್ಲಿಲ್ಲ, ಅಮೆರಿಕದಲ್ಲಿ ಕಮಲಾ ಹ್ಯಾರಿಸ್‌ಗೆ ಗೆಲುವು ಸಿಗ್ಲಿಲ್ಲ...’

‘ಹೋಗ್ಲಿ ಬಿಡು, ಟ್ರಂಪು ನಮ್ ಕಮಲಕ್ಕನ್ನ ಸೋಲಿಸಿದ್ರೂ ಭಾರತದ ಪರ ಅದಾನಂತೆ’ ತೆಪರೇಸಿ ಸಮಾಧಾನಿಸಿದ.

‘ಅಲ್ಲ, ನಮ್ ಕಮಲಕ್ಕನ ಪರ ಒಬಾಮ, ಬೈಡನ್ನು ಎಲ್ಲ ಇದ್ರೂ ರಿಸಲ್ಟ್ ಉಲ್ಟಾ ಆಗೋತಲ್ಲ’ ದುಬ್ಬೀರನಿಗೆ ಆಶ್ಚರ್ಯ.

‘ಅದಕ್ಕೆ ‘ಗುಂಡು’ ಕಾರಣ’.

‘ಗುಂಡಾ?’ ಗುಡ್ಡೆ ದೊಡ್ಡದಾಗಿ ಬಾಯಿ ಬಿಟ್ಟ.

‘ಬಾಯಿ ಮುಚ್ಕಾ, ಗುಂಡು ಅಂದ್ರೆ ನೀನು ಏರಿಸೋ ಗುಂಡಲ್ಲ, ಟ್ರಂಪ್ ಮೇಲೆ ಹಾರಿಸಿದ ಗುಂಡು’.

‘ಓ... ಅದಾ, ಅದ್ಕೇ ಜನರಿಗೆ ಸಿಂಪಥಿ ಬಂದಿರಬೇಕು. ವಿಚಿತ್ರ ನೋಡು, ಅಲ್ಲಿ ಗುಂಡು ಹೊಡೆಸ್ಕಂಡು ಗೆಲ್ತಾರೆ, ನಮ್ಮಲ್ಲಿ ಜನರಿಗೆ ಗುಂಡು ಹಾಕಿಸಿ ಗೆಲ್ತಾರೆ. ಎಲ್ಲಾ ಉಲ್ಟಾ ಪಲ್ಟಾ’ ತೆಪರೇಸಿ ನಕ್ಕ.

‘ಲೇ ಗುಡ್ಡೆ, ನಮ್ ಅಬ್ಕಾರಿ ಮಂದಿ ತಿನ್ನೋದು ಜಾಸ್ತಿ ಆಗೇತಂತೆ. ಅದ್ಕೆ ಬಾರ್ ಬಂದ್ ಮಾಡ್ತಾರಂತೆ, ಗುಂಡು ಸ್ಟಾಕ್ ಮಾಡ್ಕಾ’ ಎಂದ ಕೊಟ್ರೇಶಿ.

‘ಅಲ್ಲ, ಅಬ್ಕಾರಿ ಅಂದ್ರೆ ಕುಡಿಯೋದು, ಈಗ ತಿನ್ನೋಕೆ ಶುರು ಮಾಡಿದಾರಾ? ಉಲ್ಟಾ ಪಲ್ಟಾ!’

‘ಎಲ್ರೂ ಸೋತ ಮೇಲೆ ಕಣ್ಣೀರು ಹಾಕ್ತಾರೆ. ನಮ್ ಚನ್ನಪಟ್ಟಣದಲ್ಲಿ ಸೋಲಬಾರದು ಅಂತ ಮೊದ್ಲೇ ಕಣ್ಣೀರಾಕ್ತದಾರಂತೆ, ಎಲ್ಲಾ ಉಲ್ಟಾ ಪಲ್ಟಾ!’ ದುಬ್ಬೀರ ತಾನೂ ಒಂದು ಸೇರಿಸಿದ.

‘ಅಲ್ಲ, ವಿಚಾರಣೆ ಅಂದ್ರೆ ಎಲ್ರೂ ಹೆದರ್ತಾರೆ. ಆದ್ರೆ ಮೊನ್ನೆ ನಮ್ ಸಿಎಂ ಸಾಹೇಬ್ರು ಲೋಕಾಯುಕ್ತ ವಿಚಾರಣೆಗೆ ಹೋದ್ರಲ್ಲ, ಅಧಿಕಾರಿಗಳಿಗೆ ‘ನಾನು ಸಿಎಂ ಅಂತ ಹೆದರ್ಕಾಬೇಡಿ, ಧೈರ್ಯವಾಗಿ ಪ್ರಶ್ನೆ ಕೇಳಿ’ ಅಂದ್ರಂತೆ, ಇದೆಂಗೆ?’

‘ಇದೂ ಉಲ್ಟಾ ಪಲ್ಟಾ!’

ದಿನದ ಟ್ವೀಟ್

ಶಬ್ದಮಾಲಿನ್ಯ ತಗ್ಗಲಿ

ಮಡಿಕೇರಿಯಲ್ಲಿ ಮಾತ್ರವಲ್ಲ, ನಮ್ಮ ಬೆಂಗಳೂರಿನಲ್ಲೂ ಇದೇ ಕತೆ! ಇಡೀ ಕರ್ನಾಟಕದಲ್ಲಿ ಖಂಡಿತವಾಗಿಯೂ ಇಂತಹದೇ ಸ್ಥಿತಿ ಇರುತ್ತದೆ. ಶಬ್ದಮಾಲಿನ್ಯದ ಮೇಲೆ ಯಾವ ನಿಯಂತ್ರಣವೂ ಇಲ್ಲವೇ? ತ್ಯಾಜ್ಯ ಸಂಗ್ರಹ ವಾಹನಗಳಲ್ಲಿ ಅಬ್ಬರದ ಸಂಗೀತಕ್ಕೆ ಬದಲು ಉತ್ತಮ ಪರ್ಯಾಯ ಮಾರ್ಗಗಳನ್ನು ಅಳವಡಿಸಿಕೊಳ್ಳಬಾರದೇಕೆ?

(ಮಡಿಕೇರಿಯಲ್ಲಿ ತ್ಯಾಜ್ಯ ಸಂಗ್ರಹ ವಾಹನಗಳು ಮಾಲಿನ್ಯ ವಿರೋಧಿ ಸಂದೇಶಗಳನ್ನು ಅಬ್ಬರದ ಸಂಗೀತದೊಂದಿಗೆ ಬಿತ್ತರಿಸುತ್ತಾ ಶಬ್ದಮಾಲಿನ್ಯ ಉಂಟು ಮಾಡುತ್ತಿವೆ ಎಂಬ ಟೀಕೆಗೆ ಪ್ರತಿಕ್ರಿಯೆ)

ಶ್ರೀಧರ್ ಪ್ರಭು

ಕಿಡಿನುಡಿ



ನಾಗರಿಕ ಪ್ರಜ್ಞೆ ಇಲ್ಲದ ಮತ್ತು ಸಂಸ್ಕೃತಿಯ ಬಗ್ಗೆ ಅರಿವಿಲ್ಲದ ಇಂತಹ ನಂಬಿಕೆಯೇ ಬಿಹಾರವನ್ನು ಪ್ರಪಂಚ ಈಗ ಇರುವುದಕ್ಕಿಂತ ನೂರು ವರ್ಷಗಳಷ್ಟು ಹಿಂದೆ ಉಳಿಯುವಂತೆ ಮಾಡಿದೆ. ಘನವಾದ ಬೇರೆ ಮಾರ್ಗದಲ್ಲಿ ಛಠ್ ಪೂಜೆಯನ್ನು ಆಚರಿಸಬಹುದಿತ್ತು.

(ಛಠ್ ಪೂಜೆ ಪ್ರಯುಕ್ತ ಮಹಿಳೆಯರು, ಯಮುನಾ ನದಿಯ ಮಲಿನ ನೀರಿನಲ್ಲಿ ತೇಲಿ ಬರುವ ನೊರೆಯನ್ನು ಶ್ಯಾಂಪೂವಿನಂತೆ ಬಳಸಿ ತಲೆ ತೊಳೆದುಕೊಳ್ಳುತ್ತಾ ‘ಪವಿತ್ರ ಸ್ನಾನ’ ಮಾಡುತ್ತಿರುವ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

ಪಲಾಶ್ ಜೈನ್, ಚಾರ್ಟರ್ಡ್ ಅಕೌಂಟೆಂಟ್

25 ವರ್ಷಗಳ ಹಿಂದೆ

ಸೋಮವಾರ, 8-11-1999

• ಉರಿದ ಪಟಾಕಿ ಅಂಗಡಿಗಳು ದೇಶದಾದ್ಯಂತ 53 ಜನ ಬಲಿ

ನವದೆಹಲಿ, ನ. 7 (ಪಿಟಿಐ)– ಬೆಳಕಿನ ಹಬ್ಬವಾದ ದೀಪಾವಳಿ ದೇಶದಾದ್ಯಂತ ಸಂಭ್ರಮ ಸಡಗರದಿಂದ ನಡೆಯಿತಾದರೂ ಬೆಂಕಿಯ ದುರಂತಗಳು ಬಿಟ್ಟ ಕರಿನೆರಳಿನಲ್ಲಿ 53 ಜನ ಪ್ರಾಣ ಕಳೆದುಕೊಂಡರು.

ಹರಿಯಾಣದ ಸೋನೆಪತ್‌ನ ಪಟಾಕಿ ಮಾರುಕಟ್ಟೆಯಲ್ಲಿ ನಿನ್ನೆ ರಾತ್ರಿ ಅಗ್ನಿ ದುರಂತ 44 ಜನರನ್ನು ಬಲಿ ತೆಗೆದುಕೊಂಡರೆ, ಅಮೃತಸರದಲ್ಲಿ ನಿನ್ನೆ ಸಂಜೆಯ ಬೆಂಕಿ ಒಂದು ನೂರು ಪಟಾಕಿ ಅಂಗಡಿಗಳಿಗೆ ನಾಲಗೆ ಚಾಚಿ, ಒಬ್ಬನನ್ನು ಬಲಿ ತೆಗೆದುಕೊಂಡಿತು. ಗ್ವಾಲಿಯರ್‌ಗೆ ಸಮೀಪದ ದಬ್ರಾ ಪಟ್ಟಣದ ಪಟಾಕಿ ಕಾರ್ಖಾನೆಯ ಗೋದಾಮಿನಲ್ಲಿ ನಿನ್ನೆ ಮಧ್ಯಾಹ್ನ ನಡೆದ ಸ್ಫೋಟದಿಂದಾಗಿ ಎಂಟು ಜನ ಪ್ರಾಣಬಿಟ್ಟರು.

• ‘ಧಾರ್ಮಿಕ ನಿಷ್ಠೆ ನಿಯಂತ್ರಣ ಹಕ್ಕು ಯಾರಿಗೂ ಇಲ್ಲ’

ನವದೆಹಲಿ, ನ. 7 (ಪಿಟಿಐ)– ಧರ್ಮ ಎನ್ನುವುದು ವ್ಯಕ್ತಿಯ ಅಂತಃಸಾಕ್ಷಿಗೆ ಸಂಬಂಧಿಸಿದ ವಿಚಾರ. ಧಾರ್ಮಿಕ ಸ್ವಾತಂತ್ರ್ಯ ಮಾನವ ಹಕ್ಕುಗಳ ಹೃದಯವಿದ್ದಂತೆ. ಯಾವುದೇ ‘ಗುಂಪಿಗೂ’ ಯಾರೊಬ್ಬರ ಧಾರ್ಮಿಕ ನಿಷ್ಠೆಯನ್ನು ನಿಯಂತ್ರಿಸುವ ಹಕ್ಕಿಲ್ಲ ಎಂದು ಹೇಳುವುದರ ಮೂಲಕ ಪೋಪ್ ಜಾನ್ ಪಾಲ್ ಅವರು ಸಂಘ ಪರಿವಾರದ ಮೇಲೆ ಪರೋಕ್ಷವಾಗಿ ದಾಳಿ ನಡೆಸಿದರು.

ತಮ್ಮ ಎರಡು ದಿನಗಳ ಭಾರತ ಭೇಟಿಯ ಕೊನೆಯ ದಿನ ಅಂತರ್ ಧಾರ್ಮಿಕ ಸಮಾವೇಶ ಉದ್ದೇಶಿಸಿ ಮಾತನಾಡಿದ ಪೋಪ್, ಸಂಘ ಪರಿವಾರದ ಹೆಸರನ್ನು ಹೇಳಲಿಲ್ಲ. ಆದರೆ, ಅವರ ಆಕ್ರಮಣ ನಡೆದಿದ್ದು ಸಂಘ ಪರಿವಾರದ ಮೇಲೆಯೇ.

50 ವರ್ಷಗಳ ಹಿಂದೆ

ಶುಕ್ರವಾರ, 8-11-1974

• ಸಣ್ಣ ಕೈಗಾರಿಕೆ ಖೋಟಾ ಘಟಕ ನಿರ್ಮೂಲಕ್ಕೆ ಕ್ರಮ

ನವದೆಹಲಿ, ನ. 7– ಸಣ್ಣ ಕೈಗಾರಿಕೆ ವಿಭಾಗದಲ್ಲಿ ಖೋಟಾ ಘಟಕಗಳನ್ನು ನಿರ್ಮೂಲನ ಮಾಡುವ ನಿರ್ಧಾರವನ್ನು ಕೇಂದ್ರ ಉದ್ಯಮ ಮತ್ತು ನಾಗರಿಕ ಪೂರೈಕೆ ಸಚಿವ ಟಿ.ಎ. ಪೈ ಇಂದು ವ್ಯಕ್ತಪಡಿಸಿದರು.

ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂಡಳಿಯನ್ನು ಇಲ್ಲಿ ಉದ್ಘಾಟಿಸಿದ ಅವರು, ಭಾರಿ ಉದ್ಯಮಗಳು ಸಣ್ಣ ಪ್ರಮಾಣದ ಕೈಗಾರಿಕೆ ಕ್ಷೇತ್ರದಲ್ಲಿ ನುಗ್ಗುವುದರ ಮೂಲಕ ಸಣ್ಣ ಕೈಗಾರಿಕೋದ್ಯಮದ ಅಭಿವೃದ್ಧಿಗೆ ಭಾರಿ ಅಪಾಯ ಉಂಟು ಮಾಡುತ್ತಿವೆ ಎಂದರು.

• ಬಿಹಾರ ರೀತಿ ಚಳವಳಿ ವಿರುದ್ಧ ಮಿರ್ಧಾ ಎಚ್ಚರಿಕೆ

ಬೆಂಗಳೂರು, ನ. 7– ಬಿಹಾರದ ಚಳವಳಿ ಜನತಂತ್ರ ವಿರೋಧಿ ಕ್ರಮವಾಗಿದ್ದು, ಅದು ಯಶಸ್ವಿಯಾಗಲು ಬಿಟ್ಟರೆ ಪ್ರಜಾಪ್ರಭುತ್ವ ನುಚ್ಚುನೂರಾದೀತು ಎಂದು ಕೇಂದ್ರ ರಕ್ಷಣಾ ಉತ್ಪಾದನಾ ಸಚಿವ ಶ್ರೀ ರಾಮನಿವಾಸ ಮಿರ್ಧಾ ಅವರು ಇಂದು ಇಲ್ಲಿ ಎಚ್ಚರಿಕೆ ನೀಡಿದರು.

ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಂಗತ

ಬೆಳಗಲಿ ಮನದ ದೀಪ

ನಮ್ಮ ಮನಸ್ಸಿನೊಳಗಿನ ಜಾತೀಯತೆಯ ಕೊಳೆಯನ್ನು ತೊಳೆಯಲು, ಶ್ರೇಷ್ಠತೆಯ ವ್ಯಸನದ ಕತ್ತಲನ್ನು ತೊಡೆಯಲು ಸಣ್ಣ ಪ್ರಯತ್ನವನ್ನಾದರೂ ಮಾಡಿದ್ದೇವೆಯೇ?

• ದೀಪಾ ಹಿರೇಗುತ್ತಿ

ಕೊಪ್ಪಳ ಜಿಲ್ಲೆಯ ಹಲಿಗೇರಿ ಗ್ರಾಮದಲ್ಲಿ, ಮನೆಯ ಪಕ್ಕದಲ್ಲಿರುವ ಕ್ಷೌರದಂಗಡಿಯಲ್ಲಿ ಪರಿಶಿಷ್ಟರಿಗೆ ಕ್ಷೌರ ಮಾಡಿದರೆ ಮೈಲಿಗೆಯಾಗುತ್ತದೆ ಎಂಬ ಕಾರಣದಿಂದ ಕ್ಷೌರದಂಗಡಿಗಳನ್ನೇ ಮುಚ್ಚಲಾಯಿತು ಎಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ಬೇಸರವೆನಿಸಿತು. ಪರಿಶಿಷ್ಟರಿಗೆ ಕ್ಷೌರ ಮಾಡಲು ತಮ್ಮ ಅಭ್ಯಂತರವಿಲ್ಲ, ಆದರೆ ಮನೆಯ ಪಕ್ಕದಲ್ಲೇ ಅಂಗಡಿ ಇರುವುದರಿಂದ ತೊಂದರೆಯಾಗುತ್ತಿದೆ, ಗ್ರಾಮ ಪಂಚಾಯಿತಿ ಪ್ರತ್ಯೇಕ ಜಾಗ ಕೊಟ್ಟರೆ ಮಾಡುತ್ತೇವೆ ಎಂದು ಕ್ಷೌರಿಕರು ಹೇಳಿದ್ದಾರೆ.

ಸರಿ, ಮನೆಯ ಪಕ್ಕದಲ್ಲಿ ಕ್ಷೌರ ಮಾಡಲು ತೊಂದರೆ ಆಗುತ್ತದೆ, ಬೇರೆ ಜಾಗ ಕೊಡಿ ಅಂದರೆ ತಪ್ಪೇನಿಲ್ಲ. ಆದರೆ ಇಲ್ಲಿ ಅವರಿಗೆ ತೊಂದರೆಯಾಗುತ್ತಿರುವುದು ಪರಿಶಿಷ್ಟರು ಮನೆಯ ಹತ್ತಿರ ಬರುವುದರಿಂದ! ಅರೆ, ಪರಿಶಿಷ್ಟರಲ್ಲದವರಿಗೆ ಮನೆಯ ಪಕ್ಕವೇ ಕ್ಷೌರ ಮಾಡಿದಾಗ ಆಗದ ಸಮಸ್ಯೆ ಪರಿಶಿಷ್ಟರಿಗೆ ಮಾಡಿದಾಗ ಮಾತ್ರ ಆಗುವುದು ಹೇಗೆ?

ಇದೇ ಜಿಲ್ಲೆಯಲ್ಲಿ ಮೂರು ವರ್ಷಗಳ ಹಿಂದಷ್ಟೇ ಎರಡು ವರ್ಷದ ಮಗು ದೇವಸ್ಥಾನದೊಳಗೆ ಪ್ರವೇಶಿಸಿದ್ದಕ್ಕೆ ಅಪ್ಪನಿಗೆ ಇಪ್ಪತ್ತೈದು ಸಾವಿರ ರೂಪಾಯಿ ದಂಡ ಹಾಕಲಾಗಿತ್ತು! ಹಿಂದಿನ ಆಗಸ್ಟ್‌ನಲ್ಲಿ, ಪರಿಶಿಷ್ಟ ಜಾತಿಗೆ ಸೇರಿದ ಇಪ್ಪತ್ತೊಂದು ವರ್ಷದ ಒಬ್ಬ ಮಹಿಳೆಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದ ಗಂಡನ ಮನೆಯವರೇ ಸಾಯಿಸಿದ್ದರು! ಅವಳಿಗೆ ಪ್ರಾಣಿಗಳೂ ವಾಸಿಸಲು ಆಗದಂತಹ ಶೆಡ್ ಒಂದನ್ನು ಉಳಿಯಲು ನೀಡಲಾಗಿತ್ತು. ಅವಳು ಮಾಡಿದ ಅಡುಗೆಯನ್ನು ಅತ್ತೆ, ಮಾವ ತಿನ್ನುತ್ತಿರಲಿಲ್ಲವಾದ್ದರಿಂದ ಆಕೆ ಅಡುಗೆಯನ್ನೂ ಬೇರೆಯಾಗಿಯೇ ಮಾಡಿಕೊಂಡು ತಿನ್ನಬೇಕಿತ್ತು.

‘ಅವಳನ್ನು ನಮ್ಮ ಜಾತಿಗೆ ಸೇರಿಸಿಕೊಳ್ಳುತ್ತೇವೆ, ನಂತರ ಆಕೆ ನಿಮ್ಮ ಸಂಪರ್ಕ ಮಾಡುವಂತಿಲ್ಲ’ ಎಂದು ಆಕೆಯ ತವರು ಮನೆಯವರಿಗೆ ಹೇಳಲಾಗಿತ್ತು. ಐದೇ ಕಿಲೊಮೀಟರ್ ದೂರದಲ್ಲಿರುವ ಅಜ್ಜಿಯನ್ನೂ ಭೇಟಿ ಮಾಡಲು ಆ ಹುಡುಗಿಗೆ ಅವಕಾಶ ನೀಡಿರಲಿಲ್ಲ. ಅಪ್ಪ– ಅಮ್ಮ ಬಂದಾಗಲೂ ಬಲವಂತದಿಂದ ಹೊರಕಳಿಸಲಾಗಿತ್ತು.

ವಿದ್ಯಾಕಾಶಿ ಧಾರವಾಡದ ಕುಂದಗೋಳ ತಾಲ್ಲೂಕಿನ ರೊಟ್ಟಿಗವಾಡ ಗ್ರಾಮದ ಯುವಕರು ಹಿಂದಿನ ವರ್ಷದ ಡಿಸೆಂಬರ್‌ನಲ್ಲಿ ಪ್ರತಿಭಟನೆ ಮಾಡಿದರು. ಕಾರಣವೇನೆಂದರೆ, ಅಲ್ಲಿನ ಕ್ಷೌರಿಕರು ಅವರಿಗೆ ಕ್ಷೌರ ಮಾಡುತ್ತಿರಲಿಲ್ಲ, ಮಾಡಲೇಬೇಕು ಎಂದರೆ ಐನೂರು ರೂಪಾಯಿ ವಸೂಲಿ ಮಾಡುತ್ತಿದ್ದರು. ಅಷ್ಟೇ ಅಲ್ಲ, ಕೆಲವು ಹೋಟೆಲುಗಳಲ್ಲಿ ಕುರ್ಚಿಯ ಬದಲು ಮೆಟ್ಟಿಲುಗಳ ಮೇಲೆ ಕೂರಲು ಹೇಳುತ್ತಾರೆಂದೂ ಆ ಯುವಕರು ದೂರಿದ್ದರು.

ದೊಡ್ಡಬಳ್ಳಾಪುರದ ಪರಿಶಿಷ್ಟ ಸಮುದಾಯದ ಯುವಕನೊಬ್ಬ ಫೆಬ್ರುವರಿಯಲ್ಲಿ ಪೊಲೀಸ್ ರಕ್ಷಣೆಯೊಂದಿಗೆ ಕ್ಷೌರ ಮಾಡಿಸಿಕೊಳ್ಳಬೇಕಾಯಿತು. ಕಾರಣ ಮತ್ತೆ ಅದೇ! ಪರಿಶಿಷ್ಟರ ಕೂದಲನ್ನು ಕತ್ತರಿಸಲು ನಕಾರ. ಮಂಡ್ಯದ ಚೀರನಹಳ್ಳಿ ಗ್ರಾಮದ ಬೀರೇಶ್ವರ ದೇವಾಲಯವನ್ನು ಪರಿಶಿಷ್ಟ ಸಮುದಾಯದವರು ಈ ವರ್ಷದ ಮಾರ್ಚ್‌ನಲ್ಲಿ ಪ್ರವೇಶಿಸಿದರು. ನೂರಾರು ವರ್ಷ ಹಳೆಯದಾಗಿರುವ ಈ ದೇವಸ್ಥಾನದ ಒಳಗೆ ಪರಿಶಿಷ್ಟರಿಗೆ ಪ್ರವೇಶವಿರಲಿಲ್ಲ. ಅಷ್ಟೇ ಅಲ್ಲ, ದೇವಸ್ಥಾನದ ಜಾತ್ರೆಯ ಮೆರವಣಿಗೆಗೂ ಅವರು ಬರುವಂತಿರಲಿಲ್ಲ! ಕೆಲವು ಹೋರಾಟಗಾರರ ಮಧ್ಯಪ್ರವೇಶ ಹಾಗೂ ಸರ್ಕಾರದ ಆದೇಶದ ಮೇರೆಗೆ ಅಂತೂ ಈ ದೇವಾಲಯದ ಬಾಗಿಲು ಈ ವರ್ಷ ಪರಿಶಿಷ್ಟರಿಗೆ ತೆರೆದಿದೆ!

ಜಾತಿಯ ಕಾರಣದಿಂದ ಮನುಷ್ಯರನ್ನು ಮನುಷ್ಯರಿಂದ ಬೇರ್ಪಡಿಸುವ ಅಸ್ಪೃಶ್ಯತೆಯ ಈ ಅಮಾನವೀಯ ಅಭ್ಯಾಸವು ಮುಂದುವರಿದ ರಾಜ್ಯವೆಂದು ಹೆಸರು ಪಡೆದ ಕರ್ನಾಟಕದ ಎಲ್ಲ ಭಾಗಗಳಲ್ಲೂ ಹೇಗೆ ವ್ಯಾಪಕವಾಗಿ ಹರಡಿದೆ ಎನ್ನುವುದಕ್ಕೆ ಈ ಮೇಲಿನವು ಕೆಲವೇ ಕೆಲವು ಉದಾಹರಣೆಗಳಷ್ಟೇ.



ಅಸ್ಪೃಶ್ಯತೆಯ ಪ್ರಕರಣವೊಂದರಲ್ಲಿ ಇತ್ತೀಚೆಗಷ್ಟೇ 101 ಮಂದಿಗೆ ಶಿಕ್ಷೆ ವಿಧಿಸಿದ ಕೊಪ್ಪಳ ಜಿಲ್ಲಾ ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಆಫ್ರೋ ಅಮೆರಿಕನ್ ಹಾಡುಗಾರ್ತಿ ಮರಿಯನ್ ಆ್ಯಂಡರ್ಸನ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ್ದರು. ಮರಿಯನ್ ಹೇಳುತ್ತಾರೆ, ‘ಒಂದು ದೇಶ ಎಷ್ಟೇ ದೊಡ್ಡದಾಗಿರಲಿ, ಅದರ ಅತ್ಯಂತ ದುರ್ಬಲ ಪ್ರಜೆಗಳಿಗಿಂತ ಬಲಿಷ್ಠವಾಗಲು ಸಾಧ್ಯವೇ ಇಲ್ಲ. ನೀವು ಒಬ್ಬ ವ್ಯಕ್ತಿಯನ್ನು ಎಲ್ಲಿಯವರೆಗೆ ಕೆಳಗೇ ಇಟ್ಟಿರುತ್ತೀರೋ, ಅಲ್ಲಿಯವರೆಗೆ ನಿಮ್ಮದೊಂದು ಭಾಗವನ್ನೂ ನೀವು ಕೆಳಗೇ ಇಟ್ಟಿರಬೇಕಾಗುತ್ತದೆ. ಹಾಗಿದ್ದಾಗ ನೀವು ಮೇಲಕ್ಕೆ ಹಾರುವುದು ಅಸಾಧ್ಯವಾಗುತ್ತದೆ’. ಎಷ್ಟು ಅರ್ಥಪೂರ್ಣವಾದ ಮಾತುಗಳು!

ನಿಜ, ದುರ್ಬಲರನ್ನು ಅದೇ ಜಾಗದಲ್ಲಿಟ್ಟು ನಾವೂ ಕೆಳಗೆ ಜಾರುವ ಬದಲು ಅವರನ್ನು ಮೇಲೆತ್ತುವ ಪ್ರಯತ್ನ ಮಾಡಿದರೆ, ಒಟ್ಟಿಗೇ ಮೇಲೇರಬಹುದಲ್ಲ. ಆಗ ಎಲ್ಲರೂ ಶಕ್ತಿವಂತರಾಗಿ ದೇಶ ಬಲಿಷ್ಠವಾಗಬಹುದಲ್ಲ!

ಆದರೇನು? ನಾನು, ನನ್ನದು ಎಂಬ ಅಹಂಕಾರದಲ್ಲಿ, ಬೇರೆಯವರನ್ನು ಕೀಳಾಗಿಸಿ ನಮ್ಮ ಮೇಲರಿಮೆಯನ್ನು ಸಾಬೀತುಪಡಿಸಲು ಯತ್ನಿಸುವ ನಾವು, ಹೀಗೆ ಒಟ್ಟಂದದಲ್ಲಿ ಸಾಗುವ ಯೋಚನೆಯನ್ನಾದರೂ ಮಾಡುತ್ತೇವೆಯೇ? ಹಾಗೆ ಸಾಗಲು ನಮ್ಮ ಮೆದುಳು ಮತ್ತು ಎದೆಯಾಳದಲ್ಲಿ ಬೇರುಬಿಟ್ಟಿರುವ ಜಾತಿಯ ಅಹಂಕಾರ ಬಿಟ್ಟೀತೇ? ಈ ದೀಪಾವಳಿಗೆ ಮನೆಯನ್ನೆಲ್ಲ ಚೊಕ್ಕ ಮಾಡಿ ಬೆಳಕಾಗಲೆಂದು ದೀಪ ಹಚ್ಚಿದ್ದೇವೆ, ಆದರೆ ನಮ್ಮ ಮನಸ್ಸಿನೊಳಗಿನ ಜಾತೀಯತೆಯ ಕೊಳೆಯನ್ನು ತೊಳೆಯಲು, ಶ್ರೇಷ್ಠತೆಯ ವ್ಯಸನದ ಕತ್ತಲನ್ನು ತೊಡೆಯಲು ಸಣ್ಣ ಪ್ರಯತ್ನವನ್ನಾದರೂ ಮಾಡಿದ್ದೇವೆಯೇ?

ವಾಚಕರ ವಾಣಿ

ಕಾನೂನಿನಡಿ ಎಲ್ಲರೂ ಸಮಾನ...

ಅಧಿಕಾರದಲ್ಲಿ ಇದ್ದಾಗಲೇ ಲೋಕಾಯುಕ್ತ ವಿಚಾರಣೆ ಎದುರಿಸಿದ ರಾಜ್ಯದ ಮೊದಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಾಗಿದ್ದಾರೆ. ಅಲ್ಲದೆ, ಸುದೀರ್ಘ ಅವಧಿಯ ತಮ್ಮ ರಾಜಕೀಯ ಬದುಕಿನಲ್ಲಿ ಎದುರಿಸಿದ ಮೊದಲ ವಿಚಾರಣೆಯೂ ಇದಾಗಿದೆ. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡು, ವಿವಿಧ ಸ್ಥಾನಮಾನಗಳನ್ನು ಅನುಭವಿಸಿರುವ ಸಿದ್ದರಾಮಯ್ಯ, ಮುಡಾ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ಮೊದಲ ಆರೋಪಿಯಾಗಿ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಿದ್ದು ವರದಿಯಾಗಿದೆ (ಪ್ರ.ವಾ., ನ. 7). ರಾಜ್ಯದ ರಾಜಕೀಯದಲ್ಲಿ ಮುಖ್ಯಮಂತ್ರಿಯೊಬ್ಬರು ತನಿಖಾಧಿಕಾರಿ ಎದುರು ಸಾಮಾನ್ಯರಂತೆ ನಡೆದುಕೊಂಡು ಕಾನೂನು ಪ್ರಕ್ರಿಯೆಗೆ ಸಹಕರಿಸಿರುವುದು ಸರಿಯಾದ ನಡೆ.

ರಾಮಕೃಷ್ಣ ಹೆಗಡೆ ಅವರ ಅಧಿಕಾರ ಅವಧಿಯಲ್ಲಿ ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆ ಅಸ್ತಿತ್ವಕ್ಕೆ ಬಂದು, ಮುಖ್ಯಮಂತ್ರಿಯನ್ನೂ ಒಳಗೊಂಡು ಚುನಾಯಿತ ಪ್ರತಿನಿಧಿಗಳನ್ನು ಅದರ ವ್ಯಾಪ್ತಿಗೆ ಒಳಪಡಿಸಲಾಗಿತ್ತು. ಅಂದು ಹೆಗಡೆ ಸಂಪುಟದಲ್ಲಿ ಸಚಿವರಾಗಿದ್ದ ಸಿದ್ದರಾಮಯ್ಯ ಇಂದು ಮುಖ್ಯಮಂತ್ರಿ ಸ್ಥಾನದಲ್ಲಿ ಇದ್ದುಕೊಂಡು, ವಿಚಾರಣೆ ಎದುರಿಸಿದ್ದಾರೆ. ಕಾನೂನಿನಡಿ ಎಲ್ಲರೂ ಸಮಾನ ಎಂಬ ಸಂದೇಶ ಮುಖ್ಯಮಂತ್ರಿಯವರ ನಡವಳಿಕೆಯಲ್ಲಿದೆ.

ಡಿ.ಪ್ರಸನ್ನಕುಮಾರ್, ಬೆಂಗಳೂರು

ಜನಪ್ರಿಯ ವಿಜ್ಞಾನ: ಬೇಕು ವ್ಯಾಪಕ ಪ್ರಚಾರ

ಈಗ ಸಾಮಾನ್ಯವಾಗಿ ಎಲ್ಲರೂ ಬಳಸುತ್ತಿರುವ ತಂತ್ರಜ್ಞಾನಗಳ ಮೂಲವು ವೈಜ್ಞಾನಿಕ ಸಂಶೋಧನೆಯಾಗಿದೆ. ಎಷ್ಟೋ ವರ್ಷಗಳ ಹಿಂದೆಯೇ, ಮೊಸರು ಮಾಡಲು ಗೊತ್ತಿದ್ದ ಅಜ್ಜಿಯು ಅದರ ಹಿಂದಿನ ವೈಜ್ಞಾನಿಕತೆಯ ಅರಿವಿರದಿದ್ದರೂ ಅಲ್ಲಿ ತನಗೇ ಗೊತ್ತಿಲ್ಲದಂತೆ ತಂತ್ರಜ್ಞಾನವೊಂದನ್ನು ಅಳವಡಿಸಿಕೊಂಡಿದ್ದಳು. ವಿಜ್ಞಾನ ಮತ್ತು ಅದರ ಬಗೆಗಿನ ಅಜ್ಞಾನದ ಕುರಿತು ಗುರುರಾಜ್ ಎಸ್. ದಾವಣಗೆರೆ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ನ. 7) ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಎಲ್ಲೆಡೆ ಎಲ್ಲ ಶಾಸ್ತ್ರಗಳ ಮುಂದೆ ವಿಜ್ಞಾನ ಎಂಬ ಪದವು ಜೋಡಣೆಯಾಗುತ್ತಿರುವುದು ವಿಜ್ಞಾನದ ಜನಪ್ರಿಯತೆಗೆ ನಿದರ್ಶನವಾಗಿದೆ. ಉದಾಹರಣೆಗೆ, ಸಮಾಜವಿಜ್ಞಾನ, ಜ್ಯೋತಿಷವಿಜ್ಞಾನ, ಮನೋವಿಜ್ಞಾನ... ಈಗ ಅವಶ್ಯಕತೆ ಇರುವುದು ಜನಪರ ಜನಪ್ರಿಯ ವಿಜ್ಞಾನದ ಕುರಿತು ಇನ್ನಷ್ಟು ವ್ಯಾಪಕ ಪ್ರಚಾರ, ಪ್ರಸಾರ ಮತ್ತು ಅಳವಡಿಕೆ.

ಅನಿಲಕುಮಾರ ಮುಗಳಿ, ಧಾರವಾಡ

ಬ್ಯಾಂಕ್ ವಿಲೀನ: ಗ್ರಾಹಕರ ಹಿತರಕ್ಷಣೆ ಮುಖ್ಯವಾಗಲಿ

ಕೇಂದ್ರ ಸರ್ಕಾರದ ಆರ್ಥಿಕ ಸೇವೆಗಳ ಇಲಾಖೆ (ಡಿಎಫ್‌ಎಸ್) ಇತ್ತೀಚೆಗೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ (ಆರ್‌ಆರ್‌ಬಿ) ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಸ್ತಾವವೊಂದನ್ನು ಪ್ರಾಯೋಜಕ ಬ್ಯಾಂಕುಗಳಿಗೆ ಕಳುಹಿಸಿದೆ. ‘ಒಂದು ರಾಜ್ಯ, ಒಂದು ಗ್ರಾಮೀಣ ಬ್ಯಾಂಕ್’ ಎಂಬ ಘೋಷಣೆಯು ಕೇಳಲು ಹಿತವಾಗಿದೆ. ಐದು ರಾಜ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಆರ್‌ಆರ್‌ಬಿಗಳಿವೆ. ಉದಾಹರಣೆಗೆ, ಕರ್ನಾಟಕದಲ್ಲಿ ಎರಡು ಇವೆ. ಒಂದೊಂದು ರಾಜ್ಯವನ್ನು ಎರಡು ಅಥವಾ ಅದಕ್ಕಿಂತ ಹೆಚ್ಚು ಬ್ಯಾಂಕ್‌ಗಳಿಗೆ ಬದಲಾಗಿ ಒಂದೇ ಪ್ರಾಯೋಜಕ ಬ್ಯಾಂಕ್‌ಗೆ ನೀಡುವ ಯೋಜನೆ ಇದು. ನಾನು ಕೆಲ ಕಾಲ ಗ್ರಾಮೀಣ ಬ್ಯಾಂಕ್ ಒಂದರಲ್ಲಿ ಅಧಿಕಾರಿ ಆಗಿದ್ದೆ. ಆಗ ಹೊಸ ಶಾಖೆಗಳನ್ನೇನೋ ತೆರೆಯುತ್ತಿದ್ದರು. ಆದರೆ ಅವು ಕನಿಷ್ಠ ಲಾಭ ಗಳಿಸಲು ಹಲವು ವರ್ಷ ಹಿಡಿಯುತ್ತಿತ್ತು. ಜತೆಗೆ ಮುಂದೆ ಸರ್ಕಾರ ಯಾವ ನೀತಿ ತಳೆಯಲಿದೆ ಎಂಬುದು ಸ್ಪಷ್ಟ ಇರಲಿಲ್ಲ. 2004ರಿಂದ ಈಚೆಗೆ ಮೂರು ಬಾರಿ ವಿಲೀನಗೊಳಿಸುವ ಮತ್ತು ಬಲಪಡಿಸುವ ಪ್ರಕ್ರಿಯೆ ನಡೆದು ಗ್ರಾಮೀಣ ಬ್ಯಾಂಕುಗಳ ಸಂಖ್ಯೆ 196ರಿಂದ 43ಕ್ಕೆ ಇಳಿದಿದೆ. ಈಗ 28ಕ್ಕೆ ಇಳಿಸುವ ಉದ್ದೇಶವಿದೆ.

ಈ ವಿಷಯದಲ್ಲಿ ಕೇಂದ್ರ ಸರ್ಕಾರವು ಬರೀ ಬ್ಯಾಂಕುಗಳು ಹಾಗೂ ನಬಾರ್ಡ್ ಜೊತೆ ಸಮಾಲೋಚಿಸದೆ, ತಳಮಟ್ಟದಲ್ಲಿ ಗ್ರಾಮೀಣ ಬ್ಯಾಂಕ್ ಶಾಖೆಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಹಾಗೂ ವಿವಿಧ ಸಾಲ ನೀಡಿಕೆ ಸಂಸ್ಥೆಗಳು ಇರುವಾಗ ಇವುಗಳ ಮುಂದಿನ ಪ್ರಗತಿಗೆ ಅವಕಾಶಗಳೇನಿವೆ ಎಂಬ ಬಗ್ಗೆ ಅಧ್ಯಯನ ಮಾಡಬೇಕು. ಕೆಲವು ರಾಜ್ಯಗಳಲ್ಲಿ ಆಡಳಿತ ಮಂಡಳಿ ಮಟ್ಟದಲ್ಲಿ ಸಂಘರ್ಷ ಇದೆ (ಉದಾಹರಣೆಗೆ, ಉತ್ತರಪ್ರದೇಶ- ಬ್ಯಾಂಕ್ ಆಫ್ ಬರೋಡ). ಸಿಬ್ಬಂದಿ ವರ್ಗಕ್ಕೆ ಕಲ್ಪಿಸುವ ಅನುಕೂಲದಂತೆ ಗ್ರಾಹಕರ ಹಿತರಕ್ಷಣೆಯೂ ಮುಖ್ಯ. ಈಗಿನ ಪ್ರಸ್ತಾವವನ್ನು ಕಾರ್ಯರೂಪಕ್ಕೆ ತರುವ ಮೊದಲು ಸಂಬಂಧಿತ ಬ್ಯಾಂಕ್‌ಗಳು ಗ್ರಾಹಕರೊಂದಿಗೆ ಸಂವಾದ ನಡೆಸುವುದು ಸೂಕ್ತ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸಾರಿಗೆ ಇಲಾಖೆಯಲ್ಲಿ ಏಕಿಷ್ಟು ವಿಳಂಬ?

ಸಾರಿಗೆ ಇಲಾಖೆಯ ಬಹುತೇಕ ಎಲ್ಲಾ ಸೇವೆಗಳನ್ನು ಆರ್‌ಟಿಒ ಕಚೇರಿಗೆ ಹೋಗದೆ ನಿಗದಿತ ವೆಬ್‌ಸೈಟ್ ಮೂಲಕವೇ ಪಡೆಯಬಹುದು ಎಂದು ಸರ್ಕಾರ ಹೇಳಿದೆ. ಆದರೆ ಅರ್ಜಿ ವಿಲೇವಾರಿಯಲ್ಲಿ ಅಧಿಕಾರಿಗಳ ವಿಳಂಬ ನೀತಿ ಮಾತ್ರ ಬದಲಾಗಿಲ್ಲ. ಕಲಿಕಾ ಚಾಲನಾ ಪರವಾನಗಿ (ಎಲ್‌ಎಲ್) ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಬರೀ 30 ನಿಮಿಷದಲ್ಲಿ ಪರೀಕ್ಷೆಯನ್ನು ಪಾಸ್ ಮಾಡಬಹುದು. ಆದರೆ ಎಲ್‌ಎಲ್‌ಗೆ ಸಂಬಂಧಿಸಿದ ಪರವಾನಗಿ ಪ್ರತಿಯ ಅನುಮೋದನೆಗೆ ಅಧಿಕಾರಿಗಳು ವಾರಗಟ್ಟಲೆ ಸಮಯ ತೆಗೆದುಕೊಳ್ಳುತ್ತಾರೆ. ಇಷ್ಟೊಂದು ವಿಳಂಬವಾದರೆ ಆನ್‌ಲೈನ್ ವ್ಯವಸ್ಥೆ ಇದ್ದೂ ಏನು ಪ್ರಯೋಜನ?

ಶಿವಶಂಕರ ಎಸ್., ಮುತ್ತರಾಯನಹಳ್ಳಿ, ಮಧುಗಿರಿ

ಸಿಹಿ ‘ಉಣಿಸಿದ’ ಕನ್ನಡ ಅಭಿರುಚಿ

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಅಣಶಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಕನ್ನಡದಲ್ಲೇ ಸಹಿ ಮಾಡಿಸುವ ಅಭಿಯಾನ ಕೈಗೊಂಡು ಶಿಕ್ಷಕಿ ಅಕ್ಷತಾ ಕೃಷ್ಣಮೂರ್ತಿ ಅವರು ಯಶಸ್ವಿಯಾಗಿರುವುದನ್ನು ಓದಿ (ಪ್ರ.ವಾ., ನ. 7) ಸಿಹಿ ಉಂಡಂತಾಯಿತು. ಕನ್ನಡಾಭಿಮಾನ ಮೆರೆಯುವ ಇಂತಹ ಪ್ರಯತ್ನ, ಪ್ರಯೋಗಗಳನ್ನು ಖಾಸಗಿ ಶಾಲೆಗಳೂ ಸೇರಿದಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲೂ ಆರಂಭಿಸಿದರೆ, ಕನ್ನಡ ಭಾಷೆ ಉಳಿದು ಬೆಳೆಯಲು ಸಾಧ್ಯವಾಗುತ್ತದೆ. ಜನ ಇಂಗ್ಲಿಷ್ ಭಾಷೆಯ ವ್ಯಾಮೋಹಕ್ಕೆ ಬಲಿಯಾಗುತ್ತಿರುವ ಪ್ರಸ್ತುತ ದಿನಮಾನದಲ್ಲಿ, ಕನ್ನಡ ಭಾಷೆಯ ಬಗ್ಗೆ ವಿಶೇಷ ಜಾಗೃತಿ ಮೂಡಿಸಲು ಅಗತ್ಯವಾದ ಕಾಳಜಿ, ಯೋಚನೆ, ಯೋಜನೆ ಅನಿವಾರ್ಯವಾಗಿವೆ. ಎಲ್ಲಾ ಶಿಕ್ಷಕರು ಈ ದಿಸೆಯಲ್ಲಿ ಮನಸ್ಸು ಮಾಡಿದರೆ ಇಂತಹ ವಿಶೇಷ ಕಾರ್ಯಸಾಧನೆ ಅಸಾಧ್ಯವೇನಲ್ಲ.

ಮಹಾಂತೇಶ್ ಬಿ. ನಿಟ್ಟೂರು, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದೇಶಿ ಕ್ರಿಕೆಟ್‌ಗೆ ಟಿ20 ಸವಾಲ್



2014–15ರಲ್ಲಿ ರಣಜಿ ಟ್ರೋಫಿ ಗೆದ್ದ ಕರ್ನಾಟಕ ತಂಡ

> ಕೆಲವು ವರ್ಷಗಳ ಹಿಂದೆ ಖ್ಯಾತನಾಮ ಆಟಗಾರರು ಭಾರತ ತಂಡದಲ್ಲಿ ಪಂದ್ಯ ಮುಗಿದಾಕ್ಷಣ ರಾಜ್ಯ ತಂಡಕ್ಕೆ ಮರಳಿ ದೇಶಿ ಟೂರ್ನಿಗಳಲ್ಲಿ ಆಡುತ್ತಿದ್ದರು. ಆದರೆ, ಈಗ ಕಾಲ ಬದಲಾಗಿದೆ. ವಿರಾಟ್ ಕೊಹ್ಲಿ 2013ರಲ್ಲಿ ಮತ್ತು ರೋಹಿತ್ ಶರ್ಮಾ 2015ರಲ್ಲಿ ರಣಜಿ ಪಂದ್ಯಗಳನ್ನು ಕೊನೆಯ ಬಾರಿಗೆ ಆಡಿದ್ದರು. ನಮ್ಮ ರಾಜ್ಯದ ಕೆ.ಎಲ್. ರಾಹುಲ್ ನಾಲ್ಕು ವರ್ಷಗಳ ಹಿಂದೆ ಕೊನೆಯ ಸಲ ರಣಜಿ ಆಡಿದ್ದರು
>
> ಎಚ್‌.ಆರ್‌.ಗೋಪಾಲಕೃಷ್ಣ
> ಅಂಕಿ ಅಂಶ ತಜ್ಞ

ಭಾರತದಲ್ಲಿ ಕ್ರಿಕೆಟ್ ಎಂಬುದು ಜನಪದವೇ ಆಗಿದೆ. ಪ್ರತಿನಿತ್ಯವೂ ಒಂದಿಲ್ಲೊಂದು ಪಂದ್ಯ ನಡೆಯುತ್ತಲೇ ಇರುತ್ತದೆ. ಹೀಗಾಗಿ ಪ್ರತಿದಿನವೂ ಹೊಸದನ್ನು ಬಯಸುವ ಅಭಿಮಾನಿ ವರ್ಗವೂ ಬೆಳೆಯುತ್ತಿದೆ. ಆ ನಾಡಿಮಿಡಿತಕ್ಕೆ ಸಮನಾಗಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮತ್ತು ಟಿ20 ಮಾದರಿ ಕ್ರಿಕೆಟ್ ಬೆಳೆಯುತ್ತಿದೆ. ಈ ನಡುವೆ ದೇಶದ ಕ್ರಿಕೆಟ್ ಬೆಳವಣಿಗೆಗೆ ಅಡಿಪಾಯವಾಗಿರುವ ಪ್ರತಿಷ್ಠಿತ ರಣಜಿ ಟ್ರೋಫಿ ಹೊಳಪು ಮಾಸುತ್ತಿದೆಯಲ್ಲವೇ?

• ಗಿರೀಶ ದೊಡ್ಡಮನಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ಒಂದು ಕಾರ್ಯಕ್ರಮ ನಡೆದಿತ್ತು. ಅಲ್ಲಿ ಮುಖ್ಯ ಅತಿಥಿಯಾಗಿದ್ದ ಕ್ರಿಕೆಟ್ ದಂತಕಥೆ ಗುಂಡಪ್ಪ ವಿಶ್ವನಾಥ್ ಅವರಿಂದ ಆಟೋಗ್ರಾಫ್ ಪಡೆಯಲು ಹೈಸ್ಕೂಲು ಮಕ್ಕಳು ಸಾಲುಗಟ್ಟಿದ್ದರು.

ಆ ಮಕ್ಕಳು ಎಂದಿಗೂ ಜಿ.ಆರ್.ವಿ. ಆಡುವುದನ್ನು ನೋಡಿರಲಿಲ್ಲ. ಆದರೆ ಅವರ ಬ್ಯಾಟಿಂಗ್ ಮತ್ತು ನಾಯಕತ್ವದ ಕುರಿತು ತಮ್ಮ ಹಿರಿಯರಿಂದ, ಕೋಚ್‌ಗಳಿಂದ ಮತ್ತು ಪುಸ್ತಕಗಳಿಂದ ತಿಳಿದುಕೊಂಡಿದ್ದರು. ಅದರಿಂದಲೇ ಪ್ರೇರಣೆಗೊಂಡಿದ್ದರು. ಜಿಆರ್‌ವಿ ಆಡುವ ಸಂದರ್ಭದಲ್ಲಿ ಇನ್ನೂ ಟಿ.ವಿ. ಪ್ರಸಾರದ ಭರಾಟೆ ಇಷ್ಟೊಂದು ಇರಲಿಲ್ಲ. ಆದರೂ ಆ ದಿನಗಳ ತಮ್ಮ ಸಾಧನೆಗಳ ಮೂಲಕವೇ ಜಿಆರ್‌ವಿ ಈಗಲೂ ಪ್ರಸ್ತುತರಾಗಿದ್ದಾರೆ.

ಅವರಷ್ಟೇ ಅಲ್ಲ; ಎರ್ರಪಳ್ಳಿ ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ ಅವರ ಪೀಳಿಗೆಯ ಆಟಗಾರರೆಲ್ಲರೂ ನಿವೃತ್ತರಾಗಿ ವರ್ಷಗಳೇ ಕಳೆದರೂ ಹೆಸರು ಉಳಿಸಿಕೊಂಡಿದ್ದಾರೆ. ಅವರು ಹೋದಲ್ಲೆಲ್ಲ ಅಭಿಮಾನಿಗಳ ದಂಡು ಮುತ್ತಿಕೊಳ್ಳುತ್ತದೆ. ಇದಕ್ಕೆ ಕಾರಣ, ಅವರು ತಾವು ಆಡುವಾಗ ತೋರಿದ ಬದ್ಧತೆ ಮತ್ತು ಆಡಿದ ರೀತಿ. ಅವರಲ್ಲಿ ಆ ಗುಣ ಬಂದಿದ್ದು ದೇಶಿ ಕ್ರಿಕೆಟ್ ಮೂಲದಿಂದ ಎನ್ನುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಐಪಿಎಲ್ ಕಾಲದಲ್ಲಿ ರಣಜಿ ಕಥೆ–ವ್ಯಥೆ; ಪ್ರಥಮ ದರ್ಜೆ ಪಂದ್ಯಗಳಿಗೆ ನಿರುತ್ಸಾಹ

ಇದೀಗ ದೇಶಿ ಕ್ರಿಕೆಟ್‌ನ ರಾಜ ರಣಜಿ ಟ್ರೋಫಿ ಟೂರ್ನಿ ಆರಂಭವಾಗಿ 90 ವರ್ಷಗಳು ಸಂದಿವೆ. ಭಾರತದ ಕ್ರಿಕೆಟ್‌ಗೆ ರಣಜಿ ಟೂರ್ನಿ ನೀಡಿದ ಕೊಡುಗೆ ಅಮೂಲ್ಯವಾದದ್ದು. ಅಲ್ಲಿಂದ ಬೆಳೆದು ಬಂದ ದಿಗ್ಗಜರು ಹಲವಾರು ಮಂದಿ. ಆದರೆ ಟಿ20 ಕ್ರಿಕೆಟ್ ಆರಂಭವಾದ ನಂತರ ರಣಜಿ ಟ್ರೋಫಿಯ ಹೊಳಪು ಮಸುಕಾಯಿತು. ಅದರಲ್ಲೂ ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭವಾದ ಮೇಲೆ ಆಟಗಾರರೇ ರಣಜಿ ಟೂರ್ನಿಯಿಂದ ವಿಮುಖರಾಗುತ್ತಿದ್ದಾರೆ. ದೇಶದ ಕ್ರಿಕೆಟ್ ಕ್ಷೇತ್ರದ ಹೆಗ್ಗುರುತಾಗಿರುವ ರಣಜಿ ಟ್ರೋಫಿ ಟೂರ್ನಿ ಈಗ ಉಳಿವಿಗಾಗಿ ಹೋರಾಡುತ್ತಿದೆ.



ಎರ್ರಪಳ್ಳಿ ಪ್ರಸನ್ನ, ಬಿ.ಎಸ್‌. ಚಂದ್ರಶೇಖರ್ ಮತ್ತು ಬಿಷನ್ ಸಿಂಗ್ ಬೇಡಿ

ಹೌದು; ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಇತ್ತೀಚಿನ ಟೆಸ್ಟ್ ಸರಣಿಯನ್ನು ನೋಡಿದವರಿಗೆ ಹೀಗೆ ಅನಿಸಬಹುದು. ದಶಕದ ಹಿಂದೆ ರಾಷ್ಟ್ರೀಯ ತಂಡಕ್ಕೆ ಆಟಗಾರರನ್ನು ಆಯ್ಕೆ ಮಾಡಲು ರಣಜಿ ಟ್ರೋಫಿ, ದುಲೀಪ್ ಟ್ರೋಫಿ ಮತ್ತು ಇರಾನಿ ಟ್ರೋಫಿ ಟೂರ್ನಿಗಳ ಸಾಧನೆಯೇ ಮಾನದಂಡವಾಗಿರುತ್ತಿತ್ತು. ಈಗಲೂ ಈ ಟೂರ್ನಿಗಳನ್ನು ಪರಿಗಣಿಸಲಾಗುತ್ತಿದೆ. ಆದರೆ ಇವುಗಳೊಂದಿಗೆ ಐಪಿಎಲ್ ಕೂಡ ಸೇರಿಕೊಂಡಿದೆ. ಇದೀಗ ಆಸ್ಟ್ರೇಲಿಯಾಕ್ಕೆ ಹೊರಡಲು ಸಿದ್ಧವಾಗಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿರುವ ಹರ್ಷಿತ್ ರಾಣಾ ಇದಕ್ಕೆ ಉದಾಹರಣೆ. ಕಳೆದ ಐಪಿಎಲ್‌ನಲ್ಲಿ ಅವರು ಉತ್ತಮ ಸಾಧನೆ ಮಾಡಿದ್ದರು. ಆದರೆ, ಅವರು ಹತ್ತು ಪ್ರಥಮ ದರ್ಜೆ ಪಂದ್ಯಗಳನ್ನು ಮಾತ್ರ ಆಡಿದ್ದಾರೆ.

ಐಪಿಎಲ್ ಆರಂಭವಾದ ಮೊದಲ ಕೆಲವು ವರ್ಷಗಳಲ್ಲಿ ದೇಶಿ ಟೂರ್ನಿಗಳ ಸಾಧನೆಯ ಆಧಾರದ ಮೇಲೆ ಆಟಗಾರರನ್ನು ಫ್ರಾಂಚೈಸಿಗಳು ಆಯ್ಕೆ ಮಾಡಿಕೊಂಡವು. ಕಾಲಕ್ರಮೇಣ ಫ್ರಾಂಚೈಸಿಗಳು ತಮ್ಮದೇ ಆದ ಪ್ರತಿಭಾಶೋಧ ವ್ಯವಸ್ಥೆಯನ್ನು ರೂಪಿಸಿಕೊಂಡವು. ಇದರಿಂದ ಹಲವಾರು ಗ್ರಾಮಾಂತರ ಪ್ರತಿಭೆಗಳಿಗೆ ಅವಕಾಶ ಸಿಕ್ಕಿದ್ದು ಒಳ್ಳೆಯದೇ. ಆದರೆ, ನಿಧಾನವಾಗಿ ಐಪಿಎಲ್‌ನಲ್ಲಿ ಮಿಂಚಿ ಮರೆಯಾಗುವವರ ಪಟ್ಟಿ ಬೆಳೆಯಿತು. ಅಲ್ಲದೇ ಒಂದು ಆವೃತ್ತಿಯಲ್ಲಿ ಉತ್ತಮವಾಗಿ ಆಡಿದವರನ್ನು ರಾಷ್ಟ್ರೀಯ ತಂಡಗಳಿಗೆ ಆಯ್ಕೆ ಮಾಡುವ ಪರಿಪಾಠ ನಿಧಾನವಾಗಿ ಶುರುವಾಯಿತು. ಇದರಿಂದಾಗಿ ಸ್ವತಃ ಆಟಗಾರರೇ ದೇಶಿ ಕ್ರಿಕೆಟ್‌ನಿಂದ ವಿಮುಖರಾದರು.



ಜಿ.ಆರ್‌. ವಿಶ್ವನಾಥ್ ಮತ್ತು ರಾಹುಲ್ ದ್ರಾವಿಡ್

ನ್ಯೂಜಿಲೆಂಡ್ ಎದುರಿನ ಸೋಲಿನ ನಂತರ ಈ ವಿಷಯ ಚರ್ಚೆಗೆ ಗ್ರಾಸವಾಗಿದೆ. ದೇಶಿ ಕ್ರಿಕೆಟ್ ಸಾಧನೆಯ ಮೂಲಕ ಭಾರತ ತಂಡದಲ್ಲಿ ಸ್ಥಾನ ಪಡೆದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್ (ಸರಣಿಯ ಮೊದಲ ಪಂದ್ಯ ಮಾತ್ರ ಆಡಿದ್ದರು) ಅವರಂತಹವರೂ ಸ್ಪಿನ್ ಬೌಲಿಂಗ್ ಎದುರು ವೈಫಲ್ಯ ಅನುಭವಿಸಿದರು. ಅದೂ ತವರು ನೆಲದಲ್ಲಿ. ಭಾರತ ತಂಡವು ಸೋಲುವುದನ್ನು ತಪ್ಪಿಸುವ ಸಾಮರ್ಥ್ಯ ಇವರಿಗಿತ್ತು. ಆದರೆ ಚೆನ್ನಾಗಿ ಆಡಲಿಲ್ಲ ಎಂಬ ಅಸಮಾಧಾನ ಇವರ ಕುರಿತು ಇದೆ.

ಟೆಸ್ಟ್ ಉಳಿವಿಗೆ ದೇಶಿ ಕ್ರಿಕೆಟ್ ಅಗತ್ಯ: ಒಂದು ಕಡೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಟೆಸ್ಟ್ ಮಾದರಿ ಉಳಿಸಲು ಐಸಿಸಿ ಪ್ರಯತ್ನಿಸುತ್ತಿದೆ. ಅದಕ್ಕಾಗಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆರಂಭಿಸಿದೆ. ಎರಡು ವರ್ಷಗಳಿಗೊಮ್ಮೆ ಡಬ್ಲ್ಯುಟಿಸಿ ಫೈನಲ್ ನಡೆಯುತ್ತದೆ. ಅದಕ್ಕಾಗಿ ಎರಡೂ ವರ್ಷಗಳ ಅವಧಿಯಲ್ಲಿ ನಡೆಯುವ ಟೆಸ್ಟ್ ಸರಣಿಗಳೇ ಡಬ್ಲ್ಯುಟಿಸಿ ಫೈನಲ್ ಅರ್ಹತೆಗೆ ಹಾದಿ. ನ್ಯೂಜಿಲೆಂಡ್, ಇಂಗ್ಲೆಂಡ್, ಆಸ್ಟ್ರೇಲಿಯಾದಂತಹ ತಂಡಗಳು ತಮ್ಮದೇ ಆದ ವೈಖರಿಯಿಂದ ಮತ್ತಷ್ಟು ಉನ್ನತ ದರ್ಜೆಗೆ ಏರುತ್ತಿವೆ. ಅಲ್ಲದೇ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ ಪ್ರಮುಖ ಆಟಗಾರರೂ ದೇಶಿ ಟೂರ್ನಿಗಳಲ್ಲಿ ಆಡುತ್ತಿದ್ದಾರೆ.

ಭಾರತ ತಂಡವೂ ಈ ವಿಷಯದಲ್ಲಿ ಮುಂಚೂಣಿಯಲ್ಲಿಯೇ ಇದೆ. ಕಳೆದ ಎರಡೂ ಡಬ್ಲ್ಯುಟಿಸಿ ಫೈನಲ್‌ಗಳಿಗೆ ಪ್ರವೇಶಿಸಿತ್ತು. ಆದರೆ ಪ್ರಶಸ್ತಿ ಜಯಿಸುವಲ್ಲಿ ಎಡವಿತು. ಇಂತಹ ಹೊತ್ತಿನಲ್ಲಿ ಕೆಂಪು ಚೆಂಡಿನ ಕ್ರಿಕೆಟ್‌ಗೆ ಹೆಚ್ಚು ಆದ್ಯತೆ ನೀಡುವತ್ತ ಕ್ರಿಕೆಟಿಗರು ಗಮನ ಹರಿಸದಿರುವುದು ಭಾರತದಲ್ಲಿ ಮಾತ್ರ. ಆದ್ದರಿಂದ ಇದಕ್ಕೊಂದು ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಬಿಸಿಸಿಐ ಈಚೆಗೆ ಒಂದು ಸೂಚನೆ ಹೊರಡಿಸಿತು. ಭಾರತ ತಂಡದಲ್ಲಿ ಆಡದಿರುವಾಗ ತಮ್ಮ ರಾಜ್ಯಗಳ ತಂಡಗಳಲ್ಲಿ ಆಡಬೇಕು ಎಂದು ಸೂಚಿಸಿತು. ಇದನ್ನು ಪಾಲಿಸದ ಇಶಾನ್ ಕಿಶನ್, ಶ್ರೇಯಸ್ ಅಯ್ಯರ್ ಅವರ ಪ್ರಕರಣ ದೊಡ್ಡ ಸುದ್ದಿಯಾಯಿತು. ಅಲ್ಲದೇ ರಣಜಿಯಲ್ಲಿ ಆಡುವವರಿಗೆ ಸಂಭಾವನೆಯನ್ನೂ ಹೆಚ್ಚಿಸಲಾಗಿದೆ.



ವಿರಾಟ್ ಕೊಹ್ಲಿ

‘ಈಗ ಎಲ್ಲ ಮಾದರಿಗಳಲ್ಲಿ ಕ್ರಿಕೆಟ್ ಪಂದ್ಯಗಳು ಹೆಚ್ಚಾಗಿವೆ. ಆದ್ದರಿಂದ ಆಟಗಾರರಿಗೆ ಆಯ್ಕೆಗಳಿವೆ. ಆದರೆ, ದೀರ್ಘ ಕಾಲದವರೆಗೆ ಆಡುವ ಸಾಮರ್ಥ್ಯ ಎಷ್ಟು ಆಟಗಾರರಿಗೆ ಇದೆ. ರಾಹುಲ್ ದ್ರಾವಿಡ್ ಅವರು ದೊಡ್ಡ ಆಟಗಾರನಾಗಲು ದೇಶಿ ಕ್ರಿಕೆಟ್ ಸಹಾಯಕವಾಯಿತು. ಅವರು ರಾಷ್ಟ್ರೀಯ ತಂಡದಲ್ಲಿ ಬಿಡುವು ಸಿಕ್ಕಾಗಲೆಲ್ಲ ಕರ್ನಾಟಕ ತಂಡಕ್ಕೆ ಆಡುತ್ತಿದ್ದರು. ಅವರು ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಮುನ್ನ ಐದಾರು ವರ್ಷ ದೇಶಿ ಕ್ರಿಕೆಟ್‌ನಲ್ಲಿ ಆಡಿದರು. ಇದು ಅವರಿಗೆ ಉತ್ತಮ ಬುನಾದಿ ಒದಗಿಸಿತು. ಅದಕ್ಕಾಗಿಯೇ ಅವರು ಇವತ್ತಿಗೂ ಪ್ರಸ್ತುತವಾಗಿದ್ದಾರೆ’ ಎಂದು ಮಾಜಿ ರಣಜಿ ಆಟಗಾರ ಆರ್.ಅನಂತ್ ಅಭಿಪ್ರಾಯಪಡುತ್ತಾರೆ.

‘ಭಾರತ ತಂಡದಲ್ಲಿ ಆಡುವ ಒಬ್ಬ ಆಟಗಾರ ಬಿಡುವಿನಲ್ಲಿ ಮರಳಿ ರಾಜ್ಯ ತಂಡಕ್ಕೆ ರಣಜಿ ತಂಡಕ್ಕೆ ಆಡಲು ಬರಬೇಕು. ಆಗ ಅವರ ಅನುಭವವು ತಂಡದ ಇತರ ಆಟಗಾರರ ಅರಿವಿಗೆ ಬರುತ್ತದೆ. ಇದು ಇನ್ನಷ್ಟು ಹುಡುಗರನ್ನು ಪ್ರೇರೇಪಿಸುತ್ತದೆ. ಅಲ್ಲದೇ ಆ ಆಟಗಾರನನ್ನು ನೋಡಲು ಮೈದಾನಕ್ಕೆ ಜನ ಬರುತ್ತಾರೆ. ಆಗ ರಣಜಿ ಪಂದ್ಯಗಳಿಗೂ ಒಂದು ವೈಭವ ಬರುತ್ತದೆ’ ಎಂದೂ ಅನಂತ್ ಹೇಳುತ್ತಾರೆ.

1974ರಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಎರ್ರಪಳ್ಳಿ ಪ್ರಸನ್ನ ಅವರು ಸುನಿಲ್ ಗಾವಸ್ಕರ್ ಅವರನ್ನು ಔಟ್ ಮಾಡಿದ ಮ್ಯಾಜಿಕ್ ಬಾಲ್ ಇವತ್ತಿಗೂ ಜನಜನಿತ. ಟಿ.ವಿ. ಇರದ ಆ ಕಾಲದ ಆಟವು ಅಕ್ಷರಗಳು, ಮಾತುಗಳ ಮೂಲಕ ಈಗಲೂ ಮನಸ್ಸನ್ನು ಮುದಗೊಳಿಸುತ್ತದೆ. ಅಂತಹದೊಂದು ಚುಂಬಕ ಶಕ್ತಿ ರಣಜಿ ಟ್ರೋಫಿ ಟೂರ್ನಿಗೆ ಇದೆ. ಆದರೆ ಐಪಿಎಲ್‌ನಲ್ಲಿ ಈ ರೀತಿಯ ನೆನಪು ಕೆದಕಿದರೆ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರರ ಒಂದಿಷ್ಟು ಹೆಸರುಗಳು ನೆನಪಿಗೆ ಬರಬಹುದಷ್ಟೇ.



ಕೆ.ಎಲ್‌. ರಾಹುಲ್

ಮಿಂಚಿ ಮರೆಯಾದವರು

ಪ್ರತಿವರ್ಷವೂ ಝಗಮಗಿಸುವ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡಲು ಬಹಳಷ್ಟು ಆಟಗಾರರು ಹಾತೊರೆಯುತ್ತಾರೆ. ಹಣದ ಆಕರ್ಷಣೆ ಮತ್ತು ಜನಪ್ರಿಯತೆ ಲಭಿಸುವ ಈ ಟೂರ್ನಿಯಿಂದ ಉನ್ನತ ಮಟ್ಟಕ್ಕೆ ಏರಿದವರು ಇದ್ದಾರೆ. ಮಿಂಚಿ ಮರೆಯಾದವರೂ ಬಹಳಷ್ಟಿದ್ದಾರೆ. ಅಂತಹವರಲ್ಲಿ ಪಾಲ್ ವಾಲ್ತಾಟಿ, ಮನಪ್ರೀತ್ ಗೋನಿ, ಸ್ವಪ್ನಿಲ್ ಅಸ್ನೋಡಕರ್, ಮನ್ವಿಂದರ್ ಬಿಸ್ಲಾ, ರಾಹುಲ್ ಶರ್ಮಾ, ಕಮ್ರನ್ ಖಾನ್, ಸೌರಭ್ ತಿವಾರಿ, ಜೋಗಿಂದರ್ ಶರ್ಮಾ, ಉಮ್ರಾನ್ ಮಲಿಕ್ ಪ್ರಮುಖರಾಗಿದ್ದಾರೆ.

ರಣಜಿ ಟ್ರೋಫಿಗೆ 90 ವರ್ಷ

ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಪ್ರಥಮ ದರ್ಜೆ ಪಂದ್ಯ ನಡೆದು ಈಗ 90 ವರ್ಷಗಳು ತುಂಬಿವೆ. ಒಂದೇ ದಿನದಲ್ಲಿ ಆ ಪಂದ್ಯದ ಫಲಿತಾಂಶ ಹೊರಹೊಮ್ಮಿತ್ತು. ಹೌದು; 1934ರ ನವೆಂಬರ್ 4ರಂದು ಚೆನ್ನೈನಲ್ಲಿ ನಡೆದ ಮೊದಲ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯವೇ ಆ ದಾಖಲೆ. ಮದ್ರಾಸ್ ಮತ್ತು ಮೈಸೂರು (ಈಗ ತಮಿಳುನಾಡು ಮತ್ತು ಕರ್ನಾಟಕ) ತಂಡಗಳ ನಡುವಣ ನಡೆದ ಪಂದ್ಯ ಅದಾಗಿತ್ತು. ಮೊದಲ ದಿನದಾಟ ಮುಗಿಯಲು ಕೆಲವು ನಿಮಿಷಗಳು ಬಾಕಿಯಿದ್ದಾಗಲೇ ಮದ್ರಾಸ್ ತಂಡವು ಇನಿಂಗ್ಸ್ ಹಾಗೂ 23 ರನ್‌ಗಳಿಂದ ಜಯಿಸಿತ್ತು.



ರೋಹಿತ್ ಶರ್ಮಾ



ಹರ್ಷಿತ್ ರಾಣಾ

ಶೀಘ್ರದಲ್ಲಿ ‘ಫಾರೆಸ್ಟ್’ ತೆರೆಗೆ



ಶರಣ್ಯ ಶೆಟ್ಟಿ

ಸಾಹಸ, ಕಾಮಿಡಿ ಕಥಾಹಂದರ ಹೊಂದಿರುವ ‘ಫಾರೆಸ್ಟ್’ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಚಂದ್ರಮೋಹನ್ ನಿರ್ದೇಶನದ ಚಿತ್ರ ಸದ್ಯ ಸೆನ್ಸಾರ್ ಹಂತದಲ್ಲಿದೆ.

ಚಿಕ್ಕಣ್ಣ, ಅನೀಶ್ ತೇಜೇಶ್ವರ್, ಗುರುನಂದನ್ ಹಾಗೂ ರಂಗಾಯಣ ರಘು ಮುಖ್ಯ ಭೂಮಿಕೆಯಲ್ಲಿರುವ ಚಿತ್ರ ಕಾಡಿನೊಳಗೆ ನಡೆಯುವ ಸಾಹಸಮಯ ಕಥೆಯನ್ನು ಹೊಂದಿದೆ. ಎನ್.ಎಂ.ಕಾಂತರಾಜ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಸತ್ಯಶೌರ್ಯ ಸಾಗರ್ ಹಾಗೂ ಚಂದ್ರಮೋಹನ್ ಕಥೆ, ಚಿತ್ರಕಥೆ, ಧರ್ಮವಿಶ್ ಸಂಗೀತ ನಿರ್ದೇಶನ, ಆನಂದ್‌ರಾಜಾ ವಿಕ್ರಮ್ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಚಿತ್ರಗ್ರಹಣ, ಅರ್ಜುನ್ ಕಿಟ್ಟು ಸಂಕಲನ ಚಿತ್ರಕ್ಕಿದೆ.

ಶರಣ್ಯ ಶೆಟ್ಟಿ, ಅರ್ಚನಾ ಕೊಟ್ಟಿಗೆ, ಅವಿನಾಶ್, ಪ್ರಕಾಶ್ ತುಮ್ಮಿನಾಡು ಮುಂತಾದವರು ತಾರಾಗಣದಲ್ಲಿದ್ದಾರೆ. ಬೆಂಗಳೂರು, ಮಡಿಕೇರಿ, ಚಿಕ್ಕಮಗಳೂರು, ಸಂಪಾಜೆ ಕಾಡು ಹಾಗೂ ಮಲೆ ಮಾದೇಶ್ವರ ಬೆಟ್ಟದ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

‘ಕಾಂತಾರ’ಕ್ಕೆ ಟೊಡರ್ ಆ್ಯಕ್ಷನ್

ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸುತ್ತಿರುವ ‘ಕಾಂತಾರ’ ಸಿನಿಮಾ ಪ್ರೀಕ್ವೆಲ್‌ನ ಶೂಟಿಂಗ್ ಕುಂದಾಪುರದಲ್ಲಿ ನಡೆಯುತ್ತಿದ್ದು, ಇದೀಗ ಆ್ಯಕ್ಷನ್ ಭಾಗಗಳ ಚಿತ್ರೀಕರಣಕ್ಕೆ ಚಿತ್ರತಂಡ ಧುಮುಕಿದೆ.

ಸಾಹಸ ನಿರ್ದೇಶನಕ್ಕಾಗಿ ತೆಲುಗಿನ ಹಿಟ್ ಸಿನಿಮಾ ‘ಆರ್‌ಆರ್‌ಆರ್’ನ ಆ್ಯಕ್ಷನ್ ನಿರ್ದೇಶಕರಾಗಿದ್ದ ಟೊಡರ್ ಲ್ಯಾಜರೋವ್ ಆಗಮಿಸಿದ್ದಾರೆ. ಇದಕ್ಕಾಗಿ ಬಲ್ಗೇರಿಯಾದಿಂದ ಟೊಡರ್ ಕುಂದಾಪುರಕ್ಕೆ ಬಂದಿದ್ದಾರೆ. ಈಗಾಗಲೇ ದೈಹಿಕವಾಗಿ ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿರುವ ರಿಷಬ್, ಕಳರಿಪಯಟ್ಟು ತರಬೇತಿಯನ್ನೂ ಪಡೆದಿದ್ದಾರೆ. ಸಿನಿಮಾ 2025ರ ಆಗಸ್ಟ್‌ನಲ್ಲಿ ತೆರೆಕಾಣುವ ಸಾಧ್ಯತೆ ಇದೆ.



ರಿಷಬ್ ಶೆಟ್ಟಿ, ಟೊಡರ್ ಲ್ಯಾಜರೋವ್

2023ರ ನವೆಂಬರ್‌ನಲ್ಲಿ ಸೆಟ್ಟೇರಿದ್ದ ಈ ಚಿತ್ರವನ್ನು ಈಗಾಗಲೇ ಪ್ರೈಂ ವಿಡಿಯೊ ಖರೀದಿಸಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಇದಾಗಿದ್ದು, ಕನ್ನಡ, ಇಂಗ್ಲಿಷ್ ಸೇರಿದಂತೆ ಏಳು ಭಾಷೆಗಳಲ್ಲಿ ಏಕಕಾಲದಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅರವಿಂದ್ ಎಸ್.ಕಶ್ಯಪ್ ಅವರ ಛಾಯಾಚಿತ್ರಗ್ರಹಣ ಸೇರಿದಂತೆ ಮೊದಲ ಭಾಗದಲ್ಲಿ ಕಾರ್ಯನಿರ್ವಹಿಸಿದ್ದ ತಾಂತ್ರಿಕ ತಂಡವೇ ಪ್ರೀಕ್ವೆಲ್‌ನಲ್ಲೂ ಕೆಲಸ ಮಾಡುತ್ತಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಸಪ್ತಮಿ ಗಂ. 23-57 ನಕ್ಷತ್ರ: ಉತ್ತರಾಷಾಢ ಗಂ. 12-03 ಯೋಗ: ಶೂಲ ಗಂ. 8-28 ಕರಣ: ಗರ ಗಂ. 12-20, ತುಲಾ ಮಾಸದ 22 ನೇ ದಿನ, ಮಳೆನಕ್ಷತ್ರ: ವಿಶಾಖ 1.
ರಾಹುಕಾಲ : ಬೆಳಿಗ್ಗೆ 10-30 – 12-00 ಸೂರ್ಯೋದಯ : 06-31 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 05 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 3, 2

ಮೇಷ: ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ್ಯ ನಿಮ್ಮಲ್ಲಿದೆ, ಅದು ಈ ದಿನ ನಿಮಗೆ ಮುಳ್ಳಾಗಬಹುದು. ಬಹಳಷ್ಟು ಅನುಕೂಲಕರ ಫಲಗಳನ್ನು ನಿಮಗೆ ಈ ದಿನದಲ್ಲಿನ ಶುಭ ಸಂಧರ್ಭವು ತರಲಿದೆ.

ವೃಷಭ: ಮತ್ತೊಬ್ಬರ ಜೀವನದಲ್ಲಿ ನಿಮ್ಮ ಪಾತ್ರ ಮಹತ್ವದ್ದು ಎಂದು ತಿಳಿದು ಬಹಳ ಸಂತೋಷವಾಗುವುದು. ಮೆಚ್ಚಿದವರ ಜೊತೆಗೆ ಮದುವೆಯಾಗಲು ಹಿರಿಯರಿಂದ ಒಪ್ಪಿಗೆ ಸಿಗಲಿದೆ. ಅವಿವಾಹಿತರಿಗೆ ವಿವಾಹ ಯೋಗವಿದೆ.

ಮಿಥುನ: ನೀವು ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ. ಹಲವು ದಿನಗಳಿಂದ ಕಾಡುತ್ತಿರುವ ಸಮಸ್ಯೆಗಳಿಗೆ ಉತ್ತರ ಸಿಗುವುದು. ಸ್ವಂತ ಉದ್ಯೋಗಿಗಳಿಗೆ ಲಾಭದಾಯಕ ದಿನ.

ಕರ್ಕಾಟಕ: ನಿಮ್ಮಲ್ಲಿರುವ ಹಿಂಜರಿಕೆಯ ಮತ್ತು ಭಯದ ಸ್ವಭಾವ ನಿಮ್ಮ ಹಿನ್ನೆಡೆಗೆ ಕಾರಣವಾಗಿದೆ. ಹಾಗಾಗಿ ಯಾವುದಕ್ಕೂ ಸಹ ಹಿಮ್ಮೆಟ್ಟದೆ ಬೇರೆಯವರ ಮಾತಿಗೆ ಚಿಂತೆ ಪಡದೆ ನಿಗದಿತ ಸಮಯದಲ್ಲಿ ಕೆಲಸ ಮುಗಿಸುವ ಪ್ರಯತ್ನವಿರಲಿ.

ಸಿಂಹ: ಬಂಡವಾಳ ಹೂಡಿಕೆ, ಷೇರು ಖರೀದಿ ವಿಚಾರಗಳತ್ತ ಆಸಕ್ತಿ ಹೆಚ್ಚಲಿದ್ದೂ ಯೋಚಿಸಿ ವ್ಯವಹರಿಸುವುದು ಪರಮಶ್ರೇಷ್ಠ. ಗೃಹೋಪಕರಣಗಳ ಖರೀದಿ ಅಥವಾ ನೂತನ ವಸ್ತುವನ್ನು ಖರೀದಿಯನ್ನು ಮಾಡುವ ಯೋಗವಿದೆ.

ಕನ್ಯಾ: ವಿದೇಶದಲ್ಲಿನ ಹುದ್ದೆಗೆ ಕರೆ ಬಂದು ಹೋಗುವ ತಯಾರಿಯನ್ನು ನಡೆಸುವಿರಿ. ಸಂಸಾರದ ವಿಚಾರದಲ್ಲಿ ಹಾಗು ಉದ್ಯೋಗದಲ್ಲಿ ದೃಢ ಚಿತ್ತದಿಂದ ಮುಂದುವರಿಯಿರಿ. ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಿ.

ತುಲಾ: ಇಂದು ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸಬಹುದು. ಅನಾವಶ್ಯಕ ತಿರುಗಾಟ ಇದ್ದರೂ ರಿಯಲ್ ಎಸ್ಟೇಟ್ ಏಜೆಂಟರಿಗೆ ಉತ್ತಮವಾದ ಆದಾಯ ಬರುವುದು.

ವೃಶ್ಚಿಕ: ಎಲ್ಲಾ ರೀತಿಯ ಧವಸ ಧಾನ್ಯ ಹಾಗೂ ಮಸಾಲಾ ಸಾಮಗ್ರಿಗಳ ರಫ್ತು ವ್ಯಾಪಾರಿಗಳು ಮತ್ತು ಏಜೆಂಟರುಗಳಿಗೆ ಈ ದಿನ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲವಾಗುವುದು. ಸುಗಂಧ ದ್ರವ್ಯದ ಮಾರಾಟದಲ್ಲಿ ಲಾಭ ಸಿಗಲಿದೆ.

ಧನು: ನಿರ್ಧಾರಗಳನ್ನು ಆತುರವಾಗಿ ತೆಗೆದುಕೊಳ್ಳುವ ಸನ್ನಿವೇಶಕ್ಕೆ ಸಿಕ್ಕಿಕೊಂಡಂತಹ ಸಮಯ ಬರಬಹುದು. ಶಿಕ್ಷಕ ವೃತ್ತಿಯಲ್ಲಿ ಸಾಧನೆಗೆ ಪ್ರಶಸ್ತಿ ಪಡೆಯುವಂತಾಗಲಿದೆ. ಗೃಹ ನಿರ್ಮಾಣ ಕಾರ್ಯ ಚಾಲನೆಯಾಗುವುದು.

ಮಕರ: ಬೆಟ್ಟದಂತೆ ಕಂಡು ಬಂದ ಒಂದು ಸಮಸ್ಯೆಯು ನಿಮ್ಮ ಬುದ್ಧಿವಂತಿಕೆಯಿಂದ ಮಂಜಿನಂತೆ ಕರಗುವುದು. ಸಾಲ ತೀರಿಸಲು ಹೊಸದೊಂದು ಮಾರ್ಗ ನಿಮ್ಮ ಮುಂದೆ ಕಾಣಲಿದೆ. ಫೈನಾನ್ಸ್‌ವರಿಗೆ ಆದಾಯ ವೃದ್ಧಿಯಾಗುತ್ತದೆ.

ಕುಂಭ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಬರಲಿದೆ. ಸರ್ಕಾರಿ ಪತ್ರಗಳಿಗೆ ಸಂಬಂಧಿಸಿದ ಬಹಳ ಹಿಂದೆ ಪ್ರಾರಂಭಿಸಿದ್ದ ಕಾರ್ಯಗಳು ಪೂರ್ಣಗೊಳ್ಳುತ್ತವೆ.

ಮೀನ: ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ತಾಯಿಯ ದೇಹಾರೋಗ್ಯ ತಪಾಸಣೆ ನಡೆಸಲು ವೈದ್ಯರ ಬಳಿ ಹೋಗುವಿರಿ. ಮಕ್ಕಳ ಮನರಂಜನೆಗಾಗಿ ಖರ್ಚು ಸಂಭವಿಸುವುದು.

ಅಮೃತವಾಗುವ ಅನ್ನ!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 62

ನಾವು ಹೊಟ್ಟೆಗೆ ತಿನ್ನೋದು ಮಾತ್ರ ಆಹಾರವಲ್ಲ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎಂಬ ಪಂಚೇಂದ್ರಿಯಗಳಿಂದ ಏನೇನು ಸ್ವೀಕಾರ ಮಾಡ್ತೀವಲ್ಲ ಅದೆಲ್ಲವೂ ಆಹಾರವೇ. ಕಣ್ಣಿಗೆ ರೂಪ, ಕಿವಿಗೆ ಶಬ್ದ, ಚರ್ಮಕ್ಕೆ ಸ್ಪರ್ಶ, ನಾಲಿಗೆಗೆ ರುಚಿ, ಮೂಗಿಗೆ ಗಂಧ ಆಹಾರ. ನಾಲಿಗೆಗೆ ಮಾತ್ರ ಮಿತಿ ಹಾಕೋದಲ್ಲ. ಕಣ್ಣಿಗೆ ರೂಪ ಆಹಾರ ಎಂದರೆ ನೋಡೋದನ್ನು ಕಡಿಮೆ ಮಾಡಬೇಕು.

ಮೊದಲೆಲ್ಲಾ ದೇವರ ಹೆಸರಿನಲ್ಲಿ ಉಪವಾಸ ಮಾಡುತ್ತಿದ್ದರು. ಈಗಲೂ ಉಪವಾಸ ಅಗತ್ಯ. ಅದರಲ್ಲೂ ಡಿಜಿಟಲ್ ಉಪವಾಸ ಇನ್ನೂ ಅಗತ್ಯ. ವಾರದಲ್ಲಿ ಒಂದು ದಿನ ಮೊಬೈಲ್ ಮುಟ್ಟಲ್ಲ, ಟಿವಿ ನೋಡಲ್ಲ ಅಂತ ಇದ್ದರೆ ಅದೂ ಉಪವಾಸ. ನಾವು ಏನನ್ನು ಬಳಸಿದರೂ ಅದನ್ನು ಮಿತವಾಗಿ ಬಳಸಬೇಕು. ನಾವು ವಿದ್ಯುತ್ ಉಪಯೋಗ ಮಾಡೋದನ್ನು ಕಡಿಮೆ ಮಾಡಬೇಕು. ಮನೆಯಲ್ಲಿ ಎಲ್ಲಾ ಲೈಟ್ ಹಾಕಿ ಉರಿಸೋದಕ್ಕಿಂತ ಅಗತ್ಯಕ್ಕೆ ಬೇಕಾದಷ್ಟು ಲೈಟ್‌ಗಳನ್ನು ಹಾಕಿ ಒಂದಿಷ್ಟು ಯುನಿಟ್ ವಿದ್ಯುತ್ ಉಳಿತಾಯ ಮಾಡಿದರೆ ಅದೇ ವಿದ್ಯುತ್‌ನಲ್ಲಿ ರೈತನೊಬ್ಬ ಪಂಪ್ ಚಾಲೂ ಮಾಡಿ ಬೆಳೆ ಬೆಳೀತಾನೆ. ಇದೂ ಉಪವಾಸವೇ. ನಮ್ಮಲ್ಲಿ 50 ಜೊತೆ ಬಟ್ಟೆ ಇದಾವೆ ಎಂದರೆ ಅದರಲ್ಲಿ ಒಂದೆರಡು ಜೊತೆ ಬಟ್ಟೆ ತ್ಯಾಗ ಮಾಡಿದರೆ ಎಲ್ಲೋ ಭಿಕ್ಷುಕರು ತಮ್ಮ ಮಾನಮುಚ್ಚಿಕೊಳ್ತಾರೆ. ಇದೂ ಮಿತ ಆಹಾರ ಪದ್ಧತಿ.

ತಟ್ಟೆಗೆ ಅನ್ನ ಹಾಕಿಕೊಂಡು ಕೆಡಿಸತೀವಿ ಎಂದರೆ ನಮ್ಮಿಂದ ಎರಡು ತಪ್ಪುಗಳಾಗುತ್ತವೆ. ಒಂದು ಯಾವುದೋ ರೈತ ಉಪವಾಸ ಇದ್ದು ದುಡಿದು ಆಹಾರ ಬೆಳೆದಿದ್ದರಿಂದ ಅನ್ನ ನಮ್ಮ ತಟ್ಟೆಗೆ ಬಂದೈತೆ. ನಾನು ದಂಡ ಮಾಡಿದರೆ ಅದು ರೈತನಿಗೆ ಅವಮಾನ ಮಾಡಿದ ಹಾಗೆ. ನಾನು ಅನ್ನ ದಂಡ ಮಾಡದೆ ಮಿತವಾಗಿ ಬಳಸಿದ್ದರೆ ಮಧ್ಯಾಹ್ನ ಬಿಸಿಯೂಟ ಮಾಡುವ ಮಕ್ಕಳಿಗೆ ಬೆಳಿಗ್ಗೆಯೂ ಆಹಾರ ಸಿಗುತ್ತಿತ್ತು ಅನ್ನೋದು ನೆನಪಿದ್ದರೆ ಅದೂ ಮಿತ ಆಹಾರ ತಿನ್ನುವ ವಿಧಾನವೆ. ಮನೆ ಎಂದರೆ ಸಾಮಾನುಗಳನ್ನು ಇಡೋ ಉಗ್ರಾಣ ಅಲ್ಲ. ಎಷ್ಟು ಬೇಕೋ ಅಷ್ಟಿರಬೇಕು.

ಮಿತವಾಗಿ ಬದುಕುವುದು ಯಾಕೆಂದರೆ ಮಿತ ಎಂದರೆ ಅಮೃತ. ನಾವು ತಿನ್ನುವ ಆಹಾರ ಯಾವಾಗ ಅಮೃತವಾಗುತ್ತದೆ? ನಾವು ದುಡಿದಿದ್ದರಲ್ಲಿ ತಂದ ಅನ್ನವಾಗಿದ್ದರೆ ಅದು ಅಮೃತ. ಇಲ್ಲವಾದರೆ ವಿಷ. ಪ್ರತಿ ತುತ್ತು ಅನ್ನ ಉಣ್ಣುವಾಗಲೂ ನಾವು ಕೇಳಿಕೊಳ್ಳಬೇಕು ಈ ಅನ್ನಬೇಯಿಸಿದ ನೀರು ನಮ್ಮ ಶ್ರಮದ ಬೆವರಿನ ನೀರೋ ಅಥವಾ ಪರರ ಕಣ್ಣೀರೋ ಅಂತ. ನಮ್ಮ ಶ್ರಮವಾದರೆ ನಾವು ಉಣ್ಣುವ ಅನ್ನ ಅಮೃತ. ಇತರರ ಕಣ್ಣೀರಾದರೆ ಅದು ವಿಷ. ಇದರ ಜೊತೆಗೆ ವ್ಯಾಯಾಮ ಕೂಡಾ ಇರಬೇಕು. ಯಾಕ ಎಕ್ಸರ್‌ಸೈಸ್ ಮಾಡಬೇಕು ಅಂದರೆ ದೇಹ ಎಕ್ಸ್ ಟ್ರಾ ಸೈಜ್ ಆಗಬಾರದು ಅದಕ್ಕೆ.

ಇರುವೆಗೆ ಯಾರೋ ಕೇಳಿದರಂತೆ ‘ನೀನು ಇಷ್ಟೊಂದು ಸಕ್ಕರೆ ತಿನ್ನುತ್ತಿ. ಆದರೂ ನಿನಗೆ ಯಾಕೆ ಮಧುಮೇಹ ಬರೋದಿಲ್ಲ’ ಅಂತ. ಅದಕ್ಕೆ ಇರುವೆ ‘ನಾನು ಕಾಯಂ ವಾಕಿಂಗ್ ಮಾಡ್ತಾನೇ ಇರ್ತೀನಿ ಅದಕ್ಕೆ’ ಅಂತ ಉತ್ತರಿಸಿತಂತೆ. ಹಿತ, ಮಿತವಾದ ಆಹಾರದ ಜೊತೆಗೆ ನಿರಂತರ ವ್ಯಾಯಾಮ ಕೂಡ ಮುಖ್ಯ.

ಪದಬಂಧ 5855


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಹೊಟ್ಟೆ ಹೊರೆಯುವುದು (6)
3. ಗುಂಗುರು ನೋಡಿದಾಗಲೇ ಹತ್ತಿರುವ ಗೀಳು! (2)
5. ಈತ ಸಂಪ್ರದಾಯವನ್ನು ಅನುಸರಿಸುವವನು (4)
7. ದೇವ ಪೂಜಾತಂತ್ರವನ್ನು ತಿಳಿಸುವ ಶಾಸ್ತ್ರ (3)
9. ಮರೀಚಿಕೆ ಇಲ್ಲಿಕಾಣುತ್ತಿದೆ (5)
11. ವಾದಿಸುವವನ ಹತ್ತಿರ ಬೋಧಕನಿದ್ದಾನೆ (3)
14. ದೇವಾಲಯದ ಸಭಾಮಂಟಪ (4)
15. ಬೆಲೆಯುಳ್ಳ ಮಣಿ ಇಲ್ಲಿ ಉಲ್ಟಾ ಆಗಿದೆ (2)
16. ಇದು ಕನ್ನಡಿಗ ಬರೆದಿಟ್ಟ ವಿಲ್! (6)

ಮೇಲಿಂದ ಕೆಳಕ್ಕೆ

1. ಹುಟ್ಟುವ ಸ್ಥಾನ ಅಥವಾ ಮೂಲಸ್ಥಾನ (3)
2. ಒಂದು ಪ್ರದೇಶದಿಂದ ಹೊರಗೆ ಕಳಿಸುವುದು (2)
4. ಗುರಿಯಲ್ಲಿ ಪರಾಧೀನತೆ (5)
6. ಮರಳಿನ ತೀರವಿಲ್ಲಿ ಉಲ್ಟಾ ಕಾಣುತ್ತಿದೆ (3)
7. ಆಶ್ರಯಕ್ಕೊಂದು ಪರ್ಯಾಯ ಪದ (3)
8. ಅತಿಶಯವಾದ ಪ್ರಯತ್ನವನ್ನು ಹೀಗೂ ಹೇಳುವರು (5)
9. ಮಡದಿಯಿರುವ ಬಿಡಾರ! (3)
10. ದುಃಖದೊಡನೆ ಬರುವ ಜೋಡು ನುಡಿ (3)
13. ಗಮನ ಹರಿಸಿದಾಗ ಗೂಢವಾದುದು ಕಾಣುತ್ತದೆ (3)
14. ದುಸ್ತರದಲ್ಲೇ ಮಡಿಕೆ ಹುಡುಕಿ! (2)



5854ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾತ 4.ವಸನ 6.ವರೋಪಚಾರ 7.ಶರಣೆ 9.ವಿಕ 10.ಅಂಕೆ 11.ಪಾಯಸ 15.ಗಾಳಿಗೋಪುರ 16.ಕಮರಿ 17.ಸಮೀರ

ಮೇಲಿಂದ ಕೆಳಕ್ಕೆ: 1.ಪರವಶ 2.ತವದೊಣೆ 3.ಶಪಥ 4.ವರಹ 5.ನಕ್ಷತ್ರಕ 8.ರಸಿಕೆ 9.ವಿದಾಯ 10.ಅಂಗಾರಕ 11.ಪಾದರಸ 12.ಸರೋವರ 13.ನಗಾರಿ 14.ರಂಗೋಲಿ

ಸುಡೊಕು 6240

6		4		9		1		8
	1	2		3			6	
		7	4		1	3		9
2	9				4	6		
1	4							
							9	4
3		9			5		7	1
	8			1		9		3
4		1	3		9		8	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6239 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6


ಷೇರುಪೇಟೆ ವಹಿವಾಟು 836



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,484
ಇಂದಿನ ಅಂತ್ಯ	24,199
▼	284
ದಿನದ ಕನಿಷ್ಠ	24,179

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹311-577

ದ್ವಿತಳಿ (ಬಿ.ವಿ) ₹301-690

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹177

ಆರ್‌ಎಸ್‌ಎಸ್-5 ₹171

ಗುಡ್ ಲಾಟ್ ₹167

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹17800
ಎಸಿ	₹11370
ಆರ್‌ಪಿ	₹18000
ಆರ್‌ಸಿ	₹10140

ಕೋಲಾರ: ಸಿಸಿಟಿ ಕಂಪನಿಯಿಂದ ₹400 ಕೋಟಿ ಹೂಡಿಕೆ

ಬೆಂಗಳೂರು (ಪಿಟಿಐ): ಜಪಾನ್‌ನ ಬಹುರಾಷ್ಟ್ರೀಯ ಕಂಪನಿಯಾದ ಮಿತ್ಸುಬಿಷಿ ಎಲೆಕ್ಟ್ರಿಕ್ ಗ್ರೂಪ್‌ನ ಒಡೆತನಕ್ಕೆ ಸೇರಿದ ಕ್ಲೈಮಾವೆನೆಟಾ ಕ್ಲೈಮೇಟ್ ಟೆಕ್ನಾಲಜೀಸ್ (ಸಿಸಿಟಿ), ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ₹400 ಕೋಟಿ ಹೂಡಿಕೆ ಮಾಡಲಿದೆ.

ನರಸಾಪುರದಲ್ಲಿ ಕಂಪನಿಯು ಘಟಕ ಸ್ಥಾಪಿಸಿದ್ದು, ಶುಕ್ರವಾರ ಉದ್ಘಾಟನೆಯಾಗಲಿದೆ. ಇದರಲ್ಲಿ ಬಂಡವಾಳ ಹೂಡಿಕೆ ಮಾಡಲಾಗುತ್ತಿದೆ. ಹೊಸದಾಗಿ ₹500 ಕೋಟಿ ಮೌಲ್ಯದ ಆರ್ಡರ್ ಪಡೆಯಲಾಗಿದೆ. ಮುಂದಿನ ಐದು ವರ್ಷದಲ್ಲಿ ಆರ್ಡರ್‌ಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿಯ ಸಿಇಒ ಅನಿಲ್ ದೇವ್ ಗುರುವಾರ ತಿಳಿಸಿದ್ದಾರೆ.

ಈ ಘಟಕದಲ್ಲಿ ಹವಾನಿಯಂತ್ರಿತ ವ್ಯವಸ್ಥೆಗೆ ಅಗತ್ಯವಿರುವ ಉಪಕರಣಗಳನ್ನು ತಯಾರಿಸಲಾಗುತ್ತದೆ. ಪ್ರತಿಷ್ಠಿತ ಹೋಟೆಲ್‌ಗಳು, ಆರೋಗ್ಯ ಸಂಸ್ಥೆಗಳು, ಮಾಲ್‌ಗಳು, ಮಲ್ಟಿಪ್ಲೆಕ್ಸ್ ಸೇರಿ ಡೆವಲಪರ್‌ಗಳು ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ಇವುಗಳನ್ನು ಪೂರೈಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಪ್ರಸ್ತುತ ಕಂಪನಿಯಲ್ಲಿ 300 ಉದ್ಯೋಗಿಗಳು ಕಾರ್ಯ ನಿರ್ವಹಿಸುತ್ತಿದ್ದು, ಮುಂದಿನ 5 ವರ್ಷದಲ್ಲಿ ಈ ಸಂಖ್ಯೆಯನ್ನು ದುಪ್ಪಟ್ಟುಗೊಳಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವೇದಾಂತಕ್ಕೆ ನಾಲ್ಕು ಗಣಿ ಗುತ್ತಿಗೆ

ನವದೆಹಲಿ (ಪಿಟಿಐ): ಕೇಂದ್ರ ಗಣಿ ಸಚಿವಾಲಯದಿಂದ ನಡೆದ ನಾಲ್ಕನೇ ಸುತ್ತಿನ ಇ–ಟೆಂಡರ್‌ನಲ್ಲಿ ಕರ್ನಾಟಕ ಸೇರಿ ನಾಲ್ಕು ರಾಜ್ಯಗಳಲ್ಲಿ ವೇದಾಂತ ಕಂಪನಿಯು ಖನಿಜ ನಿಕ್ಷೇಪಗಳ ಗಣಿಗಾರಿಕೆಗೆ ಗುತ್ತಿಗೆ ಪಡೆದಿದೆ.

ಕಂಪನಿಯು ಕರ್ನಾಟಕದಲ್ಲಿ ಕೋಬಾಲ್ಟ್, ಮ್ಯಾಂಗನೀಸ್ ಮತ್ತು ಕಬ್ಬಿಣ ಅದಿರು ಗಣಿಗಾರಿಕೆಗೆ ಗುತ್ತಿಗೆ ಪಡೆದಿದೆ. ಅರುಣಾಚಲ ಪ್ರದೇಶದಲ್ಲಿ ವನಾಡಿಯಮ್ ಮತ್ತು ಗ್ರಾಫೈಟ್, ಆಂಧ್ರಪ್ರದೇಶದಲ್ಲಿ ಟಂಗ್‌ಸ್ಟನ್ ಮತ್ತು ಅದಕ್ಕೆ ಸಂಬಂಧಿತ ಖನಿಜಗಳ ನಿಕ್ಷೇಪ ಹಾಗೂ ತಮಿಳುನಾಡಿನಲ್ಲಿ ಟಂಗ್‌ಸ್ಟನ್ ನಿಕ್ಷೇಪದ ಗುತ್ತಿಗೆ ಪಡೆದಿದೆ.

ಭಾರತೀಯ ತೈಲ ನಿಗಮವು (ಒಐಎಲ್) ಅರುಣಾಚಲ ಪ್ರದೇಶದಲ್ಲಿ ಗ್ರಾಫೈಟ್ ಮತ್ತು ವನಾಡಿಯಮ್ ನಿಕ್ಷೇಪದ ಗುತ್ತಿಗೆ ಪಡೆದಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮಹೀಂದ್ರಗೆ ಲಾಭ ₹3,171 ಕೋಟಿ

ಮುಂಬೈ (ಪಿಟಿಐ): ವಾಹನ ತಯಾರಿಕಾ ಕಂಪನಿ ಮಹೀಂದ್ರ ಆ್ಯಂಡ್ ಮಹೀಂದ್ರ, 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹3,171 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.


2023–24ನೇ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹2,348 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 35ರಷ್ಟು ಏರಿಕೆಯಾಗಿದೆ. ವಾಹನಗಳ ಮಾರಾಟದಲ್ಲಿನ ಏರಿಕೆಯಿಂದ ಲಾಭದ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ₹37,924 ಕೋಟಿ ವರಮಾನ ಗಳಿಸಲಾಗಿದ್ದು, ಶೇ 10ರಷ್ಟು ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ವಿನಿಮಯ ದರ

£ ಪೌಂಡ್	108.93
€ ಯುರೊ	90.70

2023–24ನೇ ಸಾಲಿನಡಿ ₹2,153 ಕೋಟಿ ದಾನ: ಹುರುನ್ ವರದಿ

ಶಿವ ನಾಡಾರ್ ಮಹಾದಾನಿ



ಶಿವ ನಾಡಾರ್

ಮುಂಬೈ (ಪಿಟಿಐ): ಹುರುನ್ ಇಂಡಿಯಾ ಸಂಸ್ಥೆಯು ಗುರುವಾರ ದೇಶದ ಮಹಾದಾನಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯ ಸಂಸ್ಥಾಪಕ ಶಿವ ನಾಡಾರ್, ಈ ಬಾರಿಯೂ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

2023–24ನೇ ಆರ್ಥಿಕ ವರ್ಷದಲ್ಲಿ ನಾಡಾರ್ ಅವರು, ಒಟ್ಟು ₹2,153 ಕೋಟಿ ದಾನ ಮಾಡಿದ್ದಾರೆ. ಇದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಅವರ ದಾನದ ಮೊತ್ತದಲ್ಲಿ ಶೇ 5ರಷ್ಟು ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

ದೇಶದ ಶ್ರೀಮಂತರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಉದ್ಯಮಿ ಗೌತಮ್ ಅದಾನಿ ಅವರು, ₹330 ಕೋಟಿ ದಾನ ಮಾಡಿದ್ದಾರೆ. ಎರಡನೇ ಅತಿದೊಡ್ಡ ಶ್ರೀಮಂತರಾಗಿರುವ ಉದ್ಯಮಿ ಮುಕೇಶ್ ಅಂಬಾನಿ ಅವರು, ₹407 ಕೋಟಿ ದಾನ ಮಾಡಿದ್ದಾರೆ ಎಂದು ವಿವರಿಸಿದೆ.

ಮುಕೇಶ್ ಅವರು ದಾನಿಗಳ ಪಟ್ಟಿಯಲ್ಲಿ ಒಂದು ಸ್ಥಾನ ಮೇಲಕ್ಕೇರಿದ್ದರೆ, ಅದಾನಿ ಅವರು ಐದನೇ ಸ್ಥಾನದಲ್ಲಿಯೇ ಮುಂದುವರಿದಿದ್ದಾರೆ.

203 ಮಂದಿ ₹5 ಕೋಟಿಗೂ ಹೆಚ್ಚು ದಾನ ಮಾಡಿದ್ದಾರೆ. ಹುರುನ್ ಸಿದ್ಧಪಡಿಸಿರುವ ದೇಶದ ಸಿರಿವಂತರ ಪಟ್ಟಿಯಲ್ಲಿರುವ 1,539 ಮಂದಿಯ ಒಟ್ಟು ಸಂಪತ್ತು ತಲಾ ₹1 ಸಾವಿರ ಕೋಟಿ ಇದೆ. ಈ ವರ್ಷದಲ್ಲಿ ಇವರ ಒಟ್ಟು ಸಂಪತ್ತಿನ ಮೌಲ್ಯದಲ್ಲಿ ಶೇ 46ರಷ್ಟು ಏರಿಕೆಯಾಗಿದೆ.

ನಾಡಾರ್ ಅವರ ಒಟ್ಟು ಸಂಪತ್ತು ₹3.14 ಲಕ್ಷ ಕೋಟಿ ಇದ್ದರೆ, ಅದಾನಿ ₹11.6 ಲಕ್ಷ ಕೋಟಿ ಹಾಗೂ ಮುಕೇಶ್ ಅಂಬಾನಿ ಅವರು ₹10.14 ಲಕ್ಷ ಕೋಟಿ ಸಂಪತ್ತು ಹೊಂದಿದ್ದಾರೆ.

ಪ್ರಮುಖ ದಾನಿಗಳು (₹ಕೋಟಿಗಳಲ್ಲಿ)	
ಶಿವ ನಾಡಾರ್	2,153
ಮುಕೇಶ್ ಅಂಬಾನಿ	407
ಬಜಾಜ್ ಕುಟುಂಬ	352
ಕುಮಾರಮಂಗಲಂ ಬಿರ್ಲಾ ಮತ್ತು ಕುಟುಂಬ	334
ಗೌತಮ್ ಅದಾನಿ	330
ನಂದನ್ ನಿಲೇಕಣಿ	307
ರೋಹಿಣಿ ನಿಲೇಕಣಿ	154
ಅಜೀಂ ಪ್ರೇಮ್‌ಜೀ	152
ಸುಸ್ಮಿತಾ ಬಾಗ್ಚಿ	90

‘ದಾನಿಗಳ ಪಟ್ಟಿಯಲ್ಲಿರುವ ಒಂಬತ್ತು ಕಂಪನಿಗಳ ಪ್ರವರ್ತಕರು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ (ಸಿಎಸ್‌ಆರ್) ನೀಡುವ ಶೇ 2ರಷ್ಟು ಮೊತ್ತಕ್ಕಿಂತಲೂ ಹೆಚ್ಚು ದಾನ ಮಾಡಿದ್ದಾರೆ’ ಎಂದು ಹುರುನ್ ಇಂಡಿಯಾದ ಸಂಸ್ಥಾಪಕ ಮತ್ತು ಮುಖ್ಯ ಸಂಶೋಧಕ ಅನಸ್ ರೆಹಮಾನ್ ಜುನೈದ್ ತಿಳಿಸಿದ್ದಾರೆ.

ರೋಹಿಣಿ ನಿಲೇಕಣಿಗೆ ಮೊದಲ ಸ್ಥಾನ: ಮಹಿಳಾ ವಿಭಾಗದ ದಾನಿಗಳ ಪಟ್ಟಿಯಲ್ಲಿ ರೋಹಿಣಿ ನಿಲೇಕಣಿ ಅವರು ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಮೈಂಡ್‌ಟ್ರೀಯ ಸುಸ್ಮಿತಾ ಬಾಗ್ಚಿ ಆ ನಂತರದ ಸ್ಥಾನದಲ್ಲಿದ್ದಾರೆ.

2022–23ನೇ ಸಾಲಿನಡಿ ₹1,774 ಕೋಟಿ ದಾನ ಮಾಡಿ ದಾನಿಗಳ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದ ವಿಪ್ರೊ ಕಂಪನಿಯ ಅಜೀಂ ಪ್ರೇಮ್‌ಜೀ ಅವರು, ಈ ಬಾರಿ ₹152 ಕೋಟಿ ದಾನ ಮಾಡಿದ್ದಾರೆ.

ಶೈಕ್ಷಣಿಕ ಉದ್ದೇಶಕ್ಕಾಗಿ ₹3,680 ಕೋಟಿ, ಹೆಲ್ತ್‌ಕೇರ್‌ಗೆ ₹626 ಕೋಟಿ ಹಾಗೂ ಗ್ರಾಮೀಣ ಪರಿವರ್ತನೆಯ ಉದ್ದೇಶಕ್ಕೆ ₹331 ಕೋಟಿ ದಾನ ನೀಡಲಾಗಿದೆ.

ಮುಂಬೈ ಧಾರಣೆ

ಶೇಂಗಾ

07-11-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಪಾಮ್ ವಾರದ ಡೆಲಿವರಿ	1368 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹76,700 (77,800)

ಬೆಳ್ಳಿ ಕೆ.ಜಿ ₹90,600 (92,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸ್ಕೋಡಾ ‘ಕೈಲಾಕ್’ ಬಿಡುಗಡೆ

• ಬಾಲಚಂದ್ರ

ಮುಂಬೈ: ಸ್ಕೋಡಾ ಆಟೊ ಇಂಡಿಯಾವು ತನ್ನ ಬಹುನಿರೀಕ್ಷಿತ ಎಸ್‌ಯುವಿ ಮಾದರಿಯ ‘ಕೈಲಾಕ್’ ಕಾರನ್ನು ಬುಧವಾರ ಮುಂಬೈನಲ್ಲಿ ಅನಾವರಣಗೊಳಿಸಿದೆ.

ಒಂದು ಲೀಟರ್ ಸಾಮರ್ಥ್ಯದ ಟರ್ಬೊ ಎಂಜಿನ್ ಹೊಂದಿರುವ ‘ಕೈಲಾಕ್’ನ ಎಕ್ಸ್ ಶೋರೂಂ ಬೆಲೆ ₹7.89 ಲಕ್ಷ ಆಗಿದೆ. ಡಿಸೆಂಬರ್ 2ರಿಂದ ಬುಕಿಂಗ್ ಆರಂಭವಾಗಲಿದೆ. ‘ಭಾರತ್ ಮೊಬಿಲಿಟಿ ಎಕ್ಸ್‌ಪೋ’ದಲ್ಲಿ ಪ್ರದರ್ಶಿಸಿದ ಬಳಿಕ 2025ರ ಜನವರಿ 27ರಿಂದ ಗ್ರಾಹಕರಿಗೆ ಕಾರುಗಳನ್ನು ವಿತರಿಸಲಾಗುವುದು ಎಂದು ಕಂಪನಿ ಹೇಳಿದೆ.

ಕಾರು ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ, ಸ್ಕೋಡಾ ಆಟೊದ ಕಾರ್ಯ ನಿರ್ವಹಣಾಧಿಕಾರಿ ಕ್ಲಾಸ್ ಝೆಲ್ಮರ್, ‘ಭಾರತದಲ್ಲೇ ವಿನ್ಯಾಸಗೊಳಿಸಿದ ಸ್ಕೋಡಾದ ಮೊದಲ 4 ಎಂ–ಎಸ್‌ಯುವಿ ಇದಾಗಿದೆ. ನಮ್ಮ ಬ್ರ್ಯಾಂಡ್‌ಗೆ ಹೊಸ ಸೇರ್ಪಡೆಯಾಗಿದೆ. ಜಾಗತಿಕ ಮಟ್ಟದಲ್ಲಿ ವ್ಯವಹಾರ ವಿಸ್ತರಿಸಲು ಭಾರತವೇ ಮುಖ್ಯ ಮಾರುಕಟ್ಟೆಯಾಗಿದೆ’ ಎಂದರು.

ಕಾರಿನ ವೈಶಿಷ್ಟ್ಯ: ‘ಕೈಲಾಕ್’ ಎಂಬ ಹೆಸರು ಭಾರತದ್ದೇ ಆಗಿದ್ದು, ಸಂಸ್ಕೃತದಲ್ಲಿ ‘ಸ್ಫಟಿಕ’ ಎಂಬ ಅರ್ಥವಿದೆ. ಕ್ಲಾಸಿಕ್, ಸಿಗ್ನೇಚರ್, ಸಿಗ್ನೇಚರ್ ಪ್ಲಸ್, ಪ್ರೆಸ್ಟೀಜ್ ವೇರಿಯೆಂಟ್‌ಗಳಲ್ಲಿ ಲಭ್ಯವಿದೆ. 25 ಸುರಕ್ಷತಾ ತಂತ್ರಜ್ಞಾನ ಹೊಂದಿದ್ದು, ಪ್ರಯಾಣಿಕರ ರಕ್ಷಣೆಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಕಂಪನಿ ಹೇಳಿದೆ.

10.5 ಸೆಕೆಂಡ್‌ಗಳಲ್ಲಿ 100 ಕಿ.ಮೀ ವೇಗ ಪಡೆಯುವ ಸಾಮರ್ಥ್ಯ ಹೊಂದಿದೆ. 10.1 ಇಂಚಿನ ಟಚ್‌ಸ್ಕ್ರೀನ್ ಇನ್ಫೊಟೈನ್‌ಮೆಂಟ್ ಸಿಸ್ಟಂ ಹೊಂದಿದ್ದು, ಮುಂಭಾಗದ ಸೀಟುಗಳು ಗಾಳಿಯಾಡುವ ವ್ಯವಸ್ಥೆ ಹೊಂದಿವೆ. ಸನ್‌ರೂಫ್ ಸೌಲಭ್ಯವೂ ಇದೆ. ಆರು ಏರ್‌ಬ್ಯಾಗ್ ಹೊಂದಿದ್ದು, ಎಲೆಕ್ಟ್ರಾನಿಕ್ ನಿಯಂತ್ರಣ ವ್ಯವಸ್ಥೆ, ಟ್ರ್ಯಾಕ್ಷನ್ ಕಂಟ್ರೋಲ್ ಹೊಂದಿದೆ.

ಆಟೊಮ್ಯಾಟಿಕ್ ಮತ್ತು ಮ್ಯಾನ್ಯುವಲ್ (6 ಸ್ಪೀಡ್) ಆಯ್ಕೆಗಳಲ್ಲಿ ಲಭ್ಯವಿದೆ. 189 ಎಂಎಂ ಗ್ರೌಂಡ್ ಕ್ಲಿಯರೆನ್ಸ್ ಹೊಂದಿದ್ದು, 446 ಲೀಟರ್ ಬೂಟ್ ಸ್ಪೇಸ್ ಹೊಂದಿದೆ.



ಮುಂಬೈನ ಜಿಯೊ ಕನ್‌ವೆನ್ಷನ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಕೋಡಾದ ಹೊಸ ಎಸ್‌ಯುವಿ ‘ಕೈಲಾಕ್’ ಅನ್ನು, ಸ್ಕೋಡಾ ಆಟೊದ ಕಾರ್ಯ ನಿರ್ವಹಣಾಧಿಕಾರಿ ಕ್ಲಾಸ್ ಝೆಲ್ಮರ್ ಹಾಗೂ ಸ್ಕೋಡಾ ಆಟೊ ಫೋಕ್ಸ್‌ವ್ಯಾಗನ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಪೀಯೂಷ್ ಅರೋರಾ ಅನಾವರಣಗೊಳಿಸಿದರು —ಪ್ರಜಾವಾಣಿ ಚಿತ್ರ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹1350 (1340)
ಸೂರ್ಯಕಾಂತಿ (ರಿಫೈನ್ಡ್)	₹1380 (1375)
ಪಾಮೋಲಿನ್	₹1370 (1345)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹10800-10800
ಮಧುಗಿರಿ	₹9000-13500
ತುರುವೇಕೆರೆ	₹14000-14700

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	41500-49500
ಕುಮಟ	
ಚಿಪ್ಪು	22219-28669
ಕೋಕ	6019-22699
ಹಳೆಚಾಲಿ	35669-37369
ಹೊಸಚಾಲಿ	28669-33899
ಸಾಗರ	
ಬಿಳಿಗೋಟು	13021-24599
ಚಾಲಿ	26099-32619
ಕೋಕ	10199-23609
ಕೆಂಪುಗೋಟು	14319-29600
ರಾಶಿ	26899-50039
ಸಿಪ್ಪೆಗೋಟು	7099-16199
ಶಿವಮೊಗ್ಗ	
ಬೆಟ್ಟೆ	45000-57009
ಗೊರಬಲು	17550-34369
ಹೊಸತು	38366-49299
ರಾಶಿ	31138-49999
ಸರಕು	54030-86396
ಶಿರಸಿ	
ಬೆಟ್ಟೆ	28491-35299
ಬಿಳಿಗೋಟು	24570-29099
ಚಾಲಿ	32608-35691
ರಾಶಿ	40699-44399
ಯಲ್ಲಾಪುರ	
ಅಪಿ	62479-62479
ಬಿಳಿಗೋಟು	14899-27490
ಚಾಲಿ	27699-35460
ಕೋಕ	4242-13899
ಕೆಂಪುಗೋಟು	16099-23305
ರಾಶಿ	38989-56119

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಕುಸಿತ



ಮುಂಬೈ (ಪಿಟಿಐ): ಸತತ ಎರಡು ದಿನದಿಂದ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು, ಗುರುವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಲಿದೆ ಎಂಬ ಸುಳಿವಿನಿಂದಾಗಿ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಅಲ್ಲದೆ, ವಿದೇಶಿ ಬಂಡವಾಳದ ಹೊರಹರಿವಿನ ಹೆಚ್ಚಳವು ಇದಕ್ಕೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 836 ಅಂಶ ಇಳಿಕೆ ಕಂಡು, 79,541 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 284 ಅಂಶ ಇಳಿಕೆ ಕಂಡು, 24,199 ಅಂಶಗಳಲ್ಲಿ ಸ್ಥಿರಗೊಂಡಿತು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,445 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಚಿನ್ನದ ಧಾರಣೆ ₹1,650 ಬೆಳ್ಳಿ ₹2,900 ಇಳಿಕೆ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆ ಮತ್ತು ಸ್ಥಳೀಯ ಆಭರಣ ತಯಾರಕರಿಂದ ಬೇಡಿಕೆ ಕುಗ್ಗಿರುವುದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹1,650 ಇಳಿಕೆಯಾಗಿ, ₹79,500 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹2,900 ಕಡಿಮೆಯಾಗಿ, ₹93,800ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯಭೇರಿ ಬಾರಿಸಿರುವ ಡೊನಾಲ್ಡ್ ಟ್ರಂಪ್, ವ್ಯಾಪಾರ ವರ್ಗದ ಪರವಾಗಿ ಹೆಚ್ಚು ಒಲವು ಹೊಂದಿದ್ದಾರೆ. ಹಾಗಾಗಿ, ಹೂಡಿಕೆದಾರರು ಹಳದಿ ಲೋಹದ ಬದಲಿಗೆ ಬಿಟ್‌ಕಾಯಿನ್ ಮತ್ತು ಈಕ್ವಿಟಿಗಳಲ್ಲಿ ಹೂಡಿಕೆಗೆ ಮುಂದಾಗಿದ್ದಾರೆ. ಇದರಿಂದ ಚಿನ್ನದ ಬೆಲೆಯು ಇಳಿಕೆಯಾಗಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಅಮೆರಿಕದ ಬಾಂಡ್ ಗಳಿಕೆ ಮತ್ತು ಡಾಲರ್ ಮೌಲ್ಯದ ಏರಿಕೆ ಕೂಡ ಹಳದಿ ಲೋಹದ ದರ ಇಳಿಕೆಯ ಮೇಲೆ ಪರಿಣಾಮ ಬೀರಿದೆ ಎಂದು ತಿಳಿಸಿದ್ದಾರೆ.

ಬಡ್ಡಿದರ ಹೆಚ್ಚಿಸಿದ ಎಚ್‌ಡಿಎಫ್‌ಸಿ ಬ್ಯಾಂಕ್

HDFC BANK

ನವದೆಹಲಿ (ಪಿಟಿಐ): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್ ಗುರುವಾರ ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದೆ. ಈ ಹೊಸ ಬಡ್ಡಿದರವು ಗುರುವಾರದಿಂದಲೇ ಜಾರಿಗೆ ಬಂದಿದೆ.

ಇದರಿಂದ ವಾಹನಗಳು ಹಾಗೂ ವೈಯಕ್ತಿಕ ಸಾಲಗಳ ಮೇಲಿನ ಇಎಂಐ ಹೆಚ್ಚಳವಾಗಲಿದೆ. ಬಡ್ಡಿದರವು ಶೇ 9.45ಕ್ಕೆ ಹೆಚ್ಚಳವಾಗಿದೆ.

ತ್ವರಿತಗತಿ ಸಾಲದ ಎಂಸಿಎಲ್‌ಆರ್ ಶೇ 9.10ರಿಂದ ಶೇ 9.15ಕ್ಕೆ ಹೆಚ್ಚಳವಾಗಿದೆ. ಒಂದು ತಿಂಗಳ ಎಂಸಿಎಲ್‌ಆರ್ ಶೇ 9.20ಕ್ಕೆ ಏರಿಕೆಯಾಗಿದೆ.

ಕಳೆದ ತಿಂಗಳು ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಇದರ ಬೆನ್ನಲ್ಲೇ ಎಚ್‌ಡಿಎಫ್‌ಸಿ ಬ್ಯಾಂಕ್ ಬಡ್ಡಿದರವನ್ನು ಏರಿಕೆ ಮಾಡಿದೆ.

ಜೆಟ್ ಏರ್‌ವೇಸ್ ಸಮಾಪ್ತಿಗೆ ಸುಪ್ರೀಂ ಕೋರ್ಟ್ ಆದೇಶ

ನವದೆಹಲಿ (ಪಿಟಿಐ): ಜೆಟ್ ಏರ್‌ವೇಸ್ ಕಂಪನಿಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡಲು ಸುಪ್ರೀಂ ಕೋರ್ಟ್ ಗುರುವಾರ ಆದೇಶ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಈ ತೀರ್ಪು ಪ್ರಕಟಿಸಿದೆ.

ನರೇಶ್ ಗೋಯಲ್ ಅವರು ಸ್ಥಾಪಿಸಿದ ಈ ವಿಮಾನಯಾನ ಕಂಪನಿಯು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದರಿಂದ 2019ರಲ್ಲಿ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತ್ತು. ಅತಿಹೆಚ್ಚು ಸಾಲ ನೀಡಿದ್ದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ಕಂಪನಿ ವಿರುದ್ಧ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಮುಂಬೈ ಶಾಖೆಯಲ್ಲಿ ದಿವಾಳಿ ಪ್ರಕ್ರಿಯೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿತ್ತು.

2021ರಲ್ಲಿ ಜಲನ್ ಕಲ್ರಾಕ್ ಕನ್ಸೋರ್ಟಿಯಂ ಕಂಪನಿಯು (ಜೆಕೆಸಿ) ಈ ವಿಮಾನಯಾನ ಕಂಪನಿಯ ಖರೀದಿಗೆ ಬಿಡ್ ಸಲ್ಲಿಸಿತ್ತು. ನಿಗದಿತ ಅವಧಿಯೊಳಗೆ ಸಾಲಗಾರರಿಗೆ ಬಾಕಿ ಹಣ ಪಾವತಿಸಬೇಕು ಎಂಬ ಷರತ್ತಿನೊಂದಿಗೆ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು ಇದಕ್ಕೆ ಒಪ್ಪಿಗೆ ನೀಡಿತ್ತು. ಆದರೆ, ಜೆಕೆಸಿಯು ಹಣ ಪಾವತಿಸುವಲ್ಲಿ ವಿಫಲವಾಗಿದ್ದರಿಂದ ಜೆಟ್ ಏರ್‌ವೇಸ್‌ನ ಆಸ್ತಿಗಳನ್ನು ಮಾರಾಟ ಮಾಡಿ ಕಂಪನಿಯನ್ನು ಸಮಾಪ್ತಿಗೊಳಿಸಲು ನ್ಯಾಯಪೀಠ ಸೂಚಿಸಿದೆ. ದೇಶದಲ್ಲಿ 25 ವರ್ಷದವರೆಗೆ ಸೇವೆ ನೀಡಿದ್ದ ಈ ವಿಮಾನಯಾನ ಕಂಪನಿಯಲ್ಲಿ 1,300 ಪೈಲಟ್‌ಗಳು ಮತ್ತು 20 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳಿದ್ದರು. ಸೇವೆ ಸ್ಥಗಿತಗೊಂಡ ವೇಳೆ ಉದ್ಯೋಗಿಗಳ ಸಂಬಳ ಮತ್ತು ಬ್ಯಾಂಕ್‌ಗಳ ಬಾಕಿ ಸಾಲದ ಮೊತ್ತ ₹8,500 ಕೋಟಿ ಇತ್ತು.

ಕೆನಡಾ: ಭಾರತದ ಕಾನ್ಸುಲರ್ ಶಿಬಿರ ರದ್ದು

ಟೊರಾಂಟೊ (ಪಿಟಿಐ): ಕೆನಡಾದ ವಿವಿಧೆಡೆ ನಡೆಸಲು ಉದ್ದೇಶಿಸಿರುವ ಕೆಲವು ಕಾನ್ಸುಲರ್ ಶಿಬಿರಗಳನ್ನು ರದ್ದುಗೊಳಿಸಿರುವುದಾಗಿ ಭಾರತದ ಕಾನ್ಸುಲೇಟ್ ಜನರಲ್ ಕಚೇರಿ ಗುರುವಾರ ಹೇಳಿದೆ.

ಕಾನ್ಸುಲರ್ ಶಿಬಿರಗಳಿಗೆ ಕನಿಷ್ಠ ಭದ್ರತೆ ಒದಗಿಸಲು ಅಸಮರ್ಥರಾಗಿದ್ದೇವೆ ಎಂದು ಕೆನಡಾದ ಭದ್ರತಾ ಅಧಿಕಾರಿಗಳು ಹೇಳಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿದೆ.

ಹಿಂದೂ ಸಭಾ ಮಂದಿರ ಮತ್ತು ಭಾರತದ ದೂತವಾಸ ಕಚೇರಿಯು ಬ್ರಾಂಪ್ಟನ್‌ನಲ್ಲಿ ಜಂಟಿಯಾಗಿ ಆಯೋಜಿಸಿದ್ದ ಕಾನ್ಸುಲರ್ ಶಿಬಿರದ ತಾಣಕ್ಕೆ ಖಾಲಿಸ್ತಾನಿ ಪರ ಹೋರಾಟಗಾರರು ನುಗ್ಗಿ, ಅಲ್ಲಿದ್ದವರೊಂದಿಗೆ ಘರ್ಷಣೆ ನಡೆಸಿದ್ದ ಘಟನೆ ಈಚೆಗೆ ನಡೆದಿತ್ತು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

‘ಶಿಬಿರಗಳಿಗೆ ಭದ್ರತೆ ಒದಗಿಸಲು ಸಾಧ್ಯವಿಲ್ಲ ಎಂದು ಭದ್ರತಾ ಏಜೆನ್ಸಿಗಳು ತಿಳಿಸಿವೆ. ಆದ್ದರಿಂದ ನಿಗದಿತ ಶಿಬಿರಗಳನ್ನು ರದ್ದುಗೊಳಿಸಿದ್ದೇವೆ’ ಎಂದು ಭಾರತದ ಕಾನ್ಸುಲರ್ ಜನರಲ್ ‘ಎಕ್ಸ್’ನಲ್ಲಿ ಪ್ರಕಟಿಸಿದ್ದಾರೆ.

ಖಾಲಿಸ್ತಾನ ಧ್ವಜಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಹಿಂದೂ ಸಭಾ ದೇವಾಲಯದ ಆವರಣದೊಳಗೆ ನುಗ್ಗಿ, ದಾಂದಲೆ ನಡೆಸಿದ್ದ ಘಟನೆಯನ್ನು ಭಾರತ ತೀವ್ರವಾಗಿ ಖಂಡಿಸಿತ್ತು. ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅವರೂ ಈ ಘಟನೆಯನ್ನು ಖಂಡಿಸಿದ್ದರು.

ಹಿಂಸೆಗೆ ಪ್ರಚೋದನೆ: ಅರ್ಚಕ ಅಮಾನತು

ಒಟ್ಟಾವ (ಪಿಟಿಐ): ಖಾಲಿಸ್ತಾನಿ ಪರ ಹೋರಾಟಗಾರರು ಹಾಗೂ ಭಾರತೀಯರ ಮಧ್ಯೆ ಬ್ರಾಂಪ್ಟನ್‌ನ ಹಿಂದೂ ಸಭಾ ದೇವಾಲಯದ ಎದುರು ನ.3ರಂದು ನಡೆದ ಘರ್ಷಣೆ ಸಂಬಂಧ ದೇವಾಲಯದ ಆಡಳಿತ ಮಂಡಳಿಯು ಅರ್ಚಕನನ್ನು ಅಮಾನತು ಮಾಡಿದೆ. ಹಿಂಸೆಗೆ ಪ್ರಚೋದನೆ ನೀಡಿದ್ದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಇದೇ ವೇಳೆ ‘ಆಂಟೇರಿಯೊ ಸಿಖ್ ಆ್ಯಂಡ್ ಗುರುದ್ವಾರ ಕೌನ್ಸಿಲ್’ ಸಂಸ್ಥೆಯು ಘಟನೆಯನ್ನು ಖಂಡಿಸಿ ಹೇಳಿಕೆ ಬಿಡುಗಡೆ ಮಾಡಿದೆ. ‘ನಮ್ಮ ಧರ್ಮದಲ್ಲಿ ಹಿಂಸೆ ಹಾಗೂ ಸಂಘರ್ಷಕ್ಕೆ ಜಾಗವಿಲ್ಲ. ದೇವಾಲಯಗಳು ಅಧ್ಯಾತ್ಮಕ್ಕೆ, ಸಮುದಾಯದ ಒಗ್ಗಟ್ಟಿಗೆ, ಹಿಂಸೆಯಿಂದ ದೂರವಿರುವ ಸ್ಥಳವಾಗಬೇಕು. ಶಾಂತಿ ನೆಲಸಲು ಎಲ್ಲ ಧರ್ಮಗಳ ಅನುಯಾಯಿಗಳು ಸಂಯಮದಿಂದ ಇರಬೇಕು, ಪರಸ್ಪರ ಮಾತುಕತೆ ನಡೆಸಬೇಕು’ ಎಂದು ಸಂಸ್ಥೆ ಆಗ್ರಹಿಸಿದೆ.

‘ಅನುಮತಿ ಇಲ್ಲದೆ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಕ್ಕೆ ದೇವಾಲಯದ ಅರ್ಚಕ ರಾಜಿಂದರ್ ಪ್ರಸಾದ್ ಅವರನ್ನು ತಕ್ಷಣದಿಂದಲೇ ಜಾರಿಯಾಗುವಂತೆ ಅಮಾನತು ಮಾಡಲಾಗಿದೆ’ ಎಂದು ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಮಧುಸೂದನ್ ಲಾಮಾ ಹೇಳಿದರು.

ಗುರುದ್ವಾರ ಸಂಸ್ಥೆಯ ಹೇಳಿಕೆಯ ಪ್ರತಿಯನ್ನು ಹಾಗೂ ಅಮಾನತು ಪ್ರತಿಯನ್ನು ಬ್ರಾಂಪ್ಟನ್‌ನ ಮೇಯರ್ ಪ್ಯಾಟ್ರಿಕ್ ಬ್ರೌನ್ ಅವರು ಬುಧವಾರ ತಮ್ಮ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

ಕಾನೂನು ಜಾರಿಗೆ ಆಸ್ಟ್ರೇಲಿಯಾ ಸರ್ಕಾರ ಸಿದ್ಧತೆ

ಜಾಲತಾಣ: 16ರ ಒಳಗಿನವರಿಗೆ ನಿರ್ಬಂಧ


ಮೆಲ್ಬರ್ನ್ (ಎಪಿ): 16 ವರ್ಷದ ಒಳಗಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸುವುದನ್ನು ನಿಷೇಧಿಸುವ ಸಂಬಂಧ ಕಾನೂನು ಜಾರಿಗೊಳಿಸಲು ಆಸ್ಟ್ರೇಲಿಯಾ ಸರ್ಕಾರ ಸಿದ್ಧತೆ ನಡೆಸಿದ್ದು ‘ಈ ಕಾನೂನು ಜಗತ್ತಿಗೆ ದಾರಿ ದೀಪವಾಗಬಲ್ಲದು’ ಎಂದು ಬಣ್ಣಿಸಿದೆ.

ಒಂದು ವೇಳೆ 16 ವರ್ಷದ ಒಳಗಿನ ಮಕ್ಕಳು ಜಾಲತಾಣಗಳಲ್ಲಿ ಖಾತೆ ತೆರೆದರೆ ಅದಕ್ಕೆ ಆಯಾ ಜಾಲತಾಣ ವೇದಿಕೆಗಳೇ ಹೊಣೆ ಎನ್ನುವ ಅಂಶವೂ ಕಾನೂನಿನಲ್ಲಿ ಇರಲಿದೆ. ‘ಸಾಮಾಜಿಕ ಮಾಧ್ಯಮವು ಮಕ್ಕಳನ್ನು ತಪ್ಪು ದಾರಿಗೆ ಎಳೆಯುತ್ತಿದೆ. ಇದನ್ನು ಇಲ್ಲಿಗೇ ಅಂತ್ಯಗೊಳಿಸಬೇಕು ಎಂದು ನಿರ್ಧರಿಸಿದ್ದೇನೆ’ ಎಂದು ಪ್ರಧಾನಿ ಆ್ಯಂಟೊನಿ ಅಲ್ಬನೀಸ್ ಗುರುವಾರ ಪತ್ರಕರ್ತರಿಗೆ ತಿಳಿಸಿದರು.

‘ನವೆಂಬರ್ 18ರಿಂದ ಅಧಿವೇಶನ ಆರಂಭವಾಗಲಿದೆ. ಅಧಿವೇಶನ ಅಂತ್ಯವಾಗುವ ಎರಡು ವಾರಗಳ ಮೊದಲೇ ಮಸೂದೆ ಮಂಡಿಸಲಾಗುವುದು. ಇದು ಅಂಗೀಕಾರವಾದ 12 ತಿಂಗಳ ಬಳಿಕ ಕಾನೂನು ಜಾರಿಯಾಗಲಿದೆ’ ಎಂದರು.

‘ಎಕ್ಸ್’, ಟಿಕ್‌ಟಾಕ್, ಇನ್‌ಸ್ಟಾಗ್ರಾಮ್ ಹಾಗೂ ಫೇಸ್‌ಬುಕ್‌ನಲ್ಲಿ ಈಗಾಗಲೇ ಖಾತೆ ಹೊಂದಿರುವ ಆಸ್ಟ್ರೇಲಿಯಾದ 16 ವರ್ಷದ ಒಳಗಿನ ಮಕ್ಕಳನ್ನು ವೇದಿಕೆಯಿಂದ ಹೇಗೆ ಹೊರಹಾಕಬೇಕು ಎನ್ನುವುದರ ಕುರಿತು ಆಯಾ ವೇದಿಕೆಗಳೇ ದಾರಿ ಕಂಡುಕೊಳ್ಳಬೇಕಿದೆ’ ಎಂದರು.

‘16 ವರ್ಷದ ಒಳಗಿನ ಮಕ್ಕಳ ಖಾತೆಗಳು ಯಾವುದೇ ಜಾಲತಾಣ ವೇದಿಕೆಗಳಲ್ಲಿ ಇದ್ದರೆ, ಆಯಾ ವೇದಿಕೆಗಳೇ ಇದಕ್ಕೆ ಹೊಣೆಗಾರರು ಹೊರತು ಮಕ್ಕಳು ಹಾಗೂ ಅಥವಾ ಪೋಷಕರು ಅಲ್ಲ. ಈ ಸಂಬಂಧ ವೇದಿಕೆಗಳಿಗೆ ದಂಡವನ್ನೂ ವಿಧಿಸಲಾಗುತ್ತದೆ’ ಎಂದು ಸ್ಪಷ್ಟಪಡಿಸಿದರು.



ತಜ್ಞರ ವಿರೋಧ

ಸಾಮಾಜಿಕ ಜಾಲತಾಣಗಳ ಬಳಕೆಗೆ ವಯೋಮಿತಿ ನಿಗದಿಪಡಿಸುವುದನ್ನು ವಿರೋಧಿಸಿ ತಂತ್ರಜ್ಞಾನ ಹಾಗೂ ಮಕ್ಕಳ ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿ ಆಸ್ಟ್ರೇಲಿಯಾ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಸುಮಾರು 140 ಅಕಾಡೆಮಿಗಳು ಪ್ರಧಾನಿ ಆ್ಯಂಟೊನಿ ಅಲ್ಬನೀಸ್ ಅವರಿಗೆ ಕಳೆದ ತಿಂಗಳು ಪತ್ರ ಬರೆದಿವೆ. ‘ಇದು ಅಪಾಯವನ್ನು ಎದುರಿಸುವ ಸೂಕ್ತ ಕ್ರಮವಲ್ಲ’ ಎಂದು ಅಭಿಪ್ರಾಯಪಟ್ಟಿವೆ.

‘ಆಸ್ಟ್ರೇಲಿಯಾದ ಶೇ 73ರಷ್ಟು ಮಕ್ಕಳು ತಮ್ಮ ಜಾಲತಾಣ ಖಾತೆಗಳ ಮೂಲಕವೇ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ ಪಡೆದುಕೊಂಡಿದ್ದಾರೆ. ವಯೋಮಿತಿ ನಿಗದಿಯನ್ನು ನಾನು ವಿರೋಧಿಸುತ್ತೇನೆ’ ಎನ್ನುತ್ತಾರೆ ಯುವಕರ ಮಾನಸಿಕ ಸೇವಾ ಸಂಸ್ಥೆ ‘ರೀಚ್‌ಔಟ್’ನ ನಿರ್ದೇಶಕಿ ಜಾಕಿ ಹಲ್ಲಾನ್.

ವಯೋಮಿತಿ ನಿಗದಿಪಡಿಸುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ, ಮಕ್ಕಳನ್ನು ಸುರಕ್ಷಿತ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಕುರಿತು ಆಳವಾದ ಚರ್ಚೆಯ ಅಗತ್ಯವಿದೆ. ಆ್ಯಪ್ ಸ್ಟೋರ್‌ಗಳಲ್ಲಿ, ಆಪರೇಟಿಂಗ್ ವ್ಯವಸ್ಥೆಯಲ್ಲಿ ಮಕ್ಕಳ ಆನ್‌ಲೈನ್ ಚಟುವಟಿಕೆಯನ್ನು ನಿಯಂತ್ರಿಸುವ ಶಕ್ತಿಯುತ ಟೂಲ್‌ವೊಂದನ್ನು ಪೋಷಕರಿಗೆ ನೀಡುವುದು ಸರಳ ಹಾಗೂ ಪರಿಣಾಮಕಾರಿ ಉಪಾಯವಾಗಬಹುದು

ಆ್ಯಂಟಿಗೋನ್ ಡೇವಿಸ್, ಮುಖ್ಯಸ್ಥೆ, ‘ಮೆಟಾ’ದ ಸುರಕ್ಷತಾ ವಿಭಾಗ

21ನೇ ಶತಮಾನದ ಸಮಸ್ಯೆಗೆ 20ನೇ ಶತಮಾನದ ಪ್ರತಿಕ್ರಿಯೆ ಇದು. ಖಾತೆ ರದ್ದು ಮಾಡುವ ಬದಲು, ಡಿಜಿಟಲ್ ಸಾಕ್ಷರತೆಯನ್ನು ಹೆಚ್ಚಿಸುವ ಕೆಲಸವಾಗಬೇಕು. ಜೊತೆಗೆ ವಯೋಮಾನಕ್ಕೆ ತಕ್ಕ ಡಿಜಿಟಲ್ ವೇದಿಕೆಗಳನ್ನು ಸೃಷ್ಟಿಸಿಕೊಡುವುದು ಉತ್ತಮ

ಸುನಿತಾ ಬೋಸ್, ವ್ಯವಸ್ಥಾಪಕ ನಿರ್ದೇಶಕಿ, ಡಿಜಿಟಲ್ ಇಂಡಸ್ಟ್ರಿ ಗ್ರೂಪ್ ಇಂಕ್

ನಟ ಶಾರುಕ್ ಖಾನ್‌ಗೆ ಜೀವ ಬೆದರಿಕೆ ಕರೆ


ಶಾರುಕ್ ಖಾನ್

ಮುಂಬೈ/ರಾಯಪುರ (ಪಿಟಿಐ): ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನಿಂದ ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಜೀವ ಬೆದರಿಕೆ ಸಂದೇಶಗಳು ಬರುತ್ತಿರುವ ಪ್ರಕರಣಗಳು ದಾಖಲಾಗುತ್ತಿರುವ ಬೆನ್ನಲ್ಲೇ ಈಗ ನಟ ಶಾರುಕ್ ಖಾನ್ ಅವರಿಗೂ ವ್ಯಕ್ತಿಯೊಬ್ಬರಿಂದ ಜೀವ ಬೆದರಿಕೆ ಕರೆ ಬಂದಿದೆ. ₹50 ಲಕ್ಷದ ಬೇಡಿಕೆಯನ್ನೂ ಇಡಲಾಗಿದೆ.

ಶಾರುಕ್ ಖಾನ್ ಅವರಿಗೆ ಬೆದರಿಕೆವೊಡ್ಡಿದ ಕರೆಯು ಬಾಂದ್ರಾ ಪೊಲೀಸ್ ಠಾಣೆಗೆ ಬಂದಿತ್ತು. ಮುಂಬೈ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದರು. ಹೆಚ್ಚಿನ ತನಿಖೆಗಾಗಿ ಛತ್ತೀಸಗಢದ ರಾಯಪುರ ಸೇರಿ ಬೇರೆ ಬೇರೆ ರಾಜ್ಯಗಳ ವಿವಿಧೆಡೆ ಪೊಲೀಸರ ತಂಡ ತೆರಳಿತ್ತು.

‘ಪ್ರಕರಣ ಸಂಬಂಧ ಮುಂಬೈ ಪೊಲೀಸರು ಗುರುವಾರ ಬೆಳಿಗ್ಗೆ ರಾಯಪುರಕ್ಕೆ ಬಂದಿದ್ದರು. ರಾಯಪುರದ ವಕೀಲ ಫೈಜಾನ್ ಖಾನ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿದರು. ನಂತರ, ಫೈಜಾನ್ ವಿಚಾರಣೆಗೆ ಹಾಜರಾಗಿ, ಕಳೆದ ವಾರವೇ ತಮ್ಮ ಮೊಬೈಲ್ ಕಳವಾಗಿದ್ದರ ಬಗ್ಗೆ ಹಾಗೂ ಈ ಸಂಬಂಧ ದೂರು ನೀಡಿದ್ದರ ಬಗ್ಗೆ ಮಾಹಿತಿ ನೀಡಿದರು’ ಎಂದು ರಾಯಪುರದ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಸಿಂಗ್ ಹೇಳಿದರು.

‘ಬಾಂದ್ರಾ ಪೊಲೀಸ್ ಠಾಣೆಗೂ ವಿಚಾರಣೆಗೆ ಹಾಜರಾಗುವಂತೆ ಫೈಜಾನ್ ಅವರಿಗೆ ಮುಂಬೈ ಪೊಲೀಸರು ತಿಳಿಸಿದರು’ ಎಂದರು.

‘ಬೆದರಿಕೆ ಕರೆಯು ಛತ್ತೀಸಗಢದ ರಾಯಪುರದಿಂದಲೇ ಬಂದಿದೆ ಎನ್ನುವ ಕುರಿತು ಖಚಿತ ಮಾಹಿತಿಗಳಿಲ್ಲ. ಆದರೆ, ಬೆದರಿಕೆ ಕರೆ ಬಂದಿರುವ ಮೊಬೈಲ್ ಸಂಖ್ಯೆಯು ಫೈಜಾನ್ ಅವರ ಹೆಸರಿನಲ್ಲಿ ನೋಂದಣಿಯಾಗಿದೆ’ ಎಂದು ಮುಂಬೈ ಪೊಲೀಸರು ಹೇಳಿದರು.

ಝೀಕಾ: ಚಿಕಿತ್ಸೆ ಬಳಿಕ ರೋಗಿ ಮನೆಗೆ

ಅಹಮದಾಬಾದ್ (ಪಿಟಿಐ): ಗಾಂಧಿನಗರದ 70 ವರ್ಷದ ವ್ಯಕ್ತಿಯೊಬ್ಬರಿಗೆ ಝೀಕಾ ಸೋಂಕು ದೃಢಪಟ್ಟಿದ್ದು, ಪೂರ್ಣ ಚೇತರಿಸಿಕೊಂಡ ಬಳಿಕ ಅವರನ್ನು ಮನೆಗೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಅ. 24ರಂದು ಶೀತ, ಜ್ವರ ಮತ್ತು ಕೀಲು ನೋವಿನಿಂದ ಬಳಲುತ್ತಿದ್ದ ಅವರು ಗಾಂಧಿನಗರದ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಅವರ ದೇಹದ ಕೆಲ ದ್ರವರೂಪದ ಮಾದರಿಯನ್ನು ಪುಣೆಯಲ್ಲಿನ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಪರೀಕ್ಷೆಗೆಂದು ಕಳುಹಿಸಲಾಗಿತ್ತು. ವರದಿ ನಾಲ್ಕು ದಿನಗಳ ಹಿಂದೆ ಬಂದಿದ್ದು, ಅವರಿಗೆ ಸೋಂಕು ದೃಢಪಟ್ಟಿತ್ತು.

ಆ ವ್ಯಕ್ತಿಯೂ ಪೂರ್ಣ ಗುಣಮುಖರಾಗಿದ್ದರಿಂದ ವಾರದ ಹಿಂದೆಯಷ್ಟೇ ಅವರನ್ನು ಮನೆಗೆ ಕಳುಹಿಸಲಾಗಿದೆ ಎಂದು ಗುಜರಾತಿನ ಆರೋಗ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಮತ್ತೆ ಗದ್ದಲ, ಪ್ರತಿಭಟನೆ: ಬಿಜೆಪಿಯ ಮೂವರು ಶಾಸಕರನ್ನು ಹೊರ ಹಾಕಿದ ಮಾರ್ಷಲ್‌ಗಳು

ಶ್ರೀನಗರ: ವಿಧಾನಸಭೆಯಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ/ಪಿಟಿಐ


ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಸುಗಮ ಕಲಾಪಕ್ಕೆ ಅಡ್ಡಿಪಡಿಸಿದ ಬಿಜೆಪಿಯ ಕೆಲ ಶಾಸಕರನ್ನು ಸದನದಿಂದ ಹೊರಕ್ಕೆ ಕರೆದುಕೊಂಡು ಹೋಗಲು ಮಾರ್ಷಲ್‌ಗಳು ಹರಸಾಹಸ ಪಟ್ಟರು —ಪಿಟಿಐ ಚಿತ್ರ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಗುರುವಾರ ನಡೆದ ಕಲಾಪದಲ್ಲೂ ಗದ್ದಲ, ಪ್ರತಿಭಟನೆಗಳು ಮುಂದುವರಿದವು. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ಮತ್ತೆ ಸ್ಥಾಪಿಸಲು ಒತ್ತಾಯಿಸಿ ಅಂಗೀಕರಿಸಿದ ನಿರ್ಣಯವನ್ನು ವಿರೋಧಿಸಿ ಸ್ಪೀಕರ್ ಪೀಠದ ಮುಂದೆ ನುಗ್ಗಿದ ಮೂವರು ಬಿಜೆಪಿ ಶಾಸಕರನ್ನು ಸದನದಿಂದ ಹೊರ ಹಾಕಲಾಯಿತು. ಈ ವೇಳೆ ಬಿಜೆಪಿ ಸದಸ್ಯರು ಮತ್ತು ಮಾರ್ಷಲ್‌ಗಳ ನಡುವೆ ತಳ್ಳಾಟ, ನೂಕಾಟ ನಡೆಯಿತು.

ತೀವ್ರ ಗದ್ದಲ, ವಾಕ್ಸಮರದ ನಡುವೆ ಸ್ಪೀಕರ್ ಪೀಠದತ್ತ ನುಗ್ಗಿದ ಮೂವರು ಬಿಜೆಪಿ ಸದಸ್ಯರನ್ನು ಸದನದಿಂದ ಹೊರಕ್ಕೆ ಕಳುಹಿಸುವಂತೆ ಸ್ಪೀಕರ್ ಅಬ್ದುಲ್ ರಹೀಂ ರಾಥರ್ ಅವರು ನಿರ್ದೇಶನ ನೀಡಿದರು. ಅದರಂತೆ ಮಾರ್ಷಲ್‌ಗಳು ಶಾಸಕರನ್ನು ಹೊರ ಹಾಕಿದರು. ಆ ಬಳಿಕವೂ ಗದ್ದಲ, ಪ್ರತಿಭಟನೆ ಮುಂದುವರಿದಿದ್ದರಿಂದ ಕೆಲ ಬಾರಿ ಕಲಾಪ ಮುಂದೂಡಿದ ಸ್ಪೀಕರ್, ಅಂತಿಮವಾಗಿ ದಿನದಮಟ್ಟಿಗೆ ಕಲಾಪವನ್ನು ಮುಂದೂಡಿದರು.

ನಡೆದಿದ್ದೇನು: ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಶಾಸಕರು ಬುಧವಾರದ ನಿರ್ಣಯ ವಿರೋಧಿಸಿ ಪ್ರತಿಭಟನೆ ಮುಂದುವರಿಸಿದರು. ‘ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ ಶಾಸಕಾಂಗದ ಕಾರ್ಯವಿಧಾನಗಳನ್ನು ಮೀರಿ ನಡೆದುಕೊಂಡಿದೆ. ಹೀಗೆ ನಿರ್ಣಯ ಅಂಗೀಕರಿಸಿರುವುದು ಸಂವಿಧಾನಬಾಹಿರ. ನೀವು ಸದನದ ನಿಯಮಗಳನ್ನು ಉಲ್ಲಂಘಿಸಿದ್ದೀರಿ’ ಎಂದು ಬಿಜೆಪಿ ಶಾಸಕರೂ ಆಗಿರುವ ವಿರೋಧ ಪಕ್ಷದ ನಾಯಕ ಸುನೀಲ್ ಶರ್ಮಾ ಆರೋಪಿಸಿದರು.

ಮುಖ್ಯಾಂಶಗಳು

- ದಿನದ ಮಟ್ಟಿಗೆ ಕಲಾಪ ಮುಂದೂಡಿದ ಸ್ಪೀಕರ್
- ಸ್ಪೀಕರ್ ಪೀಠದ ಮುಂದೆ ಘೋಷಣೆ ಕೂಗಿದ ಶಾಸಕರು

ಈ ವೇಳೆ ಅವಾಮಿ ಇತೆಹಾದ್ ಪಕ್ಷದ ಶಾಸಕ ಶೇಖ್ ಖುರ್ಷಿದ್ ಅವರು ವಿಧಿ 370ರ ಅಡಿ ವಿಶೇಷ ಸ್ಥಾನಮಾನ ಮತ್ತು ವಿಧಿ 35ಎ ಅನ್ನು ಮತ್ತೆ ಸ್ಥಾಪಿಸುವಂತೆ ಬ್ಯಾನರ್ ಹಿಡಿದು ಸ್ಪೀಕರ್ ಪೀಠದ ಮುಂದೆ ಬಂದು ಘೋಷಣೆಗಳನ್ನು ಕೂಗಿದರು. ಇದರಿಂದ ಕೆರಳಿದ ಬಿಜೆಪಿ ಸದಸ್ಯರು ಸ್ಪೀಕರ್ ಪೀಠದ ಮುಂದೆ ನುಗ್ಗಿ ಬ್ಯಾನರ್ ಕಸಿದುಕೊಂಡು, ಕಿತ್ತು ಹಾಕಿದರು. ಈ ವೇಳೆ ತೀವ್ರ ಗದ್ದಲ ಉಂಟಾಗಿದ್ದರಿಂದ ಸ್ಪೀಕರ್ ಕಲಾಪವನ್ನು 15 ನಿಮಿಷ ಮುಂದೂಡಿದರು. ಕಲಾಪ ಮತ್ತೆ ಆರಂಭವಾದಾಗಲೂ ಬಿಜೆಪಿ ಶಾಸಕರು ಪ್ರತಿಭಟನೆ ಮುಂದುವರಿಸಿದರು.

ಸ್ಪೀಕರ್ ನಿರ್ದೇಶನದ ಮೇರೆಗೆ ಮೂವರು ಶಾಸಕರನ್ನು ಕಲಾಪದಿಂದ ಹೊರ ಹಾಕಲು ಬಂದ ಮಾರ್ಷಲ್‌ಗಳ ಜತೆಗೂ ಬಿಜೆಪಿ ಶಾಸಕರು ವಾಗ್ವಾದ ನಡೆಸಿದರು. ಸ್ಪೀಕರ್ ಪೀಠದ ಮುಂದಿನ ಮೇಜಿನ ಮೇಲೆ ನಿಂತಿದ್ದ ಮಹಿಳಾ ಶಾಸಕಿ ಶಗುನ್ ಪರಿಹಾರ್ ಅವರನ್ನು ಹೊರ ಹಾಕಲು ಮಹಿಳಾ ಮಾರ್ಷಲ್‌ಗಳನ್ನು ಕರೆಸಲಾಯಿತು. ಶಾಸಕರನ್ನು ಸದನದಿಂದ ಹೊರಗೆ ಕರೆದುಕೊಂಡು ಹೋಗಲು ಮಾರ್ಷಲ್‌ಗಳು ಹರಸಾಹಸಪಟ್ಟರು.

ಸ್ಪೀಕರ್ ಹಲವು ಬಾರಿ ಮಾಡಿದ ಮನವಿಯ ಬಳಿಕವೂ ವಿರೋಧ ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ವಾಕ್ಸಮರ ಮುಂದುವರಿಯಿತು. ಆಗ ಸ್ಪೀಕರ್ ಯಾವುದನ್ನೂ ಕಡತಕ್ಕೆ ಸೇರಿಸಬಾರದು ಎಂದೂ ನಿರ್ದೇಶನ ನೀಡಿದರು.

‘ಅವಿಶ್ವಾಸ ನಿರ್ಣಯ ಮಂಡಿಸಲಿ’

ಬಿಜೆಪಿ ಬೇಡಿಕೆಯನ್ನು ತಿರಸ್ಕರಿಸಿದ ಸ್ಪೀಕರ್ ಅಬ್ದುಲ್ ರಹೀಂ ರಾಥರ್ ಅವರು, ‘ಬಿಜೆಪಿಗೆ ನನ್ನ ಮೇಲೆ ನಂಬಿಕೆ ಇಲ್ಲದಿದ್ದರೆ ಅವಿಶ್ವಾಸ ನಿರ್ಣಯ ಮಂಡಿಸಲಿ’ ಎಂದರು.

‘ಸದಸ್ಯರು ಸ್ಪೀಕರ್ ಪೀಠದ ಮುಂದೆ ನುಗ್ಗುವುದು ಮತ್ತು ಕಾರ್ಯದರ್ಶಿ ಕುರ್ಚಿಯ ಮೇಲಿನ ರಾಷ್ಟ್ರೀಯ ಲಾಂಛನವನ್ನು ತುಳಿಯುವುದನ್ನು ಸಹಿಸಲು ಆಗದು’ ಎಂದು ಹೇಳಿದರು.

‘ಸದನ ಅಂಗೀಕರಿಸಿದ ನಿರ್ಣಯವನ್ನು ಹಿಂದಕ್ಕೆ ಪಡೆಯಲು ನನಗೆ ಅಧಿಕಾರವಿಲ್ಲ. ಆ ಅಧಿಕಾರ ಇರುವುದು ಸದನಕ್ಕೆ ಮಾತ್ರ. ಆ ವಿಷಯದಲ್ಲಿ ಸ್ಪೀಕರ್ ಅಧಿಕಾರ ಸೀಮಿತ’ ಎಂದು ಅವರು ಪಿಟಿಐಗೆ ತಿಳಿಸಿದರು.

‘ಭಾರತ್ ಮಾತಾ ಕಿ ಜೈ’ ಘೋಷಣೆ

‘ಭಾರತ್ ಮಾತಾ ಕಿ ಜೈ’ ಘೋಷಣೆಗಳನ್ನು ಬಿಜೆಪಿ ಶಾಸಕರು ಕೂಗಿದರು. ಆಗ ಮಾತನಾಡಿದ ಸಚಿವ ಸತೀಶ್ ಶರ್ಮಾ ಅವರು ‘ಬಿಜೆಪಿ ಒಡೆದು ಆಳುವ ನಾಟಕ ಆಡುತ್ತಿದೆ. ಬುಧವಾರ ಅವರು (ಬಿಜೆಪಿ ಸದಸ್ಯರು) ನಿಂತಿದ್ದ ಮೇಜಿನ ಮೇಲೆ ಭಾರತದ ಸಂವಿಧಾನವಿತ್ತು. ಅವರು ಅದರ ಮೇಲೆ ತಮ್ಮ ಬೂಟುಗಳೊಂದಿಗೆ ನಿಂತಿದ್ದರು. ಅದಕ್ಕಾಗಿ ಅವರಿಗೆ ಶಿಕ್ಷೆಯಾಗಬೇಕು’ಎಂದು ಆಗ್ರಹಿಸಿದರು.

ಸದನ ಅಂಗೀಕರಿಸಿದ ವಿಶೇಷ ಸ್ಥಾನಮಾನದ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕು ಅಥವಾ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಶಾಸಕರು ಸ್ಪೀಕರ್ ಅವರನ್ನು ಒತ್ತಾಯಿಸಿದರು.

ರಾಜ್ಯ ಮತ್ತು ಕೇಂದ್ರೀಯ ಸಂಸ್ಥೆಗಳ ನಡುವೆ ಸಮನ್ವಯ ಅಗತ್ಯ: ಗೃಹ ಸಚಿವ ಶಾ

‘ಭಯೋತ್ಪಾದನೆ ನಿಗ್ರಹ ನೀತಿ’ ಶೀಘ್ರ

ಪ್ರಜಾವಾಣಿ ವಾರ್ತೆ



ಭಯೋತ್ಪಾದನೆ ಕುರಿತು ಶೂನ್ಯ ಸಹಿಷ್ಣುತೆ ಅಗತ್ಯ ಎಂಬುದನ್ನು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಭಾರತ ಕೂಡ ಈ ನಿಟ್ಟಿನಲ್ಲಿ ಬಲಿಷ್ಠ ಕಾರ್ಯತಂತ್ರ ಹೊಂದಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ನವದೆಹಲಿ: ಭಯೋತ್ಪಾದನೆಯನ್ನು ಮಟ್ಟ ಹಾಕುವ ಸಂಬಂಧ ಕೇಂದ್ರ ಸರ್ಕಾರ ‘ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ನೀತಿ’ ಹಾಗೂ ಕಾರ್ಯತಂತ್ರ ರೂಪಿಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ.

‘ಭಯೋತ್ಪಾದನೆ ನಿಗ್ರಹ ಸಮಾವೇಶ’ದಲ್ಲಿ ಮಾತನಾಡಿದ ಅವರು, ‘ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಸಂಬಂಧಿಸಿ ಸರ್ಕಾರ ಹೆಚ್ಚು ಕ್ರಿಯಾತ್ಮಕ ಹೆಜ್ಜೆಯನ್ನಿಡಲಿದೆ. ಮುಂದಿನ ಕೆಲವೇ ತಿಂಗಳಲ್ಲಿ ಈ ಹೊಸ ನೀತಿ ಮತ್ತು ಕಾರ್ಯತಂತ್ರವನ್ನು ಜಾರಿಗೊಳಿಸಲಾಗುವುದು’ ಎಂದರು.

‘ದೇಶವು ಭಯೋತ್ಪಾದನೆ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ದೃಢವಾದ ಕಾರ್ಯತಂತ್ರದೊಂದಿಗೆ ಹೆಜ್ಜೆ ಹಾಕುತ್ತಿದೆ. ಎಲ್ಲ ರಾಜ್ಯಗಳ ಹಾಗೂ ಕೇಂದ್ರೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಎಲ್ಲ ಸಂಸ್ಥೆಗಳು ಜಂಟಿ ತಂತ್ರಗಳನ್ನು ರೂಪಿಸುವ ಜೊತೆಗೆ ತಮ್ಮಲ್ಲಿನ ಗುಪ್ತಚರ ಮಾಹಿತಿ ಹಂಚಿಕೊಳ್ಳುವುದು ಅಗತ್ಯ’ ಎಂದರು.

‘ಗೃಹ ಸಚಿವಾಲಯ ನೀತಿಗಳನ್ನು ರೂಪಿಸಿ, ಜಾರಿಗೊಳಿಸಬಹುದು. ರಾಜ್ಯಗಳು ಸಕಾರಾತ್ಮಕವಾಗಿ ಕಾರ್ಯ ನಿರ್ವಹಿಸದಿದ್ದಲ್ಲಿ ಯಶಸ್ಸು ಸಿಗುವುದಿಲ್ಲ’ ಎಂದೂ ಹೇಳಿದರು.

ಶಾ ಭಾಷಣದ ಪ್ರಮುಖಾಂಶಗಳು

- ಭಯೋತ್ಪಾದನೆ ವಿರುದ್ಧದ ಹೋರಾಟ ಪೊಲೀಸ್ ಠಾಣೆಗಳ ಹಂತದಿಂದ ಆರಂಭವಾಗಬೇಕು. ಈ ಸಂಬಂಧ ಎಲ್ಲ ರಾಜ್ಯಗಳ ಹಿರಿಯ ಪೊಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು
- ಭಯೋತ್ಪಾದನೆ ವಿರುದ್ಧ ಹೋರಾಡುವ ಸಂಸ್ಥೆಗಳಿಗೆ ಕಾನೂನಿನ ಬಲ ತುಂಬುವ ಉದ್ದೇಶದಿಂದ ಎನ್‌ಐಎ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಯುಎಪಿಎಗೂ ತಿದ್ದುಪಡಿ ತರಲಾಗಿದೆ
- ಭಯೋತ್ಪಾದಕರಿಗೆ ಹಣಕಾಸು ನೆರವು ಹರಿಯುವುದನ್ನು ತಡೆಯಲು 25 ಅಂಶಗಳ ಯೋಜನೆಯೊಂದನ್ನು ರೂಪಿಸಲಾಗಿದೆ
- ಕಾಯ್ದೆಗಳಿಗೆ ತಂದ ತಿದ್ದುಪಡಿಯಿಂದಾಗಿ, ಘೋಷಿತ ಭಯೋತ್ಪಾದಕರು ಹಾಗೂ ಉಗ್ರ ಸಂಘಟನೆಗಳು ವಿದೇಶಗಳಲ್ಲಿ ಹೊಂದಿರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿದೆ
- ಸೈಬರ್ ಭದ್ರತೆ, ನಾರ್ಕೊ ಭಯೋತ್ಪಾದನೆ ಮೇಲೆ ನಿಗಾ ಇಡುವುದಕ್ಕಾಗಿ ‘ಮಲ್ಟಿ ಏಜೆನ್ಸಿ ಸೆಂಟರ್’ (ಎಂಎಸಿ) ಹಾಗೂ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳ (ಎಸ್‌ಒಪಿ) ವ್ಯಾಪ್ತಿಯನ್ನು ಹೆಚ್ಚಿಸಲಾಗಿದೆ

2 ದಿನಗಳ ಸಮಾವೇಶವು ಶುಕ್ರವಾರ ಅಂತ್ಯಗೊಳ್ಳಲಿದೆ. ಭದ್ರತಾ ಪಡೆಗಳು, ತಂತ್ರಜ್ಞರು, ಕಾನೂನು ತಜ್ಞರು, ವಿಧಿವಿಜ್ಞಾನ ಪರಿಣತರು ಸೇರಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ತೊಡಗಿರುವ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

ಕೆನಡಾ ಕ್ರಮಕ್ಕೆ ಭಾರತ ಟೀಕೆ

ನವದೆಹಲಿ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ಸುದ್ದಿಗೋಷ್ಠಿಯ ವರದಿ ಮಾಡಿದ್ದಕ್ಕೆ ಆಸ್ಟ್ರೇಲಿಯಾದ ಮಾಧ್ಯಮದ ಮೇಲೆ ಕೆನಡಾ ನಿರ್ಬಂಧ ಹೇರಿದೆ ಎಂದು ಭಾರತ ದೂರಿದೆ.

ಜೈಶಂಕರ್ ಮತ್ತು ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಅವರ ಜಂಟಿ ಸುದ್ದಿಗೋಷ್ಠಿಯ ಸುದ್ದಿಯನ್ನು ‘ಆಸ್ಟ್ರೇಲಿಯಾ ಟುಡೇ’ ತನ್ನ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮದ ಖಾತೆಗಳಲ್ಲಿ ಪ್ರಕಟಿಸಿತ್ತು.

‘ಆಸ್ಟ್ರೇಲಿಯಾ ಟುಡೆಯ ಸಾಮಾಜಿಕ ಮಾಧ್ಯಮ ಖಾತೆಗಳು ಮತ್ತು ವೆಬ್‌ಸೈಟ್‌ಅನ್ನು ನಿರ್ಬಂಧಿಸಲಾಗಿದ್ದು, ಕೆನಡಾದಲ್ಲಿ ವೀಕ್ಷಣೆಗೆ ಲಭ್ಯವಿಲ್ಲ. ಸುದ್ದಿಗೋಷ್ಠಿಯ ವರದಿ ಪ್ರಕಟಿಸಿದ ಕೆಲವೇ ಗಂಟೆಗಳ ಒಳಗೆ ಈ ನಿರ್ಬಂಧ ಹೇರಲಾಗಿದೆ. ಇದು ವಾಕ್ ಸ್ವಾತಂತ್ರ್ಯದ ವಿಷಯದಲ್ಲಿ ಕೆನಡಾ ಸರ್ಕಾರದ ಆಷಾಢಭೂತಿತನವನ್ನು ತೋರಿಸುತ್ತದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಟೀಕಿಸಿದ್ದಾರೆ.

ನಾನು ಏಕಸ್ವಾಮ್ಯ ವಿರೋಧಿ: ರಾಹುಲ್

ನವದೆಹಲಿ(ಪಿಟಿಐ): ದೇಶದ ಉದ್ಯಮ ಕ್ಷೇತ್ರ ಕುರಿತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಾಧ್ಯಮಗಳಲ್ಲಿ ಪ್ರಕಟಿಸಿದ ಲೇಖನವೊಂದು ಈಗ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಜಟಾಪಟಿಗೆ ಕಾರಣವಾಗಿದೆ.

‘ಬಿಜೆಪಿ ಟೀಕಿಸುತ್ತಿರುವಂತೆ ನಾನು ಉದ್ಯಮ ವಿರೋಧಿ ಅಲ್ಲ. ನಾನು ಏಕಸ್ವಾಮ್ಯದ ವಿರೋಧಿ ಹಾಗೂ ಏಕಸ್ವಾಮ್ಯ ಸಂಸ್ಥೆಗಳ ಸೃಷ್ಟಿಯ ವಿರೋಧಿ’ ಎಂದು ರಾಹುಲ್ ಗಾಂಧಿ ಗುರುವಾರ ಹೇಳಿದ್ದಾರೆ.

‘ಈಸ್ಟ್ ಇಂಡಿಯಾ ಕಂಪನಿಯನ್ನು ಸುಮಾರು 150 ವರ್ಷಗಳ ಹಿಂದೆ ಮುಚ್ಚಲಾಯಿತು. ಆದರೆ, ಕಂಪನಿಯು ಆಗ ಸೃಷ್ಟಿಸಿದ್ದ ಭಯವು ಈಗ ಬೇರೆ ರೂಪದಲ್ಲಿ ಕಾಣಿಸಿಕೊಂಡಿದೆ. ಹೊಸ ತಲೆಮಾರಿನ ಏಕಸ್ವಾಮ್ಯವಾದಿಗಳು ಈ ಜಾಗವನ್ನು ತುಂಬಿದ್ದಾರೆ’ ಎಂದು ರಾಹುಲ್ ತಮ್ಮ ಲೇಖನದಲ್ಲಿ ಬರೆದಿದ್ದರು.

ವಿಡಿಯೊವೊಂದನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿರುವ ರಾಹುಲ್, ‘ಕೆಲ ಸಂಗತಿ ಸ್ಪಷ್ಟಪಡಿಸಲು ನಾನು ಬಯಸುತ್ತೇನೆ. ಬಿಜೆಪಿಯಲ್ಲಿರುವ ನನ್ನ ಕೆಲ ವಿರೋಧಿಗಳು, ನಾನು ಉದ್ಯಮ ವಿರೋಧಿ ಎಂಬಂತೆ ಬಿಂಬಿಸುತ್ತಿದ್ದಾರೆ. ಆದರೆ, ನಾನು ಉದ್ಯಮ ವಿರೋಧಿ ಅಲ್ಲ. ನಾನು ಏಕಸ್ವಾಮ್ಯ ವಿರೋಧಿ. ಒಬ್ಬರು ಅಥವಾ ಇಬ್ಬರು ಇಲ್ಲವೇ 5 ಜನರು ಉದ್ಯಮ ಕ್ಷೇತ್ರದ ಮೇಲೆ ಪ್ರಾಬಲ್ಯ ಹೊಂದುವುದರ ವಿರೋಧಿ ನಾನು’ ಎಂದಿದ್ದಾರೆ.

ನೇಮಕ ನಿಯಮ ಬದಲು ಸಲ್ಲದು

ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ • ‘ಸುಪ್ರೀಂ’ ಆದೇಶ

ನವದೆಹಲಿ (ಪಿಟಿಐ): ‘ನೇಮಕಾತಿ ಜಾಹೀರಾತಿನಲ್ಲಿ ಸ್ಪಷ್ಟವಾದ ಉಲ್ಲೇಖ ಇಲ್ಲದಿದ್ದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುವಾಗ, ಮಧ್ಯದಲ್ಲಿ ನೇಮಕಾತಿ ನಿಯಮಗಳನ್ನು ಬದಲಿಸಬಾರದು’ ಎಂದು ಸುಪ್ರೀಂ ಕೋರ್ಟ್ ನ್ಯಾಯಪೀಠ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ನ್ಯಾಯಪೀಠವು ಗುರುವಾರ ಈ ಕುರಿತು ಮಹತ್ವದ ಆದೇಶವನ್ನು ನೀಡಿದೆ.



‘ನೇಮಕಾತಿ ಪ್ರಕ್ರಿಯೆಯು ಹುದ್ದೆಗಳ ಭರ್ತಿಗೆ ಜಾಹೀರಾತು ನೀಡುವ ದಿನ ಆರಂಭವಾಗಲಿದೆ. ಹುದ್ದೆಗಳ ಭರ್ತಿಯು ಪೂರ್ಣವಾಗುವ ಮೂಲಕ ಅಂತ್ಯವಾಗಲಿದೆ’ ಎಂದೂ ವಿವರಿಸಿದೆ.

ನ್ಯಾಯಮೂರ್ತಿಗಳಾದ ಹೃಷಿಕೇಷ ರಾಯ್, ಪಿ.ಎಸ್. ನರಸಿಂಹ, ಪಂಕಜ್ ಮಿತ್ತಲ್ ಮತ್ತು ಮನೋಜ್ ಮಿಶ್ರಾ ಅವರು ಈ ಪೀಠದ ಇತರೆ ಸದಸ್ಯರಾಗಿದ್ದಾರೆ.

ಒಂದು ವೇಳೆ ನಿಯಮಗಳನ್ನು ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುವಾಗ ಬದಲಿಸುವುದೇ ಆದರೆ ಅದು ಸಂವಿಧಾನದ ವಿಧಿ 14ರ (ಸಮಾನತೆಯ ಹಕ್ಕು) ಉದ್ದೇಶ ಈಡೇರಿಸುವಂತೆ ಇರಬೇಕು ಎಂದೂ ಅಭಿಪ್ರಾಯಪಟ್ಟಿದೆ.

‘ನೇಮಕಾತಿ ಸಂಸ್ಥೆಗಳು ನೇಮಕ ಪ್ರಕ್ರಿಯೆಯನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವಂತೆ ಹಾಗೂ ಪಾರದರ್ಶಕವಾಗಿ, ತಾರತಮ್ಯವಿಲ್ಲದೆ ಹಾಗೂ ನೇಮಕಾತಿ ಉದ್ದೇಶ ಸಾಧನೆಗೆ ಪೂರಕವಾಗಿ ನಿಯಮಗಳನ್ನು ರೂಪಿಸಬೇಕು’ ಪೀಠವು ತಿಳಿಸಿದೆ.

‘ಆಯ್ಕೆ ಪಟ್ಟಿಯಲ್ಲಿ ಹೆಸರಿರುವುದು ಉದ್ಯೋಗದ ಹಕ್ಕು ನೀಡುವುದಿಲ್ಲ. ರಾಜ್ಯ ಅಥವಾ ಅದರ ನೇಮಕಾತಿ ಮಂಡಳಿಯು ಸಕಾರಣಕ್ಕಾಗಿ ಉದ್ಯೋಗ ಭರ್ತಿ ಮಾಡದೇ ಇರುವ ತೀರ್ಮಾನವನ್ನು ತೆಗೆದುಕೊಳ್ಳಬಹುದು. ಒಂದು ವೇಳೆ ಹುದ್ದೆಗಳು ಖಾಲಿ ಇದ್ದಾಗ, ಆಯ್ಕೆಪಟ್ಟಿಯಲ್ಲಿ ಇರುವವರನ್ನು ನೇಮಕಾತಿಗೆ ಪರಿಗಣಿಸುವುದನ್ನು ನಿರಾಕರಿಸಲಾಗದು’ ಎಂದೂ ಹೇಳಿದೆ.

ಸರ್ಕಾರಿ ಹುದ್ದೆಗಳಿಗಾಗಿ ನೇಮಕಾತಿ ಮಾನದಂಡ ಕುರಿತು, ತ್ರಿಸದಸ್ಯ ಪೀಠವು 2013 ಮಾರ್ಚ್‌ನಲ್ಲಿ ತನಗೆ ವರ್ಗಾವಣೆ ಮಾಡಿದ್ದ ಪ್ರಶ್ನೆಗೂ ಪೀಠ ಉತ್ತರಿಸಿತು.

‘ಎನ್‌ಸಿಆರ್‌ಬಿ: ದತ್ತಾಂಶ ಸಂಗ್ರಹ ಅಬಾಧಿತ’

ವಿಚಾರಣಾಧೀನ ಕೈದಿಗಳು ಹಾಗೂ ಅಪರಾಧಿಗಳ ಕುರಿತು ಮಾಹಿತಿ ಇರುವ ಕಡತಗಳಲ್ಲಿ ‘ಜಾತಿ’ ಕಲಂ ತೆಗೆದು ಹಾಕುವಂತೆ ತಾನು ನೀಡಿರುವ ನಿರ್ದೇಶನವು ಎನ್‌ಸಿಆರ್‌ಬಿ ಕೈಗೊಳ್ಳುವ ದತ್ತಾಂಶ ಸಂಗ್ರಹ ಕಾರ್ಯಕ್ಕೆ ಅಡ್ಡಿಯಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಸ್ಪಷ್ಟಪಡಿಸಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಈ ಸ್ಪಷ್ಟನೆ ನೀಡಿದೆ. ಅಕ್ಟೋಬರ್ 3ರಂದು ಚಾರಿತ್ರಿಕ ತೀರ್ಪು ಪ್ರಕಟಿಸಿದ್ದ ಸುಪ್ರೀಂ ಕೋರ್ಟ್, ಜೈಲುಗಳಲ್ಲಿನ ವಿಚಾರಣಾಧೀನ ಕೈದಿಗಳು ಹಾಗೂ ಅಪರಾಧಿಗಳ ವಿರುದ್ಧ ಜಾತಿ ಆಧಾರದಲ್ಲಿ ತಾರತಮ್ಯ ಮಾಡುವುದನ್ನು ನಿಷೇಧಿಸಿ ಆದೇಶಿಸಿತ್ತು.

ವಿಚಾರಣೆ: ಸ್ಥಳಾಂತರಕ್ಕೆ ನಕಾರ

ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ನಡೆದ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣದ ವಿಚಾರಣೆಯನ್ನು ಪಶ್ಚಿಮ ಬಂಗಾಳದಿಂದ ಬೇರೆಡೆ ವರ್ಗಾಯಿಸಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ.

ತಾನು ನ್ಯಾಯಾಂಗ ವ್ಯವಸ್ಥೆಯ ಮೇಲೆ ಅನುಮಾನ ವ್ಯಕ್ತಪಡಿಸುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಹೇಳಿದೆ.

ಪ್ರಕರಣದ ಪ್ರಮುಖ ಆರೋಪಿ ಸಂಜಯ್ ರಾಯ್ ವಿರುದ್ಧ ವಿಚಾರಣಾ ನ್ಯಾಯಾಲಯವು ಸೋಮವಾರ ದೋಷಾರೋಪ ನಿಗದಿ ಮಾಡಿದೆ.

ತನಿಖೆ ಶುರುವಾದ 90 ದಿನಗಳಲ್ಲಿ ಸಿಬಿಐ ಏನೂ ಮಾಡಿಲ್ಲ. ಅದು ರಾಜ್ಯ ಪೊಲೀಸರು ಹೇಳಿದ್ದನ್ನೇ ಹೇಳಿದೆ ಎಂದು ವಕೀಲರೊಬ್ಬರು ವಿಚಾರಣೆ ಸಂದರ್ಭದಲ್ಲಿ ಪೀಠಕ್ಕೆ ತಿಳಿಸಿದರು. ಸಾಕ್ಷ್ಯ–ಆಧಾರ ಪರಿಶೀಲಿಸಿದ ನಂತರ, ಅಗತ್ಯ ಕಂಡುಬಂದರೆ ಇನ್ನೊಂದು ತನಿಖೆಗೆ ಆದೇಶಿಸಲು ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರಿಗೆ ಅಧಿಕಾರ ಇದೆ ಎಂದು ಪೀಠವು ತಿಳಿಸಿತು.

ಪ್ರಕರಣದ ವಿಚಾರಣೆಯು ಶುರುವಾಗಲಿದೆ, ರಾಜ್ಯದಲ್ಲಿನ ಪರಿಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಂಡು ವಿಚಾರಣೆಯನ್ನು ಪಶ್ಚಿಮ ಬಂಗಾಳದಿಂದ ಬೇರೆಡೆ ವರ್ಗಾಯಿಸಬಹುದು. ಈ ರೀತಿ ಮಾಡಿದ ನಿದರ್ಶನಗಳು ಇವೆ ಎಂದು ಇನ್ನೊಬ್ಬರು ವಕೀಲರು ಹೇಳಿದರು. ಆದರೆ ಈ ಮನವಿಯನ್ನು ಪೀಠವು ಪುರಸ್ಕರಿಸಲಿಲ್ಲ.

ಡೊನಾಲ್ಡ್ ಟ್ರಂಪ್– ನರೇಂದ್ರ ಮೋದಿ

ಸ್ನೇಹಕ್ಕೆ ‘ಅಗ್ನಿಪರೀಕ್ಷೆ’

ವಾಷಿಂಗ್ಟನ್/ನವದೆಹಲಿ (ಪಿಟಿಐ/ರಾಯಿಟರ್ಸ್): ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯ ಆಡಳಿತದಲ್ಲಿ ಭಾರತ-ಅಮೆರಿಕ ನಡುವಿನ ಬಾಂಧವ್ಯ ಮತ್ತಷ್ಟು ವೃದ್ಧಿಸಲಿದೆ. ಆದರೆ, ಆಮದು ಸುಂಕ ಮತ್ತು ವಲಸೆಯಂತಹ ಕೆಲವು ವಿಷಯಗಳಲ್ಲಿ ಸ್ವಲ್ಪಮಟ್ಟಿನ ಸವಾಲುಗಳು ಎದುರಾಗಬಹುದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಟ್ರಂಪ್ ಅವರ ‘ಅಮೆರಿಕವೇ ಮೊದಲು’ ಕಾರ್ಯಸೂಚಿ ಮತ್ತು ವಾಣಿಜ್ಯ ವಹಿವಾಟು ಸಂಬಂಧದ ವಿವಾದವು ಉಭಯ ರಾಷ್ಟ್ರಗಳ ಬಾಂಧವ್ಯಕ್ಕೆ ಅಗ್ನಿಪರೀಕ್ಷೆ ಒಡ್ಡಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಇಬ್ಬರೂ ನಾಯಕರು ಭೇಟಿಯಾದಾಗ ಪರಸ್ಪರ ಬಿಗಿದಪ್ಪಿಕೊಂಡು ತಮ್ಮ ನಡುವಿನ ಸ್ನೇಹವನ್ನು ಜಗತ್ತಿನ ಮುಂದೆ ತೋರಿಸಿದ್ದಾರೆ. ಆದರೆ, ತನ್ನ ವ್ಯಾಪಾರ ನೀತಿಯ ವಿಚಾರ ಬಂದಾಗ ಟ್ರಂಪ್ ತಮ್ಮ ಆಡಳಿತ ಅವಧಿಯಲ್ಲಿ ಭಾರತವನ್ನು ‘ಸುಂಕದ ರಾಜ’ ಮತ್ತು ‘ವ್ಯಾಪಾರ ಒಪ್ಪಂದದ ದುರುಪಯೋಗಿ’ ಎಂದು ಟೀಕಿಸಿದ್ದರು.

ಟ್ರಂಪ್ ಚುನಾವಣಾ ಪ್ರಚಾರದಲ್ಲಿ, ವಿದೇಶಿ ಸರಕುಗಳ ಮೇಲೆ ಅದರಲ್ಲೂ ವಿಶೇಷವಾಗಿ ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಹೆಚ್ಚಿನ ಸುಂಕಗಳನ್ನು ವಿಧಿಸುವುದಾಗಿ ಪ್ರಸ್ತಾಪಿಸಿದ್ದರು. ಅಲ್ಲದೆ, ಅಕ್ರಮ ವಲಸಿಗರನ್ನು ದೇಶದಿಂದ ಹೊರದಬ್ಬಲು ‘ಗಡೀಪಾರು ಯೋಜನೆ’ ರೂಪಿಸುವ ಪ್ರತಿಜ್ಞೆ ಮಾಡಿದ್ದರು. ಭಾರತದ ಸರಕುಗಳ ಮೇಲೆ ದುಬಾರಿ ಶುಲ್ಕ ವಿಧಿಸುವುದಾಗಿಯೂ ಈ ಹಿಂದೆ ಗುಡುಗಿದ್ದರು. ಇದನ್ನು ಅವರು ಜಾರಿಗೆ ತಂದರೆ, ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆ ಎನಿಸಿರುವ ಭಾರತದಲ್ಲಿ ಉತ್ಪಾದನೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಚೀನಾವನ್ನು ಗುರಿಯಾಗಿರಿಸಿಕೊಂಡು ಟ್ರಂಪ್ ಆಡಳಿತವು ಜಾರಿಗೊಳಿಸುವ ಆಕ್ರಮಣಕಾರಿ ವ್ಯಾಪಾರ ನೀತಿಯು ಭಾರತವನ್ನು ಬಾಧಿಸದೇ ಇರದು

ಅಶೋಕ್ ಮಲಿಕ್, ಏಷ್ಯಾ ಗ್ರೂಪ್ ಬಿಸಿನೆಸ್ ಕನ್ಸಲ್ಟೆನ್ಸಿ

ಮೋದಿ ಖಂಡಿತವಾಗಿಯೂ ಟ್ರಂಪ್ ಇಷ್ಟಪಡುವ ರೀತಿಯ ಪ್ರಬಲ ನಾಯಕ. ಉಭಯ ನಾಯಕರ ನಡುವಿನ ಆಪ್ತ ಸ್ನೇಹವು ಭಾರತಕ್ಕೆ ಪ್ರಯೋಜನವಾಗಲಿದೆ

ಪ್ರೊ.ಹರ್ಷ್ ವಿ. ಪಂತ್, ಕಿಂಗ್ಸ್ ಕಾಲೇಜು, ಲಂಡನ್

ರಿಪಬ್ಲಿಕನ್ ಪಕ್ಷದ ಮುಂಚೂಣಿ ನಾಯಕರು ಮತ್ತು ಕನ್ಸ-ರ್‌ವೇಟಿವ್‌ನ ಚಿಂತಕರು, 21ನೇ ಶತಮಾನವನ್ನು ರೂಪಿಸುವಲ್ಲಿ ಭಾರತ- ಅಮೆರಿಕದ ಭವಿಷ್ಯದ ಸಂಬಂಧವನ್ನು ಪ್ರಮುಖ ವಿಷಯವಾಗಿಯೇ ಪರಿಗಣಿಸುತ್ತಾರೆ ಎಂದು ಸಂವಹನ ತಂತ್ರಜ್ಞ ಅನಂಗ್ ಮಿತ್ತಲ್ ಅಭಿಪ್ರಾಯಪಟ್ಟಿದ್ದಾರೆ.

‘ಟ್ರಂಪ್ ಅವರು ಭಾರತ-ಅಮೆರಿಕ ನಡುವಿನ ಸಂಬಂಧವನ್ನು ಪ್ರಧಾನಿ ಮೋದಿ ಅವರೊಂದಿಗಿನ ವೈಯಕ್ತಿಕ ಸಂಬಂಧದ ಮೂಲಕವೇ ಗಟ್ಟಿಯಾಗಿಸಲು ಹಾಗೂ ವ್ಯಾಪಾರ, ರಕ್ಷಣೆ ಮತ್ತು ಬಂಡವಾಳ ಹೂಡಿಕೆಯ ಕುರಿತು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಲು ಬಯಸಬಹುದು’ ಎಂದು ಹೇಳಿದ್ದಾರೆ.

‘ಮುಂದಿನ ವರ್ಷ ಟ್ರಂಪ್ ಅವರು ಯುರೋಪ್ ಮತ್ತು ಏಷ್ಯಾಕ್ಕೆ ಭೇಟಿ ನೀಡಲಿದ್ದು ಬಹುಪಕ್ಷೀಯ ವೇದಿಕೆಗಳಲ್ಲಿ ಉಭಯ ನಾಯಕರು ಮುಖಾಮುಖಿಯಾಗಬಹುದು. ಟ್ರಂಪ್ ಭಾರತಕ್ಕೆ ಭೇಟಿ ನೀಡುತ್ತಾರೆ ಅಥವಾ 2025ರಲ್ಲಿ ಅಮೆರಿಕಕ್ಕೆ ಭೇಟಿ ನೀಡುವಂತೆ ಮೋದಿಯವರಿಗೆ ಅವರು ಆಹ್ವಾನ ನೀಡುವ ನಿರೀಕ್ಷೆಯೂ ಇದೆ ಎನ್ನುತ್ತಾರೆ ಮಿತ್ತಲ್.


ಟ್ರಂಪ್, ಮೋದಿ ಅವರು 2020ರಲ್ಲಿ ನವದೆಹಲಿಯಲ್ಲಿ ಭೇಟಿಯಾಗಿದ್ದ ಕ್ಷಣ – ಎಎಫ್‌ಪಿ ಚಿತ್ರ

ಹೋರಾಟ ನಿಲ್ಲದು: ಕಮಲಾ ಹ್ಯಾರಿಸ್


ಕಮಲಾ ಅವರ ಭಾಷಣದ ವೇಳೆ ಭಾವುಕರಾದ ಬೆಂಬಲಿಗರು –ಎಎಫ್‌ಪಿ ಚಿತ್ರ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋಲು ಖಚಿತವಾದ ಬೆನ್ನಲ್ಲೇ ಹಾಲಿ ಉಪಾಧ್ಯಕ್ಷೆ, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರು ಚುನಾವಣೆಯ ಫಲಿತಾಂಶವನ್ನು ಒಪ್ಪಿಕೊಳ್ಳುವಂತೆ ತಮ್ಮ ಬೆಂಬಲಿಗರನ್ನು ಕೇಳಿಕೊಂಡಿದ್ದಾರೆ. ‘ಅಧಿಕಾರ ಹಸ್ತಾಂತರ ಪ್ರಕ್ರಿಯೆ ಸುಗಮವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳುತ್ತೇನೆ’ ಎಂದು ಪ್ರತಿಜ್ಞೆ ಮಾಡಿದ್ದಾರೆ.

ತಾವು ಕಲಿತ ಹಾವರ್ಡ್ ವಿಶ್ವವಿದ್ಯಾಲಯದಲ್ಲಿ ಬುಧವಾರ ಭಾವುಕವಾಗಿ ಭಾಷಣ ಮಾಡಿದ 60 ವರ್ಷದ ಕಮಲಾ, ‘ನಾನು ಈ ಚುನಾವಣೆಯಲ್ಲಿ ಸೋಲು ಒಪ್ಪಿಕೊಂಡಿದ್ದೇನೆ. ಆದರೆ ನನ್ನ ಪ್ರಚಾರ ಅಭಿಯಾನವನ್ನು ಉತ್ತೇಜಿಸಿರುವ ಹೋರಾಟವನ್ನು ಮುಂದುವರಿಸುತ್ತೇನೆ’ ಎಂದು ಹೇಳಿದರು.

ದೇಶದ ಮೂಲಭೂತ ತತ್ವಗಳನ್ನು ರಕ್ಷಿಸಲು ನಡೆಸುತ್ತಿರುವ ಹೋರಾಟವನ್ನು ಬಿಟ್ಟುಬಿಡಬೇಡಿ ಎಂದು ಅವರು ತಮ್ಮ ಬೆಂಬಲಿಗರಿಗೆ ಮನವಿ ಮಾಡಿದರು.

ಚುನಾವಣೆ ವೇಳೆ ಎದುರಾದ ಅಸಾಧಾರಣ ಸನ್ನಿವೇಶದಲ್ಲಿ ಐತಿಹಾಸಿಕ ಅಭಿಯಾನ ಮುನ್ನಡೆಸಿದ್ದಕ್ಕಾಗಿ ಕಮಲಾ ಅವರಿಗೆ ಅಭಿನಂದನೆ

ಜೋ ಬೈಡನ್, ಅಮೆರಿಕದ ಅಧ್ಯಕ್ಷ

‘ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ, ನಮ್ಮ ದೇಶದ ಮೇಲೆ ತೋರಿರುವ ಪ್ರೀತಿ ಮತ್ತು ನಿಮ್ಮ ದೃಢನಿಶ್ಚಯದಿಂದಾಗಿ ನನ್ನ ಹೃದಯ ತುಂಬಿದೆ’ ಎಂದ ಅವರು ತಮ್ಮ ಬೆಂಬಲಿಗರ ಉತ್ಸಾಹವನ್ನು ಹೆಚ್ಚಿಸುವ ಪ್ರಯತ್ನ ಮಾಡಿದರು.

‘ನಾವು ಬಯಸಿದ್ದ ಫಲಿತಾಂಶ ಈ ಚುನಾವಣೆಯಲ್ಲಿ ಬಂದಿಲ್ಲ. ನಾವು ಯಾವ ಉದ್ದೇಶಕ್ಕಾಗಿ ಹೋರಾಟ ನಡೆಸಿದ್ದೇವೋ ಅದು ಗುರಿ ತಲುಪಲಿಲ್ಲ. ಆದರೆ, ನಾನು ಹೇಳುವುದನ್ನು ಕೇಳಿ. ಅಮೆರಿಕದ ಭರವಸೆಯ ಬೆಳಕು ಯಾವಾಗಲೂ ಪ್ರಕಾಶಮಾನವಾಗಿ ಉರಿಯುತ್ತಲೇ ಇರುತ್ತದೆ’ ಎಂದರು.

‘ಜನರು ಈಗ ಹಲವು ರೀತಿಯ ಭಾವನೆಗಳನ್ನು ಅನುಭವಿಸುತ್ತಿದ್ದಾರೆ ಎಂಬುದು ತಿಳಿದಿದೆ. ನಿಮ್ಮ ಭಾವನೆಗಳು ನನಗೆ ಅರ್ಥವಾಗುತ್ತಿದೆ. ಏನೇ ಆಗಲಿ, ಈ ಚುನಾವಣೆಯ ಫಲಿತಾಂಶವನ್ನು ನಾವು ಒಪ್ಪಿಕೊಳ್ಳಲೇಬೇಕು. ಚುನಾವಣಾ ಫಲಿತಾಂಶ ಒಪ್ಪಿಕೊಳ್ಳುವುದು ಪ್ರಜಾಪ್ರಭುತ್ವದ ಮೂಲಭೂತ ತತ್ವವಾಗಿದೆ’ ಎಂದು ಹೇಳಿದರು.

‘ಎರಡೇ ಸೆಕೆಂಡ್‌ನಲ್ಲಿ ಸ್ಮಿತ್ ವಜಾ’

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಎರಡೇ ಸೆಕೆಂಡುಗಳಲ್ಲಿ ವಿಶೇಷ ಸರ್ಕಾರಿ ವಕೀಲ ಜಾಕ್ ಸ್ಮಿತ್ ಅವರನ್ನು ವಜಾ ಮಾಡುವುದಾಗಿ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಸಂದರ್ಶನವೊಂದರಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ. ನಿಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯನ್ನು ತಪ್ಪಿಸಲು ಸ್ಮಿತ್ ಅವರನ್ನು ವಜಾಗೊಳಿಸುವಿರಾ ಎಂಬ ಪ್ರಶ್ನೆಗೆ, ಮೇಲಿನ ಉತ್ತರ ನೀಡಿದ್ದಾರೆ.

2020ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವನ್ನು ತಿರುಚಲು ಯತ್ನಿಸಿದ ಮತ್ತು ಶ್ವೇತಭವನದ ರಹಸ್ಯ ದಾಖಲೆಗಳನ್ನು ತಮ್ಮ ಖಾಸಗಿ ನಿವಾಸಕ್ಕೆ ಕೊಂಡೊಯ್ದ ಆರೋಪಗಳಡಿ ಟ್ರಂಪ್ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳಲ್ಲಿ ವಿಶೇಷ ಸರ್ಕಾರಿ ವಕೀಲ ಜಾಕ್ ಸ್ಮಿತ್ ವಾದಿಸಿದ್ದರು.

ಸ್ಮಿತ್ ವಿರುದ್ಧ ಟೀಕೆ ಮಾಡುತ್ತಾ ಬಂದಿರುವ ಟ್ರಂಪ್, ‘ಈ ಬಾರಿಯ ಚುನಾವಣೆಯಲ್ಲಿ ಗೆದ್ದು ಅಧಿಕಾರ ಸ್ವೀಕರಿಸಿದ ನಂತರ ಅವರನ್ನು ಕಿತ್ತೊಗೆಯುವೆ’ ಎಂದಿದ್ದರು. ಸ್ಮಿತ್ ಒಬ್ಬ ‘ಮೋಸಗಾರ’ ಎಂದು ಜರೆದಿದ್ದರು.

ಅಟಾರ್ನಿ ಜನರಲ್ ಮೆರಿಕ್ ಗಾರ್ಲಂಡ್ ಅವರು 2022ರಲ್ಲಿ ಸ್ಮಿತ್ ಅವರನ್ನು ವಿಶೇಷ ಸರ್ಕಾರಿ ವಕೀಲರಾಗಿ ನೇಮಕ ಮಾಡಿದ್ದರು.

ಯಾರು ಏನಂದರು?

ನಿರ್ಣಾಯಕ ಗೆಲುವು ಪಡೆದಿರುವ ಟ್ರಂಪ್ ಅವರಿಗೆ ಅಭಿನಂದನೆಗಳು. ಅಮೆರಿಕದ ಪಾಲಿನ ಸುವರ್ಣ ಯುಗದಲ್ಲಿ ನಾವಿದ್ದೇವೆ. ಪ್ರತಿಯೊಬ್ಬರಿಗೂ ಅನುಕೂಲ ಕಲ್ಪಿಸುವ ಉದ್ದೇಶದಿಂದ ಟ್ರಂಪ್ ಜತೆ ಕೆಲಸ ಮಾಡಲು ಬದ್ಧ

ಸುಂದರ್ ಪಿಚೈ, ಗೂಗಲ್ ಸಿಇಒ

ಅಮೆರಿಕದ ಪ್ರಜೆಗಳು ಒಗ್ಗಟ್ಟು ಪ್ರದರ್ಶಿಸಲು, ನಮ್ಮ ದೇಶಕ್ಕಾಗಿ ಪ್ರಾರ್ಥಿಸಲು ಮತ್ತು ಶಾಂತಿಯುತ ಪರಿವರ್ತನೆಯ ಪ್ರಕ್ರಿಯೆ ಪ್ರಾರಂಭಿಸಲು ಈಗ ಕಾಲ ಕೂಡಿಬಂದಿದೆ

ನಿಕ್ಕಿ ಹ್ಯಾಲೆ, ರಿಪಬ್ಲಿಕನ್ ಪಕ್ಷದ ನಾಯಕಿ

ಟ್ರಂಪ್ ಗೆಲುವು ಅಮೆರಿಕದ ಪಾಲಿಗೆ ಮಹತ್ವದ ದಿನ. ಸಂಭ್ರಮ ಆಚರಿಸಲು ಸ್ವಲ್ಪ ಸಮಯ ಮೀಸಲಿಡೋಣ. ನಮ್ಮ ದೇಶವನ್ನು ಸರಿಯಾದ ಹಾದಿಗೆ ಮರಳಿ ತರುವ ಕೆಲಸವನ್ನು ಆ ಬಳಿಕ ಶುರು ಮಾಡೋಣ

ಬಾಬಿ ಜಿಂದಾಲ್, ಲೂಸಿಯಾನಾದ ಮಾಜಿ ಗವರ್ನರ್

‘ಬಾಂಧವ್ಯ ವೃದ್ಧಿಗೆ ಬದ್ಧ’

ನವದೆಹಲಿ (ಪಿಟಿಐ): ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲು ಒಗ್ಗೂಡಿ ಕೆಲಸ ಮಾಡುವ ತಮ್ಮ ಬದ್ಧತೆಯನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪುನರುಚ್ಚರಿಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ಹೇಳಿದೆ.

ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಟ್ರಂಪ್ ಅವರಿಗೆ ಮೋದಿ ಅವರು ಬುಧವಾರ ದೂರವಾಣಿ ಕರೆಮಾಡಿ ಅಭಿನಂದಿಸಿದ್ದರು. ಗುರುವಾರ ಈ ಬಗ್ಗೆ ಪ್ರಕಟಣೆ ಹೊರಡಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ‘ನಿಮ್ಮ ನಾಯಕತ್ವದ ಮೇಲೆ ಅಮೆರಿಕದ ಜನರು ಇಟ್ಟಿರುವ ದೃಢ ನಂಬಿಕೆಯನ್ನು ಈ ಅದ್ಭುತ ಗೆಲುವು ತೋರಿಸಿಕೊಟ್ಟಿದೆ’ ಎಂದು ಸಂಭಾಷಣೆ ವೇಳೆ ಮೋದಿ ಅವರು ಟ್ರಂಪ್‌ಗೆ ಹೇಳಿದ್ದಾರೆ ಎಂದಿದೆ.

‘ತಂತ್ರಜ್ಞಾನ, ರಕ್ಷಣೆ, ಇಂಧನ, ಬಾಹ್ಯಾಕಾಶ ಒಳಗೊಂಡಂತೆ ಹಲವು ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಬಲಪಡಿಸಲು ಒಟ್ಟಾಗಿ ಕೆಲಸ ಮಾಡಲು ಬದ್ಧರಿರುವುದಾಗಿ ಇಬ್ಬರೂ ನಾಯಕರು ಪುನರುಚ್ಚರಿಸಿದರು’ ಎಂದು ತಿಳಿಸಿದೆ. ‘ಗೆಳೆಯ’ ಟ್ರಂಪ್ ಅವರಿಗೆ ಕರೆಮಾಡಿ ಮಾತನಾಡಿದೆ ಎಂದು ಮೋದಿ ಅವರು ಬುಧವಾರ ರಾತ್ರಿ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿದ್ದರು.

ರಣಜಿ ಟ್ರೋಫಿ ಕ್ರಿಕೆಟ್: ಕೌಶಿಕ್, ಶ್ರೇಯಸ್ ಮಿಂಚು • ಕರ್ನಾಟಕದ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ

ಆತಿಥೇಯರಿಗೆ ಅಭಿನವ್ ಆಸರೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಎರಡನೇ ದಿನವಾಟವು ಮಂದಬೆಳಕಿನಿಂದಾಗಿ ಸ್ಥಗಿತವಾಯಿತು. ಆತಿಥೇಯ ಕರ್ನಾಟಕದ ಬಳಗದಲ್ಲಿಯೂ ಅಂತಹದೇ ಆತಂಕದ ಕಪ್ಪುಛಾಯೆ ಆವರಿಸಿತ್ತು.

ಇಲ್ಲಿ ನಡೆಯುತ್ತಿರುವ ಬಂಗಾಳ ಎದುರು ಪಂದ್ಯದಲ್ಲಿ ಕರ್ನಾಟಕದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಮುಗ್ಗರಿಸಿದ್ದೇ ಇದಕ್ಕೆ ಕಾರಣ. ಆದರೆ, ಇನ್ನೂ ಕ್ರೀಸ್ ನಲ್ಲಿರುವ ಅಭಿನವ್ ಮನೋಹರ್ (ಬ್ಯಾಟಿಂಗ್ 50; 73ಎ) ಮತ್ತು ಅನುಭವಿ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ (ಬ್ಯಾಟಿಂಗ್ 23; 55ಎ) ಅವರ ಮೇಲೆ ಮಾತ್ರ ನಿರೀಕ್ಷೆಯ ಭಾರ ಇದೆ.

ಮಧ್ಯಮವೇಗಿ ವಾಸುಕಿ ಕೌಶಿಕ್ (38ಕ್ಕೆ5) ಅವರ ಬೌಲಿಂಗ್ ಬಲದಿಂದ ಬಂಗಾಳ ತಂಡವನ್ನು ಮೊದಲ ಇನಿಂಗ್ಸ್ ನಲ್ಲಿ 301 ರನ್‌ಗಳಿಗೆ ನಿಯಂತ್ರಿಸುವಲ್ಲಿ ಆತಿಥೇಯರು ಯಶಸ್ವಿಯಾದರು. ಆದರೆ ಈ ಸಂತಸ ಬಹಳ ಹೊತ್ತು ಉಳಿಯಲಿಲ್ಲ.

ಕರ್ನಾಟಕದ ಇನಿಂಗ್ಸ್‌ನ ಊಟ ಹಾಗೂ ಚಹಾ ವಿರಾಮದ ನಡುವಿನ ಅವಧಿಯಲ್ಲಿ 4 ವಿಕೆಟ್‌ಗಳು ಉರುಳಿದವು. ಆಗಿನ್ನೂ ತಂಡದ ಮೊತ್ತ 100ರ ಗಡಿಯನ್ನೂ ಮುಟ್ಟಿರಲಿಲ್ಲ. ಈ ಹಂತದಲ್ಲಿ ಮನೋಹರ್ ಮತ್ತು ಶ್ರೇಯಸ್ ಆಸರೆಯಾದರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ತಂಡವು 51 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 155 ರನ್ ಗಳಿಸಿತು. ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಬೇಕಾದರೆ ಇನ್ನೂ 146 ರನ್ ಗಳಿಸಬೇಕಿದೆ. ಅಭಿನವ್ ಮತ್ತು ಶ್ರೇಯಸ್ ಮುರಿಯದ 6ನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದ್ದಾರೆ.

ತಂಡಕ್ಕೆ ಉತ್ತಮ ಆರಂಭ ಕೊಡುವ ಪ್ರಯತ್ನವನ್ನು ಮಯಂಕ್ ಅಗರವಾಲ್ ಮತ್ತು ಕಿಶನ್ ಬೆದಾರೆ (ಫೀಲ್ಡಿಂಗ್ ಮಾಡುವಾಗ ಹಣೆಗೆ ಚೆಂಡು ಬಡಿದು ಗಾಯಗೊಂಡಿದ್ದ ನಿಕಿನ್ ಜೋಸ್ ಅವರಿಗೆ ಕಂಕಷನ್ ಬದಲಿ ಆಟಗಾರ) ಮಾಡಿದರು. ಇಬ್ಬರೂ ಅಪಾರ ತಾಳ್ಮೆಯಿಂದ ಬಂಗಾಳ ಬೌಲರ್‌ಗಳನ್ನು ಎದುರಿಸಿದರು. ಇದರಿಂದಾಗಿ 15 ಓವರ್‌ಗಳಲ್ಲಿ ಈ ಜೋಡಿಯು ಕೇವಲ 34 ರನ್ ಸೇರಿಸಿತು.

ಬಂಗಾಳ ತಂಡದ ವೇಗಿ ಇಶಾನ್ ಪೊರೆಲ್ ಎಸೆತವನ್ನು ಕಿಶನ್ ಅವರು ಬೌಂಡರಿಗೆ ಕಳಿಸುವ ಪ್ರಯತ್ನ ಮಾಡಿದರು. ಆದರೆ, ಗಾಳಿಯಲ್ಲಿ ಸಾಗಿದ ಚೆಂಡನ್ನು ಪಾಯಿಂಟ್ ಫೀಲ್ಡರ್ ಶಹಬಾಜ್ ಸುಲಭವಾಗಿ ಕ್ಯಾಚ್ ಮಾಡಿದರು. ಇದರೊಂದಿಗೆ ಜೊತೆಯಾಟ ಮುರಿಯಿತು. ಸಾಲು ಸಾಲು ವಿಕೆಟ್ ಪತನವೂ ಶುರುವಾಯಿತು.

ಬಂಗಾಳದ ಬಲಗೈ ಮಧ್ಯಮವೇಗಿ ರಿಷವ್ ವಿವೇಕ್ (44ಕ್ಕೆ2) ಮತ್ತು ಸೂರಜ್ ಸಿಂಧು ಜೈಸ್ವಾಲ್ (44ಕ್ಕೆ2) ಆತಿಥೇಯರಿಗೆ ಪೆಟ್ಟುಕೊಟ್ಟರು.

ಎರಡನೇ ರಣಜಿ ಋತು ಆಡುತ್ತಿರುವ ಬೆಳಗಾವಿಯ ಸುಜಯ್ ಸತೇರಿ (10 ರನ್) ಮತ್ತು ನವಪ್ರತಿಭೆ ಆರ್. ಸ್ಮರಣ್ (26; 35ಎ) ಅವಕಾಶ ಕೈಚೆಲ್ಲಿದರು. ಅನುಭವಿ ಬ್ಯಾಟರ್ ಮಯಂಕ್ ತಾವೆದುರಿಸಿದ 78ನೇ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಮನೀಷ್ ಪಾಂಡೆ ಖಾತೆಯನ್ನೇ ತೆರೆಯಲಿಲ್ಲ. ವಿವೇಕ್ ಎಸೆತವನ್ನು ಆಡುವ ಭರದಲ್ಲಿ ಶುವಾಂ ಡೇ ಕೈಗೆ ಕ್ಯಾಚಿತ್ತರು. ಅಭಿನವ್ ಅವರೊಂದಿಗೆ 5ನೇ ವಿಕೆಟ್ ಜೊತೆಯಾಟದಲ್ಲಿ 34 ರನ್ ಸೇರಿಸಿದ್ದ ಸ್ಮರಣ್ ಅವರಿಗೆ ಜೈಸ್ವಾಲ್ ಪೆವಿಲಿಯನ್ ದಾರಿ ತೋರಿಸಿದರು.

ಐಪಿಎಲ್‌ನಲ್ಲಿ ತಮ್ಮ ಬೀಸುಹೊಡೆತಗಳ ಮೂಲಕ ಗಮನ ಸೆಳೆದಿರುವ ಮನೋಹರ್ ಇಲ್ಲಿ ಕ್ರೀಸ್‌ಗೆ ಬಂದವರೇ ಪಟಪಟನೆ ರನ್ ಗಳಿಸಿದರು. ಆದರೆ ವಿಕೆಟ್‌ಗಳು ಪತನಗೊಳ್ಳಲಾರಂಭಿಸಿದಾಗ ತಮ್ಮ ಆಟದ ವೇಗ ಕಡಿಮೆ ಮಾಡಿದರು. ಶ್ರೇಯಸ್ ಕೂಡ ಸಹನೆಯಿಂದ ಬ್ಯಾಟಿಂಗ್ ಮಾಡಿದರು.



ಕರ್ನಾಟಕ ತಂಡದ ಬ್ಯಾಟರ್ ಅಭಿನವ್ ಮನೋಹರ
–ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಕೌಶಿಕ್‌ಗೆ ಐದು ವಿಕೆಟ್



ಪಂದ್ಯದ ಮೊದಲ ದಿನವಾದ ಬುಧವಾರ ಕರ್ನಾಟಕ ತಂಡದ ಕೌಶಿಕ್ 3 ವಿಕೆಟ್ ಗಳಿಸಿದ್ದರು. ದಿನದಾಟದ ಅಂತ್ಯಕ್ಕೆ ಬಂಗಾಳ ತಂಡವು 5 ವಿಕೆಟ್‌ಗಳಿಗೆ 249 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಶಹಬಾಜ್ ಮತ್ತು ವೃದ್ಧಿಮಾನ್ ಸಹಾ ಅವರು ಆಟ ಮುಂದುವರಿಸಿದರು.

ದಿನದ ಎರಡನೇ ಓವರ್ ಬೌಲಿಂಗ್ ಮಾಡಿದ ಕೌಶಿಕ್ ಅವರ ಎಸೆತವನ್ನು ಕಟ್ ಮಾಡುವ ಯತ್ನದಲ್ಲಿ ಶಹಬಾಜ್ ಅವರು ಕೀಪರ್ ಸುಜಯ್ ಸತೇರಿಗೆ ಕ್ಯಾಚಿತ್ತರು. ಇಶಾನ್ ಪೊರೆಲ್ ಅವರ ವಿಕೆಟ್ ಗಳಿಸಿದ ಕೌಶಿಕ್ ಐದು ವಿಕೆಟ್ ಗೊಂಚಲು ಪೂರೈಸಿದರು. ಇನ್ನೊಂದೆಡೆ ಪದಾರ್ಪಣೆಯ ಬೌಲರ್ ಅಭಿಲಾಷ್ ಶೆಟ್ಟಿ ಅವರು ವೃದ್ಧಿಮಾನ್ ವಿಕೆಟ್ ಪಡೆದರು. ಸ್ಪಿನ್ನರ್ ಶ್ರೇಯಸ್ ಬೌಲಿಂಗ್‌ನಲ್ಲಿ ಆಮಿರ್ ಗನಿ ಮತ್ತು ಜೈಸ್ವಾಲ್ ಔಟಾದರು. ಊಟದ ವಿರಾಮಕ್ಕೆ ಸುಮಾರು 40 ನಿಮಿಷಕ್ಕೂ ಮುನ್ನ ಆತಿಥೇಯರು ಬ್ಯಾಟಿಂಗ್ ಆರಂಭಿಸಿದರು.

ಕೌಶಿಕ್ ಅವರು ತಮ್ಮ ಸಾಮರ್ಥ್ಯವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ತಮಗಿರುವ ಮಿತಿಯಲ್ಲಿಯೇ ಉತ್ತಮವಾದ ಫಲಿತಾಂಶ ಪಡೆಯುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ. ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಅವರ ಅನುಪಸ್ಥಿತಿಯಲ್ಲಿ ತಂಡದ ಬೌಲಿಂಗ್ ಸಾರಥ್ಯವನ್ನು ಅವರು ನಿಭಾಯಿಸುತ್ತಿದ್ದಾರೆ. ಅನನುಭವಿ ಸಹ ಬೌಲರ್‌ಗಳೊಂದಿಗೆ ಆಡುತ್ತಿದ್ದಾರೆ.

'ನಾನು 135 ಅಥವಾ 140 ಕಿ.ಮೀ ವೇಗದ ಎಸೆತಗಳನ್ನು ಹಾಕುವ ಬೌಲರ್ ಅಲ್ಲ. ನಾನು 120 ಕಿ.ಮೀ ವೇಗದ ಎಸೆತಗಳಿಂದ ಆರಂಭ ಮಾಡುತ್ತೇನೆ. ಆದರೆ ಅದೇ ವೇಗದಲ್ಲಿ ಸರಿಯಾದ ಲೆಂಗ್ತ್ ಮತ್ತು ಲೈನ್ ಕಾಪಾಡಲು ಗಮನ ಕೊಡುತ್ತೇನೆ. ಅದನ್ನು ಸತತವಾಗಿ ಅಭ್ಯಾಸ ಮಾಡುತ್ತೇನೆ' ಎಂದು ದಿನದಾಟದ ನಂತರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹಾರ್ದಿಕ್ ರಾಜ್‌ಗೆ ಗಾಯ: ಬೆಳಿಗ್ಗೆ ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ಕರ್ನಾಟಕದ ಆಟಗಾರ ಹಾರ್ದಿಕ್ ರಾಜ್ ಗಾಯಗೊಂಡರು. ಅವರು ಡೈವ್ ಮಾಡುವಾಗ ಬಿದ್ದರು. ನಂತರ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಪೆವಿಲಿಯನ್‌ಗೆ ಕರೆದೊಯ್ಯಲಾಯಿತು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಬಂಗಾಳ: 301 (101.5 ಓವರ್‌ಗಳಲ್ಲಿ) (ಬುಧವಾರ 78 ಓವರ್‌ಗಳಲ್ಲಿ 5ಕ್ಕೆ249)
ಶಹಬಾಜ್ ಸಿ ಸತೇರಿ ಬಿ ಕೌಶಿಕ್ 59 (110ಎ, 4X7)
ವೃದ್ಧಿಮಾನ್ ಸಿ ಸ್ಮರಣ್ ಬಿ ಅಭಿಲಾಷ್ 6 (20ಎ, 4X1)
ಆಮೀರ್ ಸಿ ಅಭಿಲಾಷ್ ಬಿ ಶ್ರೇಯಸ್ 18 (64ಎ, 4X2)
ಸೂರಜ್ ಬಿ ಶ್ರೇಯಸ್ 16 (41ಎ, 4X2)
ಇಶಾನ್ ಸಿ ಮಯಂಕ್ ಬಿ ಕೌಶಿಕ್ 5 (16ಎ, 4X1)
ವಿವೇಕ್ ಔಟಾಗದೆ 1 (3ಎ)
ಇತರೆ: 13 (ಬೈ 2, ಲೆಗ್‌ಬೈ 6, ವೈಡ್ 3, ನೋಬಾಲ್ 2)
ವಿಕೆಟ್ ಪತನ: 6–254 (ಶಹಬಾಜ್ ಅಹಮದ್;79.4), 7–254 (ವೃದ್ಧಿಮಾನ್ ಸಹಾ; 82.4), 8–286 (ಸೂರಜ್ ಸಿಂಧು ಜೈಸ್ವಾಲ್; 95.2), 9–299 (ಇಶಾನ್ ಪೊರೆಲ್; 100.6), 10–301 (ಆಮೀರ್ ಗನಿ; 101.5)
ಬೌಲಿಂಗ್: ವಿ. ಕೌಶಿಕ್ 25–12–38–5, ಅಭಿಲಾಷ್ ಶೆಟ್ಟಿ 20–6–62–2, ವಿದ್ಯಾಧರ್ ಪಾಟೀಲ 19–4–63–0, ಶ್ರೇಯಸ್ ಗೋಪಾಲ್ 25.5–2–87–3, ಹಾರ್ದಿಕ್ ರಾಜ್ 12–1–43–0

ಕರ್ನಾಟಕ 5ಕ್ಕೆ155 (51 ಓವರ್‌ಗಳಲ್ಲಿ)
ಮಯಂಕ್ ಬಿ ಜೈಸ್ವಾಲ್ 17 (78ಎ, 4X1)
ಕಿಶನ್ ಸಿ ಶಹಬಾಜ್ ಬಿ ಇಶಾನ್ 23 (50ಎ, 4X3)
ಸತೇರಿ ಸಿ ಸಹಾ ಬಿ ವಿವೇಕ್ 10 (13ಎ, 4X2)
ಸ್ಮರಣ್ ಸಿ ಚಟರ್ಜಿ ಬಿ ಜೈಸ್ವಾಲ್ 26 (35ಎ, 4X4)
ಪಾಂಡೆ ಸಿ ಶುವಾಂ ಬಿ ವಿವೇಕ್ 0 (2ಎ)
ಮನೋಹರ್ ಬ್ಯಾಟಿಂಗ್ 50 (73ಎ, 4X6, 6X1)
ಶ್ರೇಯಸ್ ಬ್ಯಾಟಿಂಗ್ 23 (55ಎ, 4X2)
ಇತರೆ: 6 (ಲೆಗ್‌ಬೈ 5, ವೈಡ್ 1)
ವಿಕೆಟ್ ಪತನ: 1–34 (ಕಿಶನ್ ಬೆದಾರೆ; 15.4), 2–52 (ಸುಜಯ್ ಸತೇರಿ; 21.5), 3–62 (ಮಯಂಕ್ ಅಗರವಾಲ್'; 24.6), 4–63 (ಮನೀಷ್ ಪಾಂಡೆ; 25.5), 5–95 (ಸ್ಮರಣ್; 32.6)
ಬೌಲಿಂಗ್: ಇಶಾನ್ ಪೊರೆಲ್ 15–3–38–1, ಸೂರಜ್ ಸಿಂಧು ಜೈಸ್ವಾಲ್ 17–2–53–2, ರಿಷಭ್ ವಿವೇಕ್ 15–3–44–2, ಶಹಬಾಜ್ ಅಹಮದ್ 1–0–6–0, ಅವಿಲಿನ್ ಘೋಷ್ 3–1–9–0

ಶ್ರೇಯಸ್ ಅಯ್ಯರ್ ದ್ವಿಶತಕ



ಶ್ರೇಯಸ್

ಮುಂಬೈ (ಪಿಟಿಐ): ಭಾರತ ತಂಡಕ್ಕೆ ಮರುಪ್ರವೇಶಿಸುವ ತವಕದಲ್ಲಿರುವ ಶ್ರೇಯಸ್ ಅಯ್ಯರ್ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಗುರುವಾರ ಒಡಿಶಾ ವಿರುದ್ಧ ದ್ವಿಶತಕ ದಾಖಲಿಸಿದರು.

ಶರದ್ ಪವಾರ್ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಶ್ರೇಯಸ್ (233; 228ಎ, 4X24, 6X9) ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಮುಂಬೈ ತಂಡವು ಮೊದಲ ಇನಿಂಗ್ಸ್‌ನಲ್ಲಿ 123.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 602 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಸಿದ್ಧಾರ್ಥ್ ಲಾಡ್ (ಬ್ಯಾಟಿಂಗ್ 169) ಕೂಡ ಭರ್ಜರಿ ಶತಕ ಗಳಿಸಿದರು. ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಒಡಿಶಾ ತಂಡವು ಎರಡನೇ ದಿನದಾಟದ ಕೊನೆಗೆ 49 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 146 ರನ್ ಗಳಿಸಿದೆ. ತಂಡದ ಬ್ಯಾಟರ್ ಸಂದೀಪ್ ಪಟ್ನಾಯಕ್ (ಬ್ಯಾಟಿಂಗ್ 73) ಕ್ರೀಸ್‌ನಲ್ಲಿದ್ದಾರೆ.

ಕನ್ನಡಿಗ ಡೇಗಾ ನಿಶ್ಚಲ್ ಶತಕ

ಕನ್ನಡಿಗ ಡೇಗಾ ನಿಶ್ಚಲ್ (ಬ್ಯಾಟಿಂಗ್ 103; 168ಎ, 4X6) ಅವರ ಶತಕದ ಬಲದಿಂದ ನಾಗಾಲ್ಯಾಂಡ್ ಇಲ್ಲಿ ನಡೆಯುತ್ತಿರುವ ಪ್ಲೇಟ್ ಗುಂಪಿನ ಪಂದ್ಯದಲ್ಲಿ ಸಿಕ್ಕಿಂ ಎದುರು ಮುನ್ನಡೆ ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಸಿಕ್ಕಿಂ 106 ಓವರ್‌ಗಳಲ್ಲಿ 192 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ನಾಗಾಲ್ಯಾಂಡ್ ಎರಡನೇ ದಿನದಾಟದ ಅಂತ್ಯಕ್ಕೆ 66 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 194 ರನ್ ಗಳಿಸಿತು.

ಚೆಸ್ ವಿಶ್ವ ರ್‍ಯಾಂಕಿಂಗ್: 2ನೇ ಸ್ಥಾನಕ್ಕೇರಿದ ಅರ್ಜುನ್



ಅರ್ಜುನ್ ಇರಿಗೇಶಿ

ಚೆನ್ನೈ (ಪಿಟಿಐ): ಭಾರತದ ಅರ್ಜುನ್ ಇರಿಗೇಶಿ ಅವರು ವಿಶ್ವ ಚೆಸ್ ಕ್ರಮಾಂಕದಲ್ಲಿ ಎರಡನೇ ಸ್ಥಾನಕ್ಕೇರಿದರು. ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಗುರುವಾರ ಸರ್ಬಿಯಾದ ಅಲೆಕ್ಸಿ ಸರನ ಅವರನ್ನು ಸೋಲಿಸುವ ಮೂಲಕ ಈ ಗೌರವಕ್ಕೆ ಪಾತ್ರರಾದರು.

ಮಾಸ್ಟರ್ಸ್ ವಿಭಾಗದಲ್ಲಿ ಮೂರನೇ ಸುತ್ತಿನ ನಂತರ ಅವರು, ಇರಾನಿನ ಅಮಿನ್ ತಬಾತಬೇಯಿ ಜೊತೆ ಜಂಟಿಯಾಗಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಇಬ್ಬರೂ ತಲಾ ಎರಡೂವರೆ ಪಾಯಿಂಟ್ಸ್ ಗಳಿಸಿದ್ದಾರೆ. ಅರ್ಮೇನಿಯ ಸಂಜಾತ ಅಮೆರಿಕದ ಆಟಗಾರ ಲೆವೊನ್ ಅರೋನಿಯನ್ (2) ಮೂರನೇ ಸ್ಥಾನದಲ್ಲಿದ್ದಾರೆ.

21 ವರ್ಷ ವಯಸ್ಸಿನ ಅರ್ಜುನ್, ಮತ್ತೆ 2,800 ಇಎಲ್‌ಒ ರೇಟಿಂಗ್ ತಲುಪಿದ್ದಾರೆ. ಫಿಡೆ ಕ್ರಮಾಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರನ್ನು ಹಿಂದೆಹಾಕಿದರು.

ಈ ಟೂರ್ನಿಯ ಮತ್ತೊಂದು ಅಚ್ಚರಿಯ ಫಲಿತಾಂಶದಲ್ಲಿ ಇರಾನಿನ ತಬಾತಬೇಯಿ, ಫ್ರಾನ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರಿಗೆ ಆಘಾತ ನೀಡಿದರು.

ಎಂಟು ಆಟಗಾರರು ಕಣದಲ್ಲಿರುವ ಈ ಟೂರ್ನಿಯಲ್ಲಿ ಅರೋನಿಯನ್, ಇರಾನಿನ ಪರ್ಹಾಮ್ ಮಘಸೂಡ್ಲೂ ಮೇಲೆ ಜಯಗಳಿಸಿದರು. ಭಾರತದ ವಿದಿತ್ ಗುಜರಾತಿ, ಕೆಚ್ಚೆದೆಯ ಆಟದ ಮೂಲಕ ಸ್ಥಳೀಯ ಫೆವರೀಟ್ ಅರವಿಂದ ಚಿದಂಬರಂ ಜೊತೆ ಡ್ರಾ ಮಾಡಿಕೊಂಡರು. ಆ ಮೂಲಕ ಸತತ ಮೂರನೇ ಸೋಲಾಗುವುದನ್ನು ತಪ್ಪಿಸಿಕೊಂಡರು.

ಚಾಲೆಂಜರ್ಸ್ ವಿಭಾಗದಲ್ಲಿ ವಿ. ಪ್ರಣವ್, ಯಶಸ್ಸಿನ ಓಟ ಮುಂದುವರಿಸಿ ಕಾರ್ತಿಕೇಯನ್ ಮುರಳಿ ವಿರುದ್ಧ ಜಯಗಳಿಸಿದರು. ಸತತ ಮೂರನೇ ಜಯದೊಡನೆ ಅಗ್ರಸ್ಥಾನದಲ್ಲಿದ್ದಾರೆ. ಪ್ರಾಣೇಶ್ ಎಂ. ಇನ್ನೊಂದು ಪಂದ್ಯದಲ್ಲಿ ವೈಶಾಲಿ ರಮೇಶಬಾಬು ವಿರುದ್ಧ ಜಯಗಳಿಸಿ ತಮ್ಮ ಸ್ಥಿತಿ ಉತ್ತಮಪಡಿಸಿಕೊಂಡರು.

ರೌನಕ್ ಸಾಧ್ವಾನಿ ಮತ್ತು ಲಿಯೊನ್ ಲೂಕ್ ಮೆಂಡೋನ್ಸಾ ನಡುವಣ ಕುತೂಹಲಕರ ಪಂದ್ಯ 'ಡ್ರಾ'ದಲ್ಲಿ ಅಂತ್ಯಗೊಂಡಿತು. ದ್ರೋಣವಲ್ಲಿ ಹಾರಿಕ ಮತ್ತು ಅಭಿಮನ್ಯು ಪುರಾಣಿಕ್ ಸಹ ಡ್ರಾ ಕರಾರಿಗೆ ಸಹಿಹಾಕಿದರು.

ರಾಷ್ಟ್ರೀಯ ಹಾಕಿ: ಗೋಲುಗಳ ಸುರಿಮಳೆ

ಚೆನ್ನೈ: ಆತಿಥೇಯ ಚೆನ್ನೈ ತಂಡವು ಇಲ್ಲಿ ನಡೆಯುತ್ತಿರುವ 14ನೇ ಹಾಕಿ ಇಂಡಿಯಾ ಸೀನಿಯರ್ ಪುರುಷರ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಗುರುವಾರ 43–0 ಗೋಲುಗಳಿಂದ ಅಂಡಮಾನ್ ಮತ್ತು ನಿಕೋಬರ್ ತಂಡವನ್ನು ಸೋಲಿಸಿತು.

ಮತ್ತೊಂದು ಪಂದ್ಯದಲ್ಲಿ ಮಧ್ಯಪ್ರದೇಶ ತಂಡವು 17–0ಯಿಂದ ಆಂಧ್ರಪ್ರದೇಶ ತಂಡವನ್ನು ಸೋಲಿಸಿತು. ಇತರ ಪಂದ್ಯಗಳಲ್ಲಿ ಉತ್ತರ ಪ್ರದೇಶವು 4–1ರಿಂದ ದೆಹಲಿ ತಂಡದ ವಿರುದ್ಧ; ಚಂಡೀಗಢ 9–0ಯಿಂದ ಉತ್ತರಾಖಂಡ ವಿರುದ್ಧ; ಮಿಜೋರಾಂ 2–1ರಿಂದ ತೆಲಂಗಾಣ ವಿರುದ್ಧ ಜಯ ಸಾಧಿಸಿದವು.

ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯ ಪಂದ್ಯ ಇಂದು
ಯುವ ಆಟಗಾರರಿಗೆ ಮಿಂಚಲು ಅವಕಾಶ

ಡರ್ಬನ್ (ಪಿಟಿಐ): ಭಾರತ ಕ್ರಿಕೆಟ್ ತಂಡ ಪರಿವರ್ತನೆಯ ಹಂತದಲ್ಲಿದ್ದು, ಎರಡನೇ ಸಾಲಿನ ಆಟಗಾರರಿಗೆ ಛಾಪು ಮೂಡಿಸುವ ಸವಾಲು ಇದೆ. ದಕ್ಷಿಣ ಆಫ್ರಿಕಾ ವಿರುದ್ಧ ನಾಲ್ಕು ಪಂದ್ಯಗಳ ಟಿ20 ಸರಣಿಯ ಮೊದಲನೆಯದು ಕಿಂಗ್ಸ್‌ಮೀಡ್‌ನಲ್ಲಿ ಶುಕ್ರವಾರ ನಡೆಯಲಿದ್ದು, ಸಂಜು ಸ್ಯಾಮ್ಸನ್ ಮತ್ತು ಅಭಿಷೇಕ್ ಶರ್ಮಾ ಅವರು ಇಲ್ಲಿ ಉತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿದ್ದಾರೆ.

ಸೂರ್ಯಕುಮಾರ್ ಯಾದವ್ ಸಾರಥ್ಯದ ಭಾರತ ತಂಡದಲ್ಲಿ ಹಲವು ಯುವ ಪ್ರತಿಭಾನ್ವಿತರಿದ್ದಾರೆ.

ತಾವು ಮೊದಲ ಆಯ್ಕೆಯ ಆಟಗಾರ ಎನಿಸಿಕೊಳ್ಳಲು ಸ್ಯಾಮ್ಸನ್ ಈ ಸರಣಿಯಲ್ಲಿ ಸ್ಥಿರ ಪ್ರದರ್ಶನ ನೀಡಬೇಕಾಗಿದೆ. ಬಾಂಗ್ಲಾದೇಶ ವಿರುದ್ಧ ಇತ್ತೀಚಿನ ಟಿ20 ಸರಣಿಯಲ್ಲಿ ಸಂಜು ಸ್ಯಾಮ್ಸನ್ ಅಂಥ ಅವಕಾಶವನ್ನು ಬಳಸಿಕೊಂಡಿದ್ದಾರೆ. ತವರಿನ ಆ ಸರಣಿಯಲ್ಲಿ ಮಿಂಚಿನ ಶತಕವನ್ನೂ (111, 47 ಎ) ಸಿಡಿಸಿದ್ದರು.

ರೋಹಿತ್ ಶರ್ಮಾ ನಿರ್ಗಮನದ ನಂತರ ಟಿ20 ತಂಡದಲ್ಲಿ ಸ್ಯಾಮ್ಸನ್ ತಮ್ಮ ಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಳ್ಳಬೇಕಾದರೆ ಈ ಸರಣಿ ಅದಕ್ಕೆ ಸದವಕಾಶವಾಗಿದೆ.

ಬಿರುಸಿನ ಹೊಡೆತಗಳ ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾ ಅವರ ಪಾಲಿಗೂ ಇದು ಮಹತ್ವದ್ದು. ಜಿಂಬಾಬ್ವೆ ವಿರುದ್ಧ ಹರಾರೆಯಲ್ಲಿ 47 ಎಸೆತಗಳಲ್ಲಿ ಶತಕ ಬಾರಿಸಿದ ನಂತರ ಅವರು ರನ್ ಬರ ಎದುರಿಸುತ್ತಿದ್ದಾರೆ. ಕಳೆದ ಆರು ಇನಿಂಗ್ಸ್‌ಗಳಲ್ಲಿ ಒಮ್ಮೆಯೂ ಅವರು 20 ರನ್ ದಾಟಿಲ್ಲ. ಹೀಗಾಗಿ ಅವರು ಲಯಕ್ಕೆ ಮರಳಬೇಕಾದ ಒತ್ತಡದಲ್ಲಿದ್ದಾರೆ. ಅವರು ಉಪಯುಕ್ತ ಎಡಗೈ ಸ್ಪಿನ್ನರ್ ಕೂಡ.

ಎಡಗೈ ಆಟಗಾರ ತಿಲಕ್ ವರ್ಮಾ ಅವರ ಕಥೆ ಭಿನ್ನವೇನಲ್ಲ. 2023ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭರ್ಜರಿ ಆರಂಭ ಮಾಡಿದ್ದ ಅವರು ನಂತರ ಅದೇ ರೀತಿಯಲ್ಲಿ ಆಡಿಲ್ಲ. ನಂತರದ 12 ಇನಿಂಗ್ಸ್‌ಗಳಲ್ಲಿ ಅವರಿಂದ ಒಂದು ಅರ್ಧ ಶತಕವಷ್ಟೇ ದಾಖಲಾಗಿದೆ.

ವಿಕೆಟ್ ಕೀಪರ್ ಜಿತೇಶ್ ಶರ್ಮಾ ಅವರಿಗೂ ತಂಡದಲ್ಲಿ ಸ್ಥಾನ ಗಟ್ಟಿಪಡಿಸಿಕೊಳ್ಳಲು ಅವಕಾಶವಿದೆ. ವರುಣ್ ಚಕ್ರವರ್ತಿ ಅವರಿಗೂ ಸ್ಪಿನ್ ವಿಭಾಗದಲ್ಲಿ ಪ್ರಬಲ ಪರ್ಯಾಯವೆನಿಸಲು ಕಾತುರದಿಂದ ಇದ್ದಾರೆ.

ಅರ್ಷದೀಪ್ ಸಿಂಗ್, ಆವೇಶ್ ಖಾನ್, ವಿಜಯಕುಮಾರ್ ವೈಶಾಖ್ ಮತ್ತು ಯಶ್ ದಯಾಳ್ ಅವರನ್ನು ಹೊಂದಿರುವ ವೇಗದ ಬೌಲರ್‌ಗಳ ಪ್ರದರ್ಶನದ ಮೇಲೂ ಆಯ್ಕೆಗಾರರ ಕಣ್ಣು ನೆಟ್ಟಿದೆ. ರಮಣದೀಪ್ ಸಿಂಗ್ ಅವರೂ ಭರವಸೆಯ ಯುವ ಆಟಗಾರ. ಕೆಳಕ್ರಮಾಂಕದ ಬ್ಯಾಟಿಂಗ್, ವೇಗದ ಬೌಲಿಂಗ್ ಜೊತೆಗೆ ಉತ್ತಮ ಫೀಲ್ಡರ್ ಆಗಿ ಗುರುತಿಸಿಕೊಂಡಿದ್ದಾರೆ.

ಜೂನ್‌ನಲ್ಲಿ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಈ ಎರಡು ತಂಡಗಳು ಎದುರಾಗಿದ್ದು, ದಕ್ಷಿಣ ಆಫ್ರಿಕಾ ಅಲ್ಪ ಅಂತರದಲ್ಲಿ ಸೋತಿತ್ತು. ಈಗ ಮುಯ್ಯಿ ತೀರಿಸಲು ಆ ತಂಡ ತವಕದಿಂದ ಇದೆ.

ಪಂದ್ಯ ಆರಂಭ: ರಾತ್ರಿ 8.30 (ಭಾರತೀಯ ಕಾಲಮಾನ)
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ



ಟ್ರೋಫಿಯೊಂದಿಗೆ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ (ಬಲ) ಮತ್ತು ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ –ಎಕ್ಸ್ ಚಿತ್ರ

ಡಬ್ಲ್ಯುಪಿಎಲ್: ಆರ್‌ಸಿಬಿಯಲ್ಲಿ ಉಳಿದ ಸ್ಮೃತಿ, ಶ್ರೇಯಾಂಕಾ



ಶ್ರೇಯಾಂಕಾ ಪಾಟೀಲ ಮತ್ತು ಸ್ಮೃತಿ ಮಂದಾನ

ನವದೆಹಲಿ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಪ್ರಮುಖ ಆಟಗಾರ್ತಿಯರನ್ನು ಉಳಿಸಿಕೊಂಡಿದೆ. ಅದರಲ್ಲಿ ನಾಯಕಿ ಸ್ಮೃತಿ ಮಂದಾನ, ಎಲಿಸ್ ಪೆರಿ, ಕನ್ನಡತಿ ಶ್ರೇಯಾಂಕಾ ಪಾಟೀಲ ಹಾಗೂ ವಿಕೆಟ್‌ಕೀಪರ್ ರಿಚಾ ಘೋಷ್ ಅವರಿದ್ದಾರೆ. ಒಟ್ಟು ಐವರು ಆಟಗಾರ್ತಿಯರನ್ನು ಬಿಡುಗಡೆ ಮಾಡಿದೆ.

ಆರ್‌ಸಿಬಿಯು ದಿಶಾ ಕಾಸಾತ್, ಇಂದ್ರಾಣಿ ರಾಯ್, ಶ್ರದ್ಧಾ ಪೋಕಾರ್ಕರ್, ಶುಭಾ ಸತೀಶ್ ಮತ್ತು ಸಿಮ್ರಾನ್ ಬಹದ್ದೂರ್ ಅವರು ಬಿಡುಗಡೆಯಾಗಿದ್ದಾರೆ. ಗುರುವಾರ ಆರ್‌ಸಿಬಿಯು ಫ್ರಾಂಚೈಸಿ 6 ವಿದೇಶಿ ಆಟಗಾರ್ತಿಯರು ಸೇರಿದಂತೆ 14 ಮಂದಿಯನ್ನು ಉಳಿಸಿಕೊಂಡಿದೆ.

ಆರ್‌ಸಿಬಿಯು ಶೋಭನಾ, ಡೇನಿಯಲ್ ವೈಟ್, ಏಕ್ತಾ ಬಿಸ್ಟ್, ಎಲಿಸ್ ಪೆರಿ, ಜಾರ್ಜಿಯಾ ವರ್‍ಹ್ಯಾಮ್, ಕನ್ನಿಕಾ ಅಹುಜಾ, ಕೇಟ್ ಕ್ರಾಸ್, ರೇಣುಕಾ ಸಿಂಗ್, ರಿಚಾ ಘೋಷ್, ಎಸ್. ಮೇಘನಾ, ಶ್ರೇಯಾಂಕಾ ಪಾಟೀಲ, ಸ್ಮೃತಿ ಮಂದಾನ, ಸೋಫಿ ಡಿವೈನ್ ಮತ್ತು ಸೋಫಿ ಮಾಲಿನೆ ಅವರನ್ನು ಉಳಿಸಿಕೊಂಡಿದೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡವೂ ತನ್ನ ಬಳಗದ ಪಟ್ಟಿ ಪ್ರಕಟಿಸಿದೆ. ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ರಾಧಾ ಯಾದವ್ ಮತ್ತು ಅರುಂಧತಿ ರೆಡ್ಡಿ ಅವರನ್ನು ಉಳಿಸಿಕೊಂಡಿದೆ. ಮುಂಬೈ ಇಂಡಿಯನ್ಸ್ ತಂಡವೂ 14 ಆಟಗಾರ್ತಿಯರನ್ನ ರಿಟೇನ್ ಮಾಡಿಕೊಂಡಿದೆ. ಹರ್ಮನ್‌ಪ್ರೀತ್ ಕೌರ್, ನಾಟ್ ಶಿವರ್ ಬ್ರಂಟ್ ಉಳಿದ ಆಟಗಾರ್ತಿಯರಾಗಿದ್ದಾರೆ.

ಖಾಡೆ ವಿರುದ್ಧ ಲೈಂಗಿಕ ಕಿರುಕುಳ ದೂರು: ಎಸ್‌ಎಫ್‌ಐನಿಂದ ತನಿಖೆ

• ರೋಷನ್ ತ್ಯಾಗರಾಜನ್



ಈಜುಪಟು ವೀರಧವಳ ಖಾಡೆ

ಬೆಂಗಳೂರು: ಒಲಿಂಪಿಯನ್ ಈಜುಪಟು ವೀರಧವಳ ಖಾಡೆ ಅವರ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳದ ಆರೋಪದ ಬಗ್ಗೆ ತನಿಖೆ ನಡೆಸಲು ಭಾರತ ಈಜು ಫೆಡರೇಷನ್ ಮುಂದಾಗಿದೆ.

ಗ್ರೇಟರ್ ಮುಂಬೈ ಅಮೆಚೂರ್ ಅಕ್ವೆಟಿಕ್ ಅಸೋಸಿಯೇಷನ್ (ಜಿಎಂಎಎ) ನಲ್ಲಿ ತಮ್ಮಿಂದ ಹಿಂದೆ ತರಬೇತಿ ಪಡೆದಿದ್ದ 18 ವರ್ಷ ವಯಸ್ಸಿನ ಈಜುಗಾರ್ತಿಗೆ ಅಶ್ಲೀಲ ಚಿತ್ರಗಳನ್ನು ಕಳಹಿಸಿದ್ದನ್ನು ಅವರು ಒಪ್ಪಿಕೊಂಡಿದ್ದಾರೆ ಮತ್ತು ಕ್ಷಮೆ ಯಾಚಿಸಿದ್ದಾರೆ ಎಂದು ಕೆಲವು ಮಾಧ್ಯಮಗಳಲ್ಲಿ ಗುರುವಾರ ವರದಿಯಾಗಿತ್ತು.

ಈ ಆರೋಪದ ಬೆನ್ನಲ್ಲಿ ಜಿಎಂಎಎಯ ಶಿಸ್ತು ಸಮಿತಿಯು ಅರ್ಜುನ ಪ್ರಶಸ್ತಿ ಪುರಸ್ಕೃತ ಈಜುಪಟುವಿನ ಮೇಲೆ ಒಂದು ವರ್ಷ ನಿಷೇಧ ಹೇರಿದೆ. ಜಿಮ್ಖಾನಾದ ಯಾವುದೇ ಸಭೆಗಳಲ್ಲಿ ಭಾಗ ವಹಿಸದಂತೆ ನಿರ್ಬಂಧವನ್ನೂ ಹೇರಿದೆ.

'ಈಗ ವರದಿಯಾಗಿರುವ ಪ್ರಕರಣ ಗಾಬರಿ ಹುಟ್ಟಿಸಿದೆ. ಅವರ ವಿರುದ್ಧ ಇನ್ನಷ್ಟು ಕಠಿಣ ಕ್ರಮಕ್ಕೆ ಭಾರತ ಈಜು ಫೆಡರೇಷನ್ ಒತ್ತಡ ಹಾಕಲಿದೆ' ಎಂದು ಫೆಡರೇಷನ್‌ನ ಕಾರ್ಯದರ್ಶಿ ಮೋನಾಲ್ ಚೋಕ್ಸಿ ಹೇಳಿದರು.

'ನಮಗೆ ಅ.30ರಂದು ಜಿಎಂಎಎ ನಿಂದ ಪತ್ರ ಬಂದಿದೆ. ಈ ಬಗ್ಗೆ ಪರಿಶೀಲಿಸಲು ನಮ್ಮಲ್ಲಿ ಶಿಸ್ತುಸಮಿತಿಯಿದೆ' ಎಂದು ಚೋಕ್ಸಿ 'ಪ್ರಜಾವಾಣಿ'ಗೆ ತಿಳಿಸಿದರು. ಇಂಥ ಪ್ರಕರಣಗಳ ಬಗ್ಗೆ ತನಿಖೆ ನಡೆಸಲು ನಮ್ಮಲ್ಲಿ 'ಪೋಷ್' (ಲೈಂಗಿಕ ಶೋಷಣೆ ತಡೆ) ಸಮಿತಿಯಿದೆ. ಈ ಪ್ರಕರಣದ ಬಗ್ಗೆ ಆಮೂಲಾಗ್ರ ತನಿಖೆ ನಡೆಸಲಾಗುವುದು. ಎರಡೂ ಕಡೆಯವರಿಂದ ಮಾಹಿತಿ ಪಡೆದು ಯಾವ ರೀತಿಯ ಕ್ರಮ ಕೈಗೊಳ್ಳಬಹುದು ಎಂಬುದನ್ನು ನಿರ್ಧರಿಸುತ್ತೇವೆ' ಎಂದರು.

ಜಿಎಂಎಎ ಕಾರ್ಯದರ್ಶಿ ಕಿಶೋರ್ ವೈದ್ಯ ಅವರನ್ನು ಸಂಪರ್ಕಿಸಿದಾಗ, 'ಈ ಪ್ರಕರಣಕ್ಕೂ ತಮಗೂ ಯಾವುದೇ ಸಂಬಂಧವಿಲ್ಲ. ಪ್ರಕರಣದ ಮಾಹಿತಿಯೂ ಇಲ್ಲ' ಎಂದರು. ಖಾಡೆ ಅವರು ಮೊಬೈಲ್ ಕರೆಗೆ ಸ್ಪಂದಿಸಲಿಲ್ಲ.

ಪಾನಮತ್ತರಾಗಿದ್ದ ಖಾಡೆ ಅವರು 'ಆಕಸ್ಮಿಕವಾಗಿ' ಈಜುಗಾರ್ತಿಗೆ ಅಶ್ಲೀಲ ಚಿತ್ರಗಳನ್ನು ಕಳುಹಿಸಿದ್ದಾರೆ. ಅವರು ಸಮಿತಿಯ ಮುಂದೆ ಹಾಜರಾಗಿ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಆಕೆಯ ಪೋಷಕರ ಬಳಿಯೂ ಮಾತನಾಡಿದ್ದಾರೆ ಎಂದು ವರದಿಯಲ್ಲಿ ಆರೋಪಿಸಲಾಗಿದೆ.

ಕೊಲ್ಹಾಪುರದ ಖಾಡೆ ಅವರು 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 2010ರಲ್ಲಿ ಚೀನಾದಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಜಯಿಸಿದ್ದರು. ಈ ವರ್ಷದ ಆರಂಭದಲ್ಲಿ ಮಹಾರಾಷ್ಟ್ರದಲ್ಲಿ ಸರ್ಕಾರಿ ಕೆಲಸವನ್ನು ತ್ಯಜಿಸಿ, ಯುವ ಈಜುಪಟುಗಳಿಗೆ ಕೋಚಿಂಗ್ ನೀಡುವತ್ತ ಗಮನ ಕೇಂದ್ರೀಕರಿಸಿದ್ದರು.

ಭಾರತ 'ಎ' ಬ್ಯಾಟಿಂಗ್ ಮತ್ತೆ ಕುಸಿತ

ಮೆಲ್ಬರ್ನ್ (ಪಿಟಿಐ): ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ, ಇನ್ನೊಂದೆಡೆ ಕೌಶಲ ಮತ್ತು ಸಂಯಮದ ಆಟ ಪ್ರದರ್ಶಿಸಿದ ಧ್ರುವ್ ಜುರೆಲ್, ಭಾರತ ಎ ತಂಡದ ಕಳಪೆ ಬ್ಯಾಟಿಂಗ್ ನಡುವೆ ಬೆಳ್ಳಿರೇಖೆಯಂತೆ ಕಂಡರು. ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಗುರುವಾರ ಆರಂಭವಾದ ಎರಡನೇ 'ಟೆಸ್ಟ್' ಪಂದ್ಯದಲ್ಲಿ ಭಾರತ ಎ 57.1 ಓವರುಗಳಲ್ಲಿ 161 ರನ್‌ಗಳಿಗೆ ಉರುಳಿತು.

ದಿನದಾಟದ ಕೊನೆಗೆ ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 53 ರನ್ ಗಳಿಸಿದೆ.

ಮೂರನೇ ಓವರ್‌ನಲ್ಲೇ ಕ್ರೀಸಿಗಳಿದ ಜುರೆಲ್ (80, 161ಎ, 4x6, 6x2) ಅವರು ಭಾರತ ತಂಡದ ಅರ್ಧದಷ್ಟು ಮೊತ್ತ ಗಳಿಸಿದರು. ಅವರನ್ನು ಬಿಟ್ಟರೆ 20 ರನ್‌ಗಳಿಗಿಂತ ಹೆಚ್ಚು ಗಳಿಸಿದವರು ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್ (26, 55ಎ, 4x3) ಮಾತ್ರ.

ಇನಿಂಗ್ಸ್ ಆರಂಭಿಸಿದ ಕೆ.ಎಲ್. ರಾಹುಲ್ (4), ಸ್ಕಾಟ್ ಬೋಲ್ಯಾಂಡ್ ಬೌಲಿಂಗ್‌ನಲ್ಲಿ ನೇರವಾಗಿ ಬಂದ ಎಸೆತವನ್ನು ವಿಕೆಟ್ ಕೀಪರ್ ಪಿಯರ್ಸನ್‌ಗೆ ಆಡಿದರು. ವೇಗದ ಬೌಲರ್ ಮೈಕೆಲ್ ನೆಸೆರ್ (12.2 ಓವರುಗಳಲ್ಲಿ 27ಕ್ಕೆ4) ಆರಂಭದಲ್ಲೇ ನೀಡಿದ ಹೊಡೆತದಿಂದ ಭಾರತ 'ಎ' ಚೇತರಿಸಲಿಲ್ಲ. ಅವರು ಮೊದಲ ಐದು ವಿಕೆಟ್‌ಗಳಲ್ಲಿ ನಾಲ್ಕನ್ನು ಪಡೆದರು.

ಅಭಿಮನ್ಯು ಈಶ್ವರನ್ (0) ಮತ್ತೆ ವಿಫಲರಾದರು. ಯದಲ್ಲಿದ್ದ ಸಾಯಿ ಸುದರ್ಶನ್ ಕೂಡ ಬೇಗ ನಿರ್ಗಮಿಸಿದ್ದರು. ನಾಯಕ ಋತುರಾಜ್ ಗಾಯಕವಾಡ್ ಸಹ, ಸುದರ್ಶನ್ ಅವರಂತೆ ನೆಸೆರ್ ಬೌಲಿಂಗ್‌ನಲ್ಲಿ ಸ್ಲಿಪ್‌ನಲ್ಲಿ ಕ್ಯಾಚ್ ನೀಡಿದರು.

ಶಾಂತಚಿತ್ತದಿಂದ ಆಡಿದ ಜುರೆಲ್ ವಿಕೆಟ್ ಕಾಪಾಡಿಕೊಂಡರು. ಬೌನ್ಸ್ ಆಗುತ್ತಿದ್ದ ಪಿಚ್‌ನಲ್ಲಿ ಚೆಂಡಿನ ಲೆಂತ್ ಗುರುತಿಸಿ ಆಡಿದರು. ರಿಷಭ್ ಪಂತ್ ನಂತರ ಎರಡನೇ ವಿಕೆಟ್ ಕೀಪರ್ ಆಗಿರುವ ಜುರೆಲ್, ಈಗ ಆಸ್ಟ್ರೇಲಿಯಾದ ಪರಿಸ್ಥಿತಿಯಲ್ಲಿ ಸರ್ಫರಾಜ್ ಅವರಿಗಿಂತ ಉಪಯುಕ್ತ ಆಟಗಾರ ಎನಿಸುವ ಸಂದೇಶ ರವಾನಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 57.1 ಓವರುಗಳಲ್ಲಿ 161 (ದೇವದತ್ತ ಪಡಿಕ್ಕಲ್ 26, ಧ್ರುವ್ ಜುರೆಲ್ 80; ಮೈಕೆಲ್ ನೆಸೆರ್ 27ಕ್ಕೆ4, ಬ್ಯೂ ವೆಬ್‌ಸ್ಟರ್ 19ಕ್ಕೆ3); ಆಸ್ಟ್ರೇಲಿಯಾ ಎ' 17.1 ಓವರುಗಳಲ್ಲಿ 2 ವಿಕೆಟ್‌ಗೆ 53 (ಮಾರ್ಕಸ್ ಹ್ಯಾರಿಸ್ ಔಟಾಗದೇ 26; ಮುಕೇಶ್ ಕುಮಾರ್ 13ಕ್ಕೆ, ಖಲೀಲ್ ಅಹ್ಮದ್ 18ಕ್ಕೆ1).

ದಬಾಂಗ್‌ಗೆ ಮಣಿದ ವಾರಿಯರ್ಸ್

ಹೈದರಾಬಾದ್: ಆರಂಭಿಕ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾದ ದಬಾಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡವನ್ನು ಗುರುವಾರ ಮೂರು ಅಂಕಗಳಿಂದ ಮಣಿಸಿತು. ಆ ಮೂಲಕ ಸತತ ನಾಲ್ಕು ಸೋಲುಗಳ ನಂತರ ಗೆಲುವಿನ ಹಳಿಗೆ ಮರಳಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡ 33-30 ಅಂಕಗಳಿಂದ ಬೆಂಗಾಲ್‌ಗೆ ಸೋಲುಣಿಸಿತು. ಕೊನೆಯ ಐದು ನಿಮಿಷಗಳಲ್ಲಿ ಬೆಂಗಾಲ್ ಆಟಗಾರರು ಆಕ್ರಮಣಕಾರಿ ಆಟವಾಡಿದರೂ ಗೆಲುವು ದಕ್ಕಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆ ತಂಡ ಮೂರನೇ ಸೋಲಿಗೆ ಗುರಿಯಾಗಬೇಕಾಯಿತು.

ದಬಾಂಗ್ ಡೆಲ್ಲಿ ಪರ ಅನುಭವಿ ಅಶು ಮಲಿಕ್ (10 ಅಂಕ), ವಿನಯ್ (8 ಅಂಕ) ಮತ್ತು ಆಶೀಶ್ (6 ಅಂಕ) ಮಿಂಚಿದರು. ಬೆಂಗಾಲ್ ವಾರಿಯರ್ಸ್ ಕಡೆ ನಿತಿನ್ ಕುಮಾರ್ (15 ಅಂಕ) ಏಕಾಂಗಿ ಹೋರಾಟ ನಡೆಸಿದರು. ಸ್ಟಾರ್ ರೇಡರ್ ಮಣಿಂದರ್ ಸಿಂಗ್, ಸುಶೀಲ್ ಕಾಂಬ್ರೋಜ್ ನಿರೀಕ್ಷಿತ ಮಟ್ಟದಲ್ಲಿ ಆಡಲು ವಿಫಲವಾಗಿದ್ದು, ತಂಡಕ್ಕೆ ಹಿನ್ನಡೆ ಉಂಟುಮಾಡಿತು.

ಮುಕ್ತಾಯಕ್ಕೆ ಐದು ನಿಮಿಷಗಳಿರುವಾಗ 30-25ರಲ್ಲಿ ಮುನ್ನಡೆಯಲ್ಲಿದ್ದ ಡೆಲ್ಲಿ ಗೆಲುವು ಸುಲಭವಾಗುವಂತೆ ಕಂಡಿತು. ಆದರೆ ಬೆಂಗಾಲ್ ಆಟಗಾರರು ಮರುಹೋರಾಟ ಸಂಘಟಿಸಿ ಹಿನ್ನಡೆಯನ್ನು ಕಡಿಮೆ ಮಾಡುತ್ತ ಹೋದರು. ನಿತಿನ್ ಕುಮಾರ್ ಸೂಪರ್ ಟೆನ್ ಸಾಹಸ ಮಾಡಿದರೂ ತಂಡದ ಹಿನ್ನಡೆ ಅಂತಿಮವಾಗಿ ಮೂರು ಅಂಕಕ್ಕೆ ಇಳಿಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 35–22ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.



ಬೆಂಗಾಲ್ ವಾರಿಯರ್ಸ್ ಆಟಗಾರರ ಕೈಯಿಂದ ನುಣುಚಿಕೊಳ್ಳುವ ಯತ್ನದಲ್ಲಿ ದಬಾಂಗ್ ಡೆಲ್ಲಿ ರೇಡರ್

ಬಿಎಫ್‌ಸಿಗೆ ನಾರ್ತ್ ಈಸ್ಟ್ ಸವಾಲು ಇಂದು



ಸುನಿಲ್ ಚೆಟ್ರಿ

ಬೆಂಗಳೂರು: ಹಿಂದಿನ ಪಂದ್ಯದಲ್ಲಿ ಎದುರಾದ ಸೋಲಿನ ಆಘಾತದಿಂದ ಹೊರಬರುವ ಯತ್ನದಲ್ಲಿರುವ ಬಿಎಫ್‌ಸಿ ತಂಡ ಶುಕ್ರವಾರ ತವರಿನಲ್ಲಿ ನಡೆಯುವ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ತಂಡವನ್ನು ಎದುರಿಸಲಿದೆ.

ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಬೆಂಗಳೂರು ತಂಡ ಲೀಗ್‌ನಲ್ಲಿ ಐದು ಗೆಲುವು, ಒಂದು ಡ್ರಾ, ಒಂದು ಸೋಲಿನೊಡನೆ ಏಳು ಪಂದ್ಯಗಳಿಂದ 16 ಪಾಯಿಂಟ್ಸ್ ಸಂಗ್ರಹಿಸಿದೆ. ಸತತ ಆರು ಪಂದ್ಯಗಳನ್ನು ಗೆದ್ದು ಅಜೇಯವಾಗಿದ್ದ ಬೆಂಗಳೂರು ಎಫ್‌ಸಿ ತಂಡದ ಯಶಸ್ಸಿನ ಓಟಕ್ಕೆ ಭಾನುವಾರ ಎಫ್‌ಸಿ ಗೋವಾ ತಂಡ ತಡೆಹಾಕಿತ್ತು. ಮಡಗಾಂವ್‌ನಲ್ಲಿ ಆತಿಥೇಯರು 3–0 ಯಿಂದ ಗೆದ್ದಿದ್ದರು. ಆ ಹಿನ್ನಡೆ ಹೊರತಾಗಿಯೂ ಗೆರಾರ್ಡ್ ಜರಗೋಜಾ ತರಬೇತಿಯ ತಂಡ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಆದರೆ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಕಳೆದ ಪಂದ್ಯದಲ್ಲಿ ಒಡಿಶಾ ಎಫ್‌ಸಿ ವಿರುದ್ಧ ನಾರ್ತ್ ಈಸ್ಟ್ ತಂಡ 3–2 ಗೋಲುಗಳಿಂದ ಜಯಿಸಿತ್ತು. ಅಲ್ಲದೇ ಈ ಲೀಗ್‌ನಲ್ಲಿ ನಾರ್ತ್‌ಈಸ್ಟ್ ಒಟ್ಟು 17 ಗೋಲುಗನ್ನು ಬಾರಿಸಿದೆ. ಲೀಗ್‌ನಲ್ಲೇ ಅತಿ ಹೆಚ್ಚು ಗೋಲುಗಳನ್ನು ಗಳಿಸಿದ ತಂಡವೆನಿಸಿದೆ. ಬೆಂಗಳೂರು ಎಫ್‌ಸಿ 7 ಪಂದ್ಯಗಳಿಂದ 11 ಗೋಲು ಹೊಡೆದಿದೆ.

ನಾರ್ತ್ ಈಸ್ಟ್ ತಂಡ 7 ಪಂದ್ಯಗಳಿಂದ 3 ಗೆಲುವು ಮತ್ತು 2 ಡ್ರಾಗಳೊಂದಿಗೆ ಒಟ್ಟು 11 ಅಂಕ ಗಳಿಸಿ ಪಾಯಿಂಟ್ ಪಟ್ಟಿಯಲ್ಲಿ ಆರನೇ ಸ್ಥಾನ ಪಡೆದಿದೆ. ಆದರೆ ತವರಿನಿಂದ ಹೊರಗಿನ ಪಂದ್ಯಗಳಲ್ಲಿ ಅದರ ಪ್ರದರ್ಶನ ಹೇಳಿಕೊಳ್ಳುವಂತಿಲ್ಲ. ತವರಿನಿಂದಾಚೆ ಆಡಿದ ಕಡೆಯ 31 ಐಎಸ್‌ಎಲ್ ಪಂದ್ಯಗಳಲ್ಲಿ ಅದು ಎರಡು ಗೆದ್ದು, 9 ಡ್ರಾ ಮಾಡಿಕೊಂಡಿದೆ. 20 ಪಂದ್ಯಗಳಲ್ಲಿ ಸೋತಿದೆ.

ಬಿಎಫ್‌ಸಿ ಕಂಠೀರವ ಕ್ರೀಡಾಂಗಣದಲ್ಲಿ ಈ ಹಿಂದೆ ಆಡಿದ ಎಲ್ಲಾ ನಾಲ್ಕು ಪಂದ್ಯಗಳನ್ನು ಗೆದ್ದುಕೊಂಡಿದ್ದು ಮತ್ತೆ ಅಮೋಘ ಪ್ರದರ್ಶನದ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಸಂಕ್ಷಿಪ್ತ ಸುದ್ದಿ

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಹೈಬ್ರಿಡ್ ಮಾದರಿಗೆ ಪಾಕ್ ಸಿದ್ಧ?

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಆಯೋಜನೆಯ ವಿಷಯದಲ್ಲಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತನ್ನ ಬಿಗಿ ನಿಲುವು ಸಡಿಲಿಸಿ 'ಹೊಂದಾಣಿಕೆ' ಮಾಡಿಕೊಳ್ಳಲು ಮುಂದಾಗಿದೆ. ಟೂರ್ನಿಯನ್ನು 'ಹೈಬ್ರಿಡ್ ಮಾದರಿ'ಯಲ್ಲಿ ಆಯೋಜಿ ಸಲು ಮುಂದಾಗಲಿದೆ ಎನ್ನಲಾಗುತ್ತಿದೆ.

ಮುಂದಿನ ವರ್ಷ ಪಾಕಿಸ್ತಾನದಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ತನ್ನ ತಂಡ ಕಳುಹಿಸಲು ಭಾರತ ಸರ್ಕಾರವು ನಿರಾಸಕ್ತಿ ತೋರಿಸಿತ್ತು. ಭಾರತ ಮತ್ತು ಪಾಕ್ ದೇಶಗಳ ನಡುವಣ ರಾಜತಾಂತ್ರಿಕ ಭಿನ್ನಾಭಿಪ್ರಾಯವಿದೆ. ಅದರಿಂದಾಗಿ ಭಾರತ ತಂಡವು ಪಾಕ್‌ಗೆ ಹೋಗದಿರುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಭಾರತ ತಂಡವು ಆಡುವ ಪಂದ್ಯಗಳನ್ನು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಲ್ಲಿ ಆಯೋಜಿಸುವ ಕುರಿತು ಪಾಕ್ ಸಮ್ಮತಿಸುವ ಸಾಧ್ಯತೆ ದಟ್ಟವಾಗಿದೆ.

2023ರ ಏಷ್ಯಾ ಕಪ್ ಆಯೋಜನೆಯ ಸಂದರ್ಭದಲ್ಲಿಯೂ ಇಂತಹದೇ ಬಿಕ್ಕಟ್ಟು ಎದುರಾಗಿತ್ತು. ಆಗ ಪಿಸಿಬಿಯು ಹೈಬ್ರಿಡ್ ಮಾದರಿಗೆ ಒಪ್ಪಿತ್ತು. ಭಾರತ ತಂಡದ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಯೋಜಿಸಿತ್ತು.


ಮಂಗಳೂರು ಮ್ಯಾರಥಾನ್ 10ಕ್ಕೆ

ಮಂಗಳೂರು: 'ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಓಟಗಾರರು ಪಾಲ್ಗೊಳ್ಳಲಿರುವ 'ನೀವಿಯಸ್ ಮಂಗಳೂರು ಮ್ಯಾರಥಾನ್' ನ.10ರಂದು ನಗರದಲ್ಲಿ ನಡೆಯಲಿದೆ. ಮ್ಯಾರಥಾನ್‌ನಲ್ಲಿ 5,000ಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ' ಎಂದು ಮಂಗಳೂರು ರನ್ನರ್ಸ್ ಕ್ಲಬ್‌ನ ರೇಸ್ ನಿರ್ದೇಶಕ ಅಭಿಲಾಷ್ ಡೊಮಿನಿಕ್ ಹೇಳಿದರು.

8ರಿಂದ 80 ವರ್ಷ ವಯೋಮಾನದವರಿಗೆ ಭಾಗವಹಿಸಲು ಅವಕಾಶವಿದೆ. ಮುಂಜಾನೆ 4 ಗಂಟೆಗೆ ಪ್ರಾರಂಭವಾಗುವ ಮ್ಯಾರಥಾನ್‌ನಲ್ಲಿ ಸ್ಥಳೀಯರೊಂದಿಗೆ, ಭಾರತದ 18 ರಾಜ್ಯಗಳ ಹಾಗೂ ಜಪಾನ್, ಇಥಿಯೋಪಿಯಾ, ಕೆನ್ಯಾ, ಸ್ವಿಟ್ಜರ್ಲೆಂಡ್, ಸ್ಪೇನ್ ದೇಶಗಳ ಓಟಗಾರರು ಭಾಗಿಯಾಗಲಿದ್ದಾರೆ ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಫುಲ್ ಮ್ಯಾರಥಾನ್ (42.195 ಕಿ.ಮೀ), 20 ಮೈಲರ್, ಹಾಫ್ ಮ್ಯಾರಥಾನ್ (21.097 ಕಿ.ಮೀ), 10ಕೆ, 5ಕೆ ಜೊತೆಗೆ ಎರಡು ಕಿ.ಮೀ ದೂರದ 'ಗಮ್ಮತ್ ರನ್' ಮತ್ತು ವಿದ್ಯಾರ್ಥಿಗಳ ರನ್ ಇರಲಿದೆ. ವಿಜೇತರಿಗೆ ಒಟ್ಟು ₹12 ಲಕ್ಷ ಮೊತ್ತದ ಬಹುಮಾನ ನೀಡಲಾಗುವುದು ಎಂದರು.

ಎಂಟರ ಘಟ್ಟಕ್ಕೆ ಕಿರಣ್ ಜಾರ್ಜ್



ಇಕ್ಸಾನ್ ಸಿಟಿ (ಕೊರಿಯಾ), (ಪಿಟಿಐ): ಅನಿರೀಕ್ಷಿತ ಫಲಿತಾಂಶದಲ್ಲಿ ಮೂರನೇ ಶ್ರೇಯಾಂಕದ ಆಟಗಾರ ಚಿ ಯು ಜೆನ್ ಅವರಿಗೆ ಗುರುವಾರ ಆಘಾತ ನೀಡಿದ ಭಾರತದ ಕಿರಣ್ ಜಾರ್ಜ್ ಅವರು ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಮೂರು ಗೇಮ್‌ಗಳನ್ನು ಕಂಡ ಎರಡನೇ ಸುತ್ತಿನ ಪಂದ್ಯದಲ್ಲಿ ಕಿರಣ್ 21–7, 19–21, 21–17 ರಿಂದ ವಿಶ್ವ ಕ್ರಮಾಂಕದ 31ನೇ ಸ್ಥಾನದಲ್ಲಿರುವ ಚೀನಾ ತೈಪೆ ಆಟಗಾರನನ್ನು ಹಿಮ್ಮೆಟ್ಟಿಸಿದರು. ಪಂದ್ಯ ಒಂದೂಕಾಲು ಗಂಟೆ ನಡೆಯಿತು.

ವಿಶ್ವ ಕ್ರಮಾಂಕದಲ್ಲಿ 44ನೇ ಸ್ಥಾನದಲ್ಲಿರುವ ಕಿರಣ್ ಎಂಟರ ಘಟ್ಟದ ಪಂದ್ಯದಲ್ಲಿ ಜಪಾನ್‌ನ ತಕುಮಾ ಒಬಯಾಶಿ ವಿರುದ್ಧ ಆಡಲಿದ್ದಾರೆ.

ಕಿರಣ್, ಈ ಟೂರ್ನಿಯಲ್ಲಿ ಭಾಗವಹಿಸಿರುವ ಭಾರತದ ಏಕೈಕ ಆಟಗಾರನಾಗಿದ್ದಾರೆ.